## ಅಧ್ಯಾಯ-೧೬

# ಇತರ ಸಮಾಜ ಸೇವಾ ಸೌಲಭ್ಯಗಳು

ಸ್ವಾತಂತ್ರ್ಯಾನಂತರದ ದಶಕಗಳಲ್ಲಿ "ಸುಖಿರಾಜ್ಯದ" ಕನಸನ್ನು ನನಸು ಮಾಡುವ ದಿಶೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಶಿಕ್ಷಣ ಮತ್ತು ಆರೋಗ್ಯ ಮುಂತಾದ ಮೂಲಭೂತ ಸೌಲಭ್ಯಗಳ ಜೊತೆಗೆ ಅನೇಕ ಸಮಾಜ ಸೇವಾ ಚಟುವಟಿಕೆಗಳನ್ನು ಕೈಗೊಂಡಿವೆ. ವ್ಯಕ್ತಿಗಳ, ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದು ಈ ಕಾರ್ಯ ಚಟುವಟಿಕೆಗಳ ಮುಖ್ಯ ಉದ್ದೇಶವಾಗಿದೆ. ಸರ್ಕಾರವೇ ಅಲ್ಲದೆ ಇತರ ಅನೇಕ ಸ್ವಯಂ ಸೇವಾ ಮತ್ತು ಖಾಸಗೀ ಸಂಸ್ಥೆಗಳು, ಇಂತಹ ಚಟುವಟಿಕೆಗಳನ್ನು ನಡೆಸುತ್ತಿವೆ. ಈ ಅಧ್ಯಾಯದಲ್ಲಿ ಸಮಾಜದ ಕಾರ್ಮಿಕ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರು, ಮಹಿಳೆಯರು ಮತ್ತು ಮಕ್ಕಳ ಕಲ್ಯಾಣ, ಅಂಗವಿಕಲರ ಕಲ್ಯಾಣ ಹಾಗೂ ಸ್ವಯಂ ಸೇವಾ ಸಂಸ್ಥೆಗಳು - ಇವೇ ಮೊದಲಾದ ಚಟುವಟಿಕೆಗಳ ಬಗ್ಗೆ ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

**ಕಾರ್ಮಿಕರ ಕಲ್ಯಾಣ**

ಕಾರ್ಮಿಕ ಕಲ್ಯಾಣದ ಚಟುವಟಿಕೆಗಳು ಸಹಜವಾಗಿ ಸೇವಾ ಭದ್ರತೆ, ಸೇವಾ ನಿಯಮಗಳ ರಕ್ಷಣೆ, ಸುಧಾರಣೆ ಹಾಗೂ ಅವರ ಕಲ್ಯಾಣ ಸಾಧಿಸುವ ಚಟುವಟಿಕೆಗಳಿಗೆ ಸಂಬಂಧಿಸಿವೆ. ಸ್ವಾತಂತ್ರ್ಯ ಪೂರ್ವದ ದಿನಗಳಲ್ಲಿ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿ ಸೀಮಿತವಾಗಿದ್ದುದರಿಂದ ಕಾರ್ಮಿಕ ಸಂಘಟನೆಯು ಸಹಾ ಸೀಮಿತವಾಗಿತ್ತು. ಗುಲಬರ್ಗಾದಲ್ಲಿ ಎಂ.ಎಸ್.ಕೆ. ಮಿಲ್ ಬಟ್ಟೆ ಗಿರಣಿಯಲ್ಲಿ ಮಗದುಂ ಮೊಹಿಮೊದ್ದೀನ್ ನೇತೃತ್ವದ ಕಾರ್ಮಿಕ ಸಂಘಟನೆ ೧೯೪೨ರ ಸುಮಾರಿಗೆ ರೂಪು ತಾಳಿತ್ತು. ೧೯೪೬-೪೭ ರಲ್ಲಿ ಕನಿಷ್ಠ ವೇತನ ಮತ್ತು ಇತರ ಸೌಲಭ್ಯಗಳ ಸಲುವಾಗಿ ಕಾರ್ಮಿಕರು ಸುಮಾರು ಒಂದು ತಿಂಗಳ ಉಪವಾಸ ಮುಷ್ಕರವನ್ನು ನಡೆಸಿದರು. ಈ ಉಪವಾಸ ಮುಷ್ಕರದಲ್ಲಿ ಮಾನ್‌ಸಿಂಗ್ ಎಂಬ ಕಾರ್ಮಿಕ ಪ್ರಾಣವನ್ನು ತೆತ್ತರು. ಆಗ ನಗರದ ಸುಪ್ರಸಿದ್ಧ ನ್ಯಾಯವಾದಿ ಅಬ್ದುಲ್ ಹಕೀಮ್ ತಿಮ್ಮಾಪುರಿಯವರು ಮಧ್ಯಸ್ಥಿಕೆ ವಹಿಸಿದ್ದರಿಂದ ಮುಷ್ಕರ ಅಂತ್ಯಗೊಂಡಿತ್ತು. ಇದರ ಫಲಿತಾಂಶ ತಿಮ್ಮಪುರಿ ಅವಾರ್ಡ್ ಎಂದು ಹೆಸರು ಪಡೆದು ಸಂಬಳ ಹೆಚ್ಚಿ ಕಾರ್ಮಿಕರಿಗೆ ಕೆಲವು ಸೌಲಭ್ಯಗಳು ದೊರೆತವು.

ಆ ಕಾಲದಲ್ಲಿ ಕಾರ್ಮಿಕ ಕಾನೂನುಗಳು ಕಡಿಮೆ ಇದ್ದು, ಅವುಗಳ ಬಳಕೆ ಹೆಚ್ಚು ಕ್ರಿಯಾಶೀಲವಾಗಿರಲಿಲ್ಲ. ಉದ್ಯೋಗದ ವಾತಾವರಣ ಮತ್ತು ಸೇವಾ ನಿಯಮಗಳೆಲ್ಲಾ ಊಳಿಗಮಾನ್ಯ ಪದ್ಧತಿಯಂತೆಯೇ ಇದ್ದವು. ಸ್ವಾತಂತ್ರ್ಯ

ಪೂರ್ವದಲ್ಲಿ ಜಿಲ್ಲೆಯಲ್ಲಿ ಪ್ರಜಾತಂತ್ರ ಸಮಾಜವಾದಿ ಕಾರ್ಮಿಕ ಸಂಘ ಸ್ಥಾಪನೆಯಾಗಿತ್ತು. ಈ ಕಾರ್ಮಿಕ ಸಂಘಗಳ ಮೂಲಕ ಕಾರ್ಮಿಕರ ಹಿತರಕ್ಷಣೆ ಮಾಡಲು ಹಾಗೂ ಕಾರ್ಮಿಕ ವರ್ಗಕ್ಕೂ ಮತ್ತು ಕೈಗಾರಿಕೆಗಳ ವರ್ಗಕ್ಕೂ ಉತ್ತಮ ಬಾಂಧವ್ಯವನ್ನು ಬೆಳೆಸಲು ಹಲವಾರು ಮುಖಂಡರು ಶ್ರಮಿಸಿರುವುದಾಗಿ ತಿಳಿದು ಬಂದಿದೆ. ಆ ಸಂದರ್ಭದಲ್ಲಿ ಮಗದುಂ ಮೊಹಿಯುದ್ದೀನ್, ಶ್ರೀನಿವಾಸ ಗುಡಿ, ರಾಜ ಬಹದ್ದೂರ್ ಗೌರ್, ಗುಲಾಬ್ ನಬಿ ಆಜಾದ್, ಗೋಪಾಲಸ್ವಾಮಿ, ಮೀನಾಕ್ಷಿ ಸಾನೆ ಮುಂತಾದವರನ್ನು ಹೆಸರಿಸಬಹುದಾಗಿದೆ.

ಸ್ವಾತಂತ್ರ್ಯ ನಂತರದಲ್ಲಿ ೧೯೫೧ರ ಈಚೆಗೆ ಕಾರ್ಮಿಕರು ಹೆಚ್ಚು ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಹೋರಾಟ ನಡೆಸಿದ್ದು ಇದರಿಂದ ಹಲವಾರು ಕಾರ್ಮಿಕ ಮುಷ್ಕರಗಳು ಜಿಲ್ಲೆಯಲ್ಲಿ ಉಂಟಾದವು. ೧೯೫೨-೫೩ ರಲ್ಲಿ ಕಾರ್ಮಿಕ ಮುಷ್ಕರವು ತಲೆದೋರಿ ಪ್ರತಿ ಕಾರ್ಮಿಕನ ಕೆಲಸದ ವೇಳೆ ದಿನಕ್ಕೆ ೧೬ ಗಂಟೆಯಿಂದ ೧೨ ಗಂಟೆಗೆ ಇಳಿಮುಖವಾಯಿತು. ಈ ಮುಷ್ಕರಕ್ಕೆ ವೀರೇಂದ್ರ ಪಾಟೀಲ್ ಹಾಗೂ ಮುಗದುಂ ಮೊಹಿಯುದ್ದೀನ್ ಮುಖಂಡರಾಗಿ ಶ್ರಮಿಸಿದರು. ೧೯೫೭ ರಲ್ಲಿ ವೇತನ ಹೆಚ್ಚಳಕ್ಕಾಗಿ ನಡೆದ ಎರಡು ತಿಂಗಳ ಮುಷ್ಕರದಿಂದ ಎಂ.ಎಸ್.ಕೆ. ಮಿಲ್ ಬಟ್ಟೆ ಗಿರಣಿಗೆ ಬೀಗ ಮುದ್ರೆಯನ್ನು ಹಾಕಲಾಯಿತು. ೧೯೫೮ ರಲ್ಲಿ ಕಾರ್ಖಾನೆಯನ್ನು ಸರ್ಕಾರದ ವಶಕ್ಕೆ ಕೊಡಲಾಗಿ ಸುಮಾರು ನಾಲ್ಕು ವರ್ಷಗಳ ಕಾಲ ಸರ್ಕಾರದ ವತಿಯಿಂದ ನಡೆಸಲಾಯಿತು. ೧೯೬೬ ರಲ್ಲಿ ಕಾರ್ಖಾನೆ ಎರಡು ವರ್ಷಗಳ ಕಾಲ ಮುಚ್ಚಲಾಯಿತು. ರಾಜ್ಯ ಸರ್ಕಾರವು ಕಾರ್ಖಾನೆಯಿಂದಾಗಿ ಭಾರಿ ನಷ್ಟವನ್ನು ಭರಿಸಲಾಗಲಿಲ್ಲ. ೧೯೬೮ ರಲ್ಲಿ ರಾಜ್ಯ ಸರ್ಕಾರವು ಖಾಸಗೀ ಆಡಳಿತವಾದ "ಕೆಂಗೇರಿವಾಲ್ ಗ್ರೂಪ್"ಗೆ ಮಿಲ್ಲನ್ನು ನೀಡಿತು. ಇದು ಮಾರ್ಚ್ ೧೯೭೧ರವರೆಗೆ ನಡೆಸಿತು. ೧೯೭೧ರಲ್ಲಿ ಕಾರ್ಖಾನೆ ರಾಷ್ಟ್ರೀಕೃತವಾಗಿ, "ನ್ಯಾಷನಲ್ ಟೆಕ್ಸ್‌ಟೈಲ್ಸ್ ಕಾರ್ಪೊರೇಷನ್"ಗೆ ವಿಲೀನಗೊಂಡಿತು. ೧೯೭೯ ರಲ್ಲಿ ತುಟ್ಟಿಭತ್ಯದ ಹೆಚ್ಚಳಕ್ಕಾಗಿ ಒಂದು ತಿಂಗಳ ಮುಷ್ಕರ ನಡೆಯಿತು. ೧೯೮೮ರ ಜೂನ್ ಆರರಿಂದ ಕಾರ್ಖಾನೆಗೆ ಬೀಗ ಮುದ್ರೆ ಹಾಕಲಾಯಿತು. ಇದಲ್ಲದೆ ಕಾರ್ಖಾನೆಯ ಕಾರ್ಮಿಕರ ಸಂಖ್ಯೆಯನ್ನು ಇಳಿಮುಖಗೊಳಿಸಲಾಯಿತು. ೧೯೯೫ ರಲ್ಲಿ ಒಟ್ಟು ಕಾರ್ಮಿಕರ ಸಂಖ್ಯೆ ೧೦೨೮ ಇದ್ದಿತು.

ಷಹಬಾದ್‌ನ ಎ.ಸಿ.ಸಿ. ಕಾರ್ಮಿಕರ ಸಂಘ ೧೯೪೬ ರಲ್ಲಿ ಪ್ರಾರಂಭವಾಯಿತು. ಇದರ ಮುಖಂಡರು ಮಗದುಂ ಮೊಹಿಯುದ್ದೀನ್ ಆಗಿದ್ದರು. ೧೯೪೬ ರಲ್ಲಿ ಎ.ಸಿ.ಸಿ. ಸಿಮೆಂಟ್ ಕಾರ್ಖಾನೆಯ ಕಾರ್ಮಿಕರು ಹನ್ನೆರಡು ದಿನಗಳ ಮುಷ್ಕರ ಮಾಡಿದ ಫಲಿತಾಂಶದಿಂದ ಗಳಿಕೆ ರಜೆ, ಅನಾರೋಗ್ಯ ರಜೆ (ಸಿಕ್‌ಲೀವ್) ಹಾಗೂ ಹೆರಿಗೆ ಸೌಲಭ್ಯ ರಜೆಗಳನ್ನು ಕಾರ್ಮಿಕರು ಪಡೆಯುವಂತಾಯಿತು.

೧೯೫೨ ರಲ್ಲಿ ೪೮೮ ದಿನಗಳ ಮುಷ್ಕರಕ್ಕೆ ಕಾರಣವೆಂದರೆ ಎ.ಸಿ.ಸಿ. ಕಾರ್ಮಿಕರ ಸಂಘವನ್ನು ಕಾರ್ಖಾನೆ ಆಡಳಿತ ವರ್ಗ ಮಾನ್ಯತೆ ನೀಡಬೇಕೆಂದು ಒತ್ತಾಯ ಪಡಿಸಿದರು. ಇದರಿಂದ ಇಪ್ಪತ್ನಾಲ್ಕು ಕಾರ್ಮಿಕರನ್ನು ವಜಾ ಮಾಡಲಾಯಿತು. ಈ ಮುಷ್ಕರಕ್ಕೆ ಸತ್ಯನಾರಾಯಣಶೆಟ್ಟಿ ಮತ್ತು ಗೋಪಾಲ ಸ್ವಾಮಿಯವರು ಮುಖಂಡರಾಗಿದ್ದರು. ಪ್ರಸ್ತುತ ೧೯೯೫ ರಲ್ಲಿ ಕಾರ್ಮಿಕ ಸಂಘದಲ್ಲಿ ೭೦೦ ಸದಸ್ಯರಿದ್ದಾರೆ. ದಿನಾಂಕ ೨೧.೯.೮೬ ರಲ್ಲಿ ಎ.ಐ.ಟಿ.ಯು.ಸಿ. ಗುಲಬರ್ಗಾ ಜಿಲ್ಲಾ ಮೊದಲನೇ ಸಮ್ಮೇಳನ ಷಹಬಾದ್‌ನಲ್ಲಿ ನಡೆದಾಗ ಜಿಲ್ಲೆಯ ಎಲ್ಲಾ ಪ್ರಮುಖ ಕಾರ್ಮಿಕ ಸಂಘಗಳು ಭಾಗವಹಿಸಿದ್ದವು. ಜಿಲ್ಲೆಯಲ್ಲಿ ಕಾರ್ಮಿಕ ಕಲ್ಯಾಣದ ಚಟುವಟಿಕೆಗಳನ್ನು ವ್ಯವಸ್ಥಿತವಾಗಿ ಕೈಗೊಳ್ಳಲು ಕಾರ್ಮಿಕ ಇಲಾಖೆಯ ಅಧೀನತೆಯಲ್ಲಿ ಹಿರಿಯ ಪರಿವೀಕ್ಷಕರು ಕಲ್ಯಾಣ ಕಾರ್ಯಕ್ರಮಗಳ ಮೇಲ್ವಿಚಾರಣಾ ಕಾರ್ಯ ನಿರ್ವಹಿಸುತ್ತಾರೆ. ಇಲಾಖೆಯು ಸುಮಾರು ೨೫ಕ್ಕಿಂತ ಹೆಚ್ಚು ಕೇಂದ್ರ ಮತ್ತು ರಾಜ್ಯ ಕಾರ್ಮಿಕ ಕಾಯಿದೆಗಳನ್ನು ಜಾರಿಯಲ್ಲಿ ತರುವ ಹೊಣೆಯನ್ನು ಹೊತ್ತಿರುವುದು. ಅವುಗಳಲ್ಲೂ ಅತ್ಯಂತ ಪ್ರಮುಖವಾದವುಗಳೆಂದರೆ :

೧೯೪೮ರ ಕನಿಷ್ಠ ವೇತನ ಕಾಯ್ದೆ, ೧೯೬೫ರ ಬೋನಸ್ ಪಾವತಿ ಕಾಯ್ದೆ, ೧೯೬೫ರ ಕರ್ನಾಟಕ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ, ೧೯೭೫ರ ಗ್ರಾಚ್ಯುಟಿ ಪಾವತಿ ಕಾಯ್ದೆ ೧೯೭೬ರ ಸಮಾನ ವೇತನ ಅಧಿನಿಯಮ ಮತ್ತು ೧೯೮೬ ಬಾಲ ಕಾರ್ಮಿಕರ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ ಮುಂತಾದವುಗಳು.

೧೯೪೭ರ ಕೈಗಾರಿಕಾ ವಿವಾದಗಳ ಕಾಯ್ದೆಗಳ ಪ್ರಕಾರ ಇಲಾಖೆಯು ಕೈಗಾರಿಕೆಗಳಲ್ಲಿ ಉಂಟಾಗಬಹುದಾದ ಮುಷ್ಕರ, ಬೀಗ ಮುದ್ರೆ ಮತ್ತು ಹಂಗಾಮಿ ವಿಸರ್ಜನೆ ಇವೇ ಮುಂತಾದ ಕೈಗಾರಿಕಾ ಅಶಾಂತಿಗಳ ಸಂದರ್ಭದಲ್ಲಿ ತಕ್ಷಣ ಮಧ್ಯ

ಪ್ರವೇಶಿಸಿ ಕಾರ್ಮಿಕರಿಗೆ ಸಿಗಬಹುದಾದ ಸವಲತ್ತುಗಳನ್ನು ಒದಗಿಸುವುದೇ ಅಲ್ಲದೆ ಕೈಗಾರಿಕಾ ಶಾಂತಿ ಮತ್ತು ಸೌಹಾರ್ದತೆಗಳನ್ನು ಕಾಪಾಡಲು ಯತ್ನಿಸುತ್ತದೆ. ೧೯೯೨-೯೩, ೧೯೯೩-೯೪, ೧೯೯೪-೯೫ನೇ ಸಾಲುಗಳಲ್ಲಿ ವಿವಿಧ ಕಾಯ್ದೆಗಳ ಪ್ರಕಾರ ತಲೆದೋರಿದ ವಿವಾದಗಳ ವಿವರಗಳನ್ನು ಈ ಕೆಳಕಂಡ ಪಟ್ಟಿಗಳಲ್ಲಿ ಸೂಚಿಸಲಾಗಿದೆ.

**ಕೋಷ್ಟಕ ೧೬.೧**

೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ ರಲ್ಲಿ ಉಂಟಾದ ಕಾರ್ಮಿಕ ವಿವಾದಗಳು.

| ವರ್ಷ | ಕಾಯ್ದೆಗಳ ಹೆಸರು | ದಾಖಲಾದ ವಿವಾದಗಳು | ಇತ್ಯರ್ಥವಾದ ವಿವಾದಗಳು |
|---|---|---|---|
| ೧೯೯೨-೯೩ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೪೬ | ೩೧ |
| | ಔದ್ಯಮಿಕ ವಿವಾದ ಕಾಯ್ದೆ | ೧೦ | ೦೫ |
| | ಕನಿಷ್ಠ ವೇತನ ಕಾಯ್ದೆ | ೦೫ | ೦೩ |
| | ತಕರಾರು ಅರ್ಜಿಗಳು | ೦೬ | ೦೨ |
| | | ೬೭ | ೪೧ |
| ೧೯೯೩-೯೪ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೬೮ | ೪೧ |
| | ಔದ್ಯಮಿಕ ವಿವಾದ ಕಾಯ್ದೆ | ೧೧ | ೦೩ |
| | ಕನಿಷ್ಟ ವೇತನ ಕಾಯ್ದೆ | ೦೭ | ೦೩ |
| | ತಕರಾರು ಅರ್ಜಿಗಳು | ೦೯ | ೦೨ |
| | | ೯೫ | ೪೯ |
| ೧೯೯೪-೯೫ | ಕಾರ್ಮಿಕ ನಷ್ಟ ಪರಿಹಾರ ಕಾಯ್ದೆ | ೪೫ | ೩೮ |
| | ಔದ್ಯಮಿಕ ವಿವಾದ ಕಾಯ್ದೆ | ೨೪ | ೨೧ |
| | ಕನಿಷ್ಟ ವೇತನ ಕಾಯ್ದೆ | ೧೮ | ೦೬ |
| | ತಕರಾರು ಅರ್ಜಿಗಳು | ೦೮ | ೦೪ |
| | | ೯೫ | ೬೯ |

ಆಧಾರ: ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಕಾರ್ಮಿಕ ಕಲ್ಯಾಣ ಇಲಾಖೆ, ಗುಲಬರ್ಗಾ.

**ಕೋಷ್ಟ ೧೬.೨**

ಕನಿಷ್ಠ ವೇತನ ಕಾಯ್ದೆಯಲ್ಲಿ ಬರುವ ಉದ್ದಿಮೆಗಳ ಸಂಖ್ಯೆ, ವಾಣಿಜ್ಯ ಸಂಸ್ಥೆಗಳ ಸಂಖ್ಯೆ ಮತ್ತು ಕಾರ್ಮಿಕರ ಸಂಖ್ಯೆ

| ವರ್ಷ | ಉದ್ದಿಮೆಗಳ ಸಂಖ್ಯೆ | ಒಟ್ಟು ಸಂಸ್ಥೆಗಳ ಸಂಖ್ಯೆ | ಒಟ್ಟು ಕಾರ್ಮಿಕರ ಸಂಖ್ಯೆ |
|---|---|---|---|
| ೧೯೯೨-೯೩ | ೨೪ | ೬೬೩೦ | ೧೪೪೪೧ |
| ೧೯೯೩-೯೪ | ೨೩ | ೬೪೬೩ | ೧೧೩೦೬ |
| ೧೯೯೪-೯೫ | ೨೩ | ೯೩೯೬ | ೨೮೭೦೮ |

**ಕೋಷ್ಟಕ ೧೬.೩**

೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲಿನಲ್ಲಿ ಅಂಗಡಿಗಳ ಮತ್ತು ವಾಣಿಜ್ಯ ಸಂಸ್ಥೆಗಳ ಹೊಸ ನೊಂದಣಿ ಹಾಗೂ ನವೀಕರಣದಿಂದ ಸಂದಾಯವಾದ ಹಣದ ವಿವರಗಳನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ವರ್ಷ | ಹೊಸ ನೊಂದಣಿ | ಸಂದಾಯವಾದ ಹಣ (ರೂ.ಗಳಲ್ಲಿ) | ನವೀಕರಣದಿಂದ ಬಂದ ಹಣ (ರೂ.ಗಳಲ್ಲಿ) | ವರ್ಷದಲ್ಲಿ ಸಂದಾಯ ವಾದ ಒಟ್ಟು ಹಣ (ರೂ. ಗಳಲ್ಲಿ) |
|---|---|---|---|---|
| ೧೯೯೨-೯೩ | ೫೧೦ | ೨೩೩೨೦ | ೧೭೪೧೬೦ | ೧೯೭೪೮೦ |
| ೧೯೯೩-೯೪ | ೧೩೫೬ | ೧೭೦೦೦ | ೨೦೦೭೬೦ | ೨೨೭೭೬೦ |
| ೧೯೯೪-೯೫ | ೪೪೧೧ | ೨೮೦೦೦ | ೨೬೭೪೧೦ | ೨೯೫೪೧೦ |

ಆಧಾರ : ಜಿಲ್ಲಾ ಕಾರ್ಮಿಕ ಅಧಿಕಾರಿಗಳು, ಗುಲಬರ್ಗಾ.

೧೯೨೩ರ ಕಾರ್ಮಿಕ ಪರಿಹಾರ ಕಾಯ್ದೆಯ ಪ್ರಕಾರ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರು ಆಕಸ್ಮಿಕ ಕಾರಣ ಅಥವಾ ಅಂಗ ಹೀನತೆಗೊಳಗಾದವರಿಗೆ ಪರಿಹಾರ ಧನವನ್ನು ನೀಡಲಾಗುವುದು. ೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲಿನಲ್ಲಿ ಫಲಾನುಭವಿಗಳ ಸಂಖ್ಯೆ ಮತ್ತು ಪರಿಹಾರ ಧನವನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೪**

| ವರ್ಷ | ತಾತ್ಕಾಲಿಕ ಅಂಗ ನ್ಯೂನತೆ | ಶಾಶ್ವತ ಅಂಗನ್ಯೂನತೆ (ರೂ.ಗಳಲ್ಲಿ) | ಆಕಸ್ಮಿಕ ಮರಣ (ರೂ.ಗಳಲ್ಲಿ) | ಒಟ್ಟು ಪರಿಹಾರ ಧನ (ರೂ.ಗಳಲ್ಲಿ) |
|---|---|---|---|---|
| ೧೯೯೨-೯೩ | -ಇಲ್ಲ- | ೫,೬೫,೬೮೦ (೬ ಪ್ರಕರಣಗಳಲ್ಲಿ) | ೯,೮೯,೪೮೭ (೫ ಪ್ರಕರಣಗಳಲ್ಲಿ) | ೧೫,೫೫,೧೬೭ |
| ೧೯೯೩-೯೪ | -ಇಲ್ಲ- | ೫,೦೨,೯೬೦ (೧೨ ಪ್ರಕರಣಗಳಲ್ಲಿ) | ೧೬,೨೨,೯೪೩ (೨೪ ಪ್ರಕರಣಗಳಲ್ಲಿ) | ೨೧,೨೫,೯೦೩ |
| ೧೯೯೪-೯೫ | -ಇಲ್ಲ- | ೩,೩೬,೯೬೦ (೭ ಪ್ರಕರಣಗಳಲ್ಲಿ) | ೧೧,೩೫,೫೪೮ (೯ ಪ್ರಕರಣಗಳಲ್ಲಿ) | ೧೪,೭೧,೬೪೭ |

೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ಕೈಗಾರಿಕಾ ವಿವಾದ ಕಾಯ್ದೆಯ ಪ್ರಕಾರ ಹಂಗಾಮಿ ವಿಸರ್ಜನೆ (ಲೇ ಆಫ್) ಹಾಗೂ ಬೀಗ ಮುದ್ರೆಗಳಾಗಿರುವ ಯಾವುದೇ ಪ್ರಕರಣಗಳು ವರದಿಯಾಗಿಲ್ಲ. ಜಿಲ್ಲೆಯಲ್ಲಿ ಬಾಯ್ಲರುಗಳ ಹಿರಿಯ ಪರಿವೀಕ್ಷಕರ ಅಧೀನತೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ನೊಂದಾಯಿಸಲ್ಪಟ್ಟ ಬಾಯ್ಲರುಗಳು, ಎಕನಾಮೈಜರುಗಳು ಮತ್ತು ಹಬೆ ಕೊಳವೆಗಳ ವಿವರಗಳ ಪಟ್ಟಿಯನ್ನು ನೀಡಲಾಗಿದೆ.

**ಕೋಷ್ಟಕ ೧೬.೫**

| ವರ್ಷ | ನೊಂದಾಯಿತ ಬಾಯ್ಲರುಗಳು | ನೊಂದಾಯಿತ ಎಕನಾಮೈಜರುಗಳು | ನೊಂದಾಯಿತ ಹಬೆ ಕೊಳವೆಗಳು |
|---|---|---|---|
| ೧೯೯೨-೯೩ | ೪೩ | ೦೮ | ೧೩ |
| ೧೯೯೩-೯೪ | ೪೨ | ೦೮ | ೧೩ |
| ೧೯೯೪-೯೫ | ೪೨ | ೦೮ | ೧೩ |

೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ಬಾಯ್ಲರುಗಳಿಗೆ ಎಕನಾಮೈಜರುಗಳಿಗೆ ಹಾಗೂ ಹಬೆ ಕೊಳವೆಗಳಿಗಾಗಿ ಸಂದಾಯವಾದ ಶುಲ್ಕದ ಪಟ್ಟಿಯನ್ನು ನೀಡಲಾಗಿದೆ.

**ಕೋಷ್ಟಕ ೧೬.೬**

| ವರ್ಷ | ಬಾಯ್ಲರುಗಳಿಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಎಕನಾಮೈಜರುಗಳಿಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಹಬೆ ಕೊಳವೆಗೆ ಸಂದಾಯವಾದ ಶುಲ್ಕ (ರೂ.ಗಳಲ್ಲಿ) | ಬಾಯ್ಲರುಗಳ ಬಿಡಿ ಭಾಗಗಳ ತಯಾರಿಕೆಯ ಪರಿವೀಕ್ಷಣೆಗೆ ಸಂದಾಯವಾದ ಶುಲ್ಕ (ರೂ. ಗಳಲ್ಲಿ) |
|---|---|---|---|---|
| ೧೯೯೨-೯೩ | ೮,೭೬೦ | ಇಲ್ಲ | ೧೨,೯೮೦ | ೩೮,೨೦೦ |
| ೧೯೯೩-೯೪ | ೮,೯೨೦ | ೨,೬೮೦ | ೧೩,೦೬೦ | ೧,೦೩,೮೫೦ |
| ೧೯೯೪-೯೫ | ೨೪,೭೮೦ | ಇಲ್ಲ | ೧೩,೧೪೦ | ೮೫೦ |

**ಕಾರ್ಮಿಕ ಸಂಘಟನಾ ಚಳವಳಿ**

೧೯೪೦ವರೆಗೆ ಕಾರ್ಮಿಕ ಚಳವಳಿ ಕೇವಲ ಬಟ್ಟೆ ಗಿರಣಿಗಳಿಗೆ ಮಾತ್ರ ಸೀಮಿತವಾಗಿತ್ತು. ಜಿಲ್ಲೆಯಲ್ಲೇ ದೊಡ್ಡ ಉದ್ಯಮವಾದ ಎಂ.ಎಸ್.ಕೆ. ಮಿಲ್ ಬಟ್ಟೆ ಗಿರಣಿ ಉದಯವಾಗಿ, ಎರಡನೇ ಮಹಾಯುದ್ಧದ ಕಾಲದಲ್ಲಿ ಮತ್ತು ಅನಂತರವೂ ಈ ಕ್ಷೇತ್ರದಲ್ಲಿ ಕಾರ್ಮಿಕ ಚಟುವಟಿಕೆಗಳು ತಡವಾಗಿ ಸಂಘಟಿಸಲ್ಪಟ್ಟವು. "ಕ್ವಿಟ್ ಇಂಡಿಯಾ" ಚಳವಳಿಯ ಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ಗುಲಬರ್ಗಾ ಹಾಗೂ ಇತರ ಕೈಗಾರಿಕಾ ಕೇಂದ್ರಗಳಲ್ಲಿ ಕಾರ್ಮಿಕ ಮುಷ್ಕರಗಳು ತಲೆದೊರಿದ್ದುವಲ್ಲದೇ, ಮುಷ್ಕರಗಳು ಹಲವಾರು ದಿನಗಳು ಮುಂದುವರಿದರೂ ತಮ್ಮ ಒಕ್ಕೂಟದ ಬಗ್ಗೆ ಅನೇಕ ಕಾರ್ಮಿಕರ ಮನಸ್ಸಿನಲ್ಲಿ ಅಧೈರ್ಯ ಮೂಡಲಿಲ್ಲ. ೧೯೫೧ ರಲ್ಲಿ ಹೊರಗಿನ ಮುಖಂಡತ್ವದಿಂದ ಒಕ್ಕೂಟ ಮತ್ತೆ ತಲೆ ಎತ್ತಿತ್ತು. ೧೯೫೭ರಲ್ಲಿ ಎರಡು ತಿಂಗಳ ಮುಷ್ಕರದಿಂದ ಎಂ.ಎಸ್.ಕೆ. ಮಿಲ್ಸ್ ಬಟ್ಟೆ ಗಿರಣಿ ಬೀಗ ಮುದ್ರೆಯ ಸಲುವಾಗಿ ಕಾರ್ಮಿಕರ ಸಂಘಟನೆಯ ಭದ್ರತೆ ಬಲಗೊಂಡಿತು. ಸ್ವಾತಂತ್ರ್ಯದ ನಂತರದಲ್ಲಿ ಈ ಜಿಲ್ಲೆಯ ಕಾರ್ಮಿಕರು ಹೆಚ್ಚು ಸಂಘಟಿತರಾಗಿ ತಮ್ಮ ಹಕ್ಕುಗಳಿಗೆ ಹೆಚ್ಚು ಹೋರಾಟ ನಡೆಸಿದ್ದು ಹಾಗೂ ಕಾರ್ಮಿಕ ಸಂಘಟನೆಗಳು ದೃಢತೆಯಿಂದ ಕಾರ್ಯಾರಂಭ ಮಾಡಿದುವೆಂದು ತಿಳಿದು ಬಂದಿದೆ. ೧೯೮೬ರಲ್ಲಿ ಎ.ಐ.ಟಿ.ಯು.ಸಿ. ಮೊದಲನೇ ಸಮ್ಮೇಳನದಲ್ಲಿ ಪ್ರಮುಖ ಕಾರ್ಮಿಕ ಸಂಘಗಳು ಸಂಘಟನೆಯಾಗಿ ಹೊಸ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಕಾರ್ಯ ನಡೆಸಿದುವೆಂದು ತಿಳಿದು ಬಂದಿದೆ.

**ಕಾರ್ಮಿಕ ಕಲ್ಯಾಣ ಮಂಡಳಿ**

ಕಾರ್ಮಿಕ ಕಲ್ಯಾಣ ಮಂಡಳಿಯು, ಕರ್ನಾಟಕ ಕಾರ್ಮಿಕ ಕಲ್ಯಾಣ ಅಧಿನಿಯಮ ೧೯೬೫ರ ಅನುಸಾರ ಅನೇಕ ಕಾರ್ಮಿಕ ಕಲ್ಯಾಣ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರತಿ ಕಾರ್ಮಿಕರಿಂದ ಒಂದು ರೂಪಾಯಿಯಂತೆಯೂ, ಮಾಲೀಕರಿಂದ

ಪ್ರತಿ ಕಾರ್ಮಿಕರಿಗೆ ಎರಡು ರೂಪಾಯಿಯಂತೆಯೂ ಮತ್ತು ಸರ್ಕಾರದಿಂದ ಪ್ರತಿ ಕಾರ್ಮಿಕನಿಗೆ ಒಂದು ರೂಪಾಯಿಯಂತೆಯೂ ಪ್ರತಿ ವರ್ಷವೂ ಕಲ್ಯಾಣ ನಿಧಿಗಾಗಿ ಸಂಗ್ರಹಿಸಲಾಗುವುದು. ಮಂಡಳಿಯು ಕಾರ್ಮಿಕ ಕಲ್ಯಾಣ ಕೇಂದ್ರಗಳನ್ನು ಸ್ಥಾಪಿಸಿ ಕಾರ್ಮಿಕರಿಗೆ ವಾಚನಾಲಯ, ಮನರಂಜನೆ, ಕ್ರೀಡಾ ಚಟುವಟಿಕೆ, ಮಹಿಳೆಯರಿಗೆ ಮತ್ತು ನಿರುದ್ಯೋಗಿಗಳಿಗೆ ಗೃಹ ಕೈಗಾರಿಕೆ ಮತ್ತು ಉಪ ಉದ್ಯೋಗಗಳು, ವಿಶ್ರಾಂತಿ ಧಾಮಗಳನ್ನು ಸ್ಥಾಪಿಸುವುದು, ಪ್ರವಾಸ ಮತ್ತು ವಿಹಾರಗಳನ್ನು ಕೈಗೊಳ್ಳುವುದು, ಮಕ್ಕಳಿಗೆ ವಿದ್ಯಾರ್ಥಿವೇತನ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಮೂರು ಕಾರ್ಮಿಕ ಕಲ್ಯಾಣ ಕೇಂದ್ರಗಳಿವೆ. ಅವುಗಳೆಂದರೆ, ಗುಲಬರ್ಗಾ ನಗರ. ಶಹಬಾದ್ ಮತ್ತು ಕುರುಕುಂಟಾ (ಸೇಡಂ)ಗಳಾಗಿವೆ. ಗುಲಬರ್ಗಾ ನಗರದ ಕಾರ್ಮಿಕ ಕಲ್ಯಾಣ ಕೇಂದ್ರವನ್ನು ಸರ್ಕಾರವು ಮಂಡಳಿಗೆ ೧೯೮೬ ರಲ್ಲಿ ವರ್ಗಾಯಿಸಿದೆ. ಶಹಬಾದ್ ಹಾಗೂ ಕುರುಕುಂಟಾಗಳಲ್ಲಿ ಕಲ್ಯಾಣ ಮಂಡಳಿಗಳು ಹೊಸದಾಗಿ ೧೯೮೭ ರಲ್ಲಿ ಪ್ರಾರಂಭಿಸಿವೆ. ೧೯೯೪-೯೫ನೇ ಸಾಲಿಗೆ ಈ ಕೆಳಗೆ ನಮೂದಿಸಿರುವ ಬಾಬ್ತುಗಳಲ್ಲಿನ ಫಲಾನುಭವಿಗಳ ಸಂಖ್ಯೆ ಈ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೭**

| ಕ್ರಮ ಸಂಖ್ಯೆ | ಜಾರಿಗೊಳಿಸಿದ ಕಾರ್ಯಕ್ರಮ | ಗುಲಬರ್ಗಾ | ಶಹಬಾದ್ | ಕುರುಕುಂಟಾ | ಒಟ್ಟು |
|---|---|---|---|---|---|
| ೧. | ಹೆಣ್ಣು ಮಕ್ಕಳಿಗೆ ಹೊಲಿಗೆ ತರಬೇತಿ | ೨೪೭ | ೨೬೪ | ೩೮೦ | ೮೯೧ |
| ೨. | ವಾಚನಾಲಯ ಸೌಲಭ್ಯ | ೪,೦೮೨ | ೩,೬೮೦ | ೬,೭೯೮ | ೧೪,೫೬೦ |
| ೩. | ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳು | ೧,೮೮೭ | ೩,೮೯೦ | ೪,೦೨೫ | ೯,೮೦೨ |
| ೪. | ಮನರಂಜನೆ ಕಾಂರ್ಯಕ್ರಮಗಳು (ರೇಡಿಯೋ, ದೂರದರ್ಶನ) | ೪,೧೩೭ | ೪,೦೫೦ | ೩,೧೫೦ | ೧೧;೩೩೭ |
| | | ೧೦,೩೫೩ | ೧೧,೮೮೪ | ೧೪,೩೫೩ | ೩೬,೫೯೦ |

**ಕೋಷ್ಟಕ ೧೬.೮**

೧೯೯೨-೯೩, ೧೯೯೩-೯೪ ಹಾಗೂ ೯೫ರಲ್ಲಿ ಈ ಮೂರು ಕೇಂದ್ರಗಳ ಮೂಲಕ ಮಾಡಿದ ವೆಚ್ಚದ ಪಟ್ಟಿಯನ್ನು ನೀಡಲಾಗಿದೆ.

| ವರ್ಷ | ಗುಲಬರ್ಗಾ (ರೂ.ಗಳಲ್ಲಿ) | ಶಹಬಾದ್ (ರೂ.ಗಳಲ್ಲಿ) | ಕುರುಕುಂಟಾ (ರೂ.ಗಳಲ್ಲಿ) | ಒಟ್ಟು ವೆಚ್ಚ |
|---|---|---|---|---|
| ೧೯೯೨-೯೩ | ೬೫೭೮ | ೧೪೮೮ | ೨೫೩೨ | ೧೦೫೯೮ |
| ೧೯೯೩-೯೪ | ೬೫೭೧ | ೧೫೧೦ | ೨೩೯೪ | ೧೦೪೭೫ |
| ೧೯೯೪-೯೫ | ೬೫೭೬ | ೧೬೭೨ | ೨೫೨೫ | ೧೦೭೭೩ |
| | ೧೯,೭೨೫ | ೪೬೭೦ | ೭೪೫೧ | ೩೧೮೪೬ |

ಆಧಾರ : ಕಲ್ಯಾಣ ಆಯುಕ್ತರು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು.

## ನೌಕರರ ರಾಜ್ಯ ವಿಮಾ ಯೋಜನೆ

೧೯೪೮ರ ನೌಕರರ ರಾಜ್ಯ ಯೋಜನೆಯ ಶಾಸನ ಹಾಗೂ ಸಂಬಂಧಪಟ್ಟ ನಿಯಮ ನಿಬಂಧನೆಗಳ ಪ್ರಕಾರ ಗುಲಬರ್ಗಾ ಜಿಲ್ಲೆಯಲ್ಲಿ ೧೯೬೯ರಲ್ಲಿ ರಾಜ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಯಿತು. ಆರಂಭದಲ್ಲಿ ಈ

ಯೋಜನೆಯು ವಿದ್ಯುತ್ತನ್ನು ಬಳಸುವ ೨೦ ಅಥವಾ ಹೆಚ್ಚು ಕಾರ್ಮಿಕರಿರುವ ಹಾಗೂ ಮಾಸಿಕ ವೇತನ ೪೦೦ ರೂ.ಗಿಂತ ಕಡಿಮೆ ಇರುವ, ವರ್ಷ ಪೂರ್ತಿ ಕೆಲಸ ಮಾಡುವ (ನಾನ್ ಸೀಸನಲ್) ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಮಾತ್ರ ಸೀಮಿತವಾಗಿತ್ತು. ಕ್ರಮೇಣ ಇದು ತಿದ್ದುಪಡಿಯಾಗಿ ಹಂಗಾಮೇತರ ಕಾರ್ಖಾನೆ ಕೆಲಸಗಾರರೂ, ಹೊಟೆಲ್ ಮತ್ತು ರೆಸ್ಟೋರೆಂಟ್‌ಗಳೂ, ಸಿನಿಮಾ ಮಂದಿರಗಳೂ, ರಸ್ತೆ ಸಾರಿಗೆ ಸಂಸ್ಥೆಗಳೂ ಇವೇ ಮೊದಲಾದ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೂ, ವಿದ್ಯುತ್ತನ್ನು ಬಳಸದಿರುವ ಕಾರ್ಖಾನೆಗಳಲ್ಲಿ ೨೦ ಅಥವಾ ಅದಕ್ಕಿಂತ ಹೆಚ್ಚು ನೌಕರರಿರುವ ಕಡೆಗಳಲ್ಲೂ ಸಹ ನೌಕರರ ಮಾಸಿಕ ವೇತನದ ಗರಿಷ್ಠ ಮಿತಿ ೬೫೦೦/-. (ಜನವರಿ ೯೭ರಿಂದ) ಇರುವವರೆಗೂ ವಿಸ್ತರಿಸಲಾಗಿದೆ. ಸಾಮಾಜಿಕ ಭದ್ರತಾ ವ್ಯವಸ್ಥೆಗಾಗಿ ಜಾರಿಗೆ ಬಂದಿರುವ ನೌಕರರ ರಾಜ್ಯ ವಿಮಾ ಯೋಜನೆಯು ವೈದ್ಯಕೀಯ ಸೌಲಭ್ಯವನ್ನು ನೀಡುವುದೇ ಅಲ್ಲದೆ ಕಾಯಿಲೆ, ಪ್ರಸೂತಿ, ಅಸಾಮರ್ಥ್ಯ, ಪರಾವಲಂಬನೆ ಹಾಗೂ ಅಂತ್ಯ ಸಂಸ್ಕಾರಗಳಿಗೆ ಸಂಬಂಧಿಸಿದಂತೆ ನಗದು ರೂಪದ ಪರಿಹಾರ ನೀಡುವುದು. ವೈದ್ಯಕೀಯ ಪರಿಹಾರವು ವಿಮೆ ಮಾಡಲ್ಪಟ್ಟ ವ್ಯಕ್ತಿಗಳಲ್ಲದವರನ್ನು ಆಶ್ರಯಿಸಿರುವ ಕುಟುಂಬದ ಸದಸ್ಯರಿಗೂ ಸಹ ವಿಸ್ತರಿಸಲ್ಪಟ್ಟಿದೆ. ಈ ಯೋಜನೆ ಅನ್ವಯ ವೈದ್ಯಕೀಯ ಪರಿಹಾರವನ್ನು ಒದಗಿಸುವ ಹೊಣೆಗಾರಿಕೆ ರಾಜ್ಯ ಸರ್ಕಾರಕ್ಕೆ ಸೇರಿರುತ್ತದೆ. ಗುಲಬರ್ಗಾ ಜಿಲ್ಲೆಯಲ್ಲಿ ಪ್ರಥಮವಾಗಿ ಇ.ಎಸ್.ಪಿ.ಐ. ಯೋಜನೆಯು ೧೯೬೯ರಲ್ಲಿ ಪ್ರಾರಂಭವಾಯಿತು. ಜಿಲ್ಲೆಯಲ್ಲಿ ಗುಲಬರ್ಗಾದಲ್ಲಿ ೨೦ ಹಾಸಿಗೆಗಳನ್ನು ಹೊಂದಿರುವ ನೌಕರರ ರಾಜ್ಯ ವಿಮಾ ಯೋಜನೆಯ ಆಸ್ಪತ್ರೆ ಇದೆ. ಅಲ್ಲದೆ ಎ.ವಿ.ಬಿ., ಶಹಬಾದ್, ವಾಡಿ, ಕುರುಕುಂಟ, ಸೇಡಂ, ಮಳಖೇಡ್ ಹಾಗೂ ಶಹಬಾದ್‌ಗಳಲ್ಲಿ ಒಂದೊಂದು ನೌಕರರ ರಾಜ್ಯ ವಿಮಾ ಯೋಜನೆಯ ಆಸ್ಪತ್ರೆಗಳಿವೆ. ಪ್ರಸ್ತುತ ಇ.ಎಸ್.ಐ. ಯೋಜನೆಯನ್ನು ಪ್ರಾರಂಭಿಸಲು ಕನಿಷ್ಠ ೪೦೦ ಮಂದಿ ಕಾರ್ಮಿಕರು ಇರಬೇಕಾಗುವುದು. ಇದಲ್ಲದೆ ಜಿಲ್ಲೆಯಲ್ಲಿ ೮ ಪೂರ್ಣಕಾಲಿಕ ದವಾಖಾನೆಗಳು ಮತ್ತು ಒಂದು ವಿಮಾ ಯೋಜನೆ ನಿಗಮದ ಸ್ಥಳೀಯ ಕಛೇರಿಯೂ ಇದೆ. ಜಿಲ್ಲೆಯಲ್ಲಿ ೧೯೯೨-೯೩ನೇ ಸಾಲಿನಲ್ಲಿ ೯,೨೮೪ ವಿಮಾ ಸದಸ್ಯರೂ ಮತ್ತು ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ಕ್ರಮವಾಗಿ ೧೧,೧೬೨ ಮತ್ತು ೬,೪೯೭ ಸದಸ್ಯರಿದ್ದರು. ೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ಇ.ಎಸ್.ಐ. ಸೌಲಭ್ಯ ಪಡೆಯುತ್ತಿರುವ ವಿಮಾ ಕುಟುಂಬದವರು ಕ್ರಮವಾಗಿ ೩೭,೧೩೬, ೪೪,೬೪೮ ಮತ್ತು ೨೫,೯೮೮ ಹೊಂದಿದ್ದು ಈ ವರ್ಷಗಳಲ್ಲಿ ಒಟ್ಟು ವೆಚ್ಚ ಮಾಡಿದ ಹಣ ಕ್ರಮವಾಗಿ ೧೯,೮೫,೯೭೬, ರೂ. ೨೫,೪೪,೫೧೦ ಮತ್ತು ರೂ. ೨೯,೦೫,೫೭೭ ಗಳಾಗಿರುತ್ತದೆ.

## ಪರಿಶಿಷ್ಟ ಜಾತಿಯವರ ಕಲ್ಯಾಣ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಅನೇಕ ಯತ್ನಗಳು ಜಿಲ್ಲೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಆರಂಭವಾಯಿತು. ಮಹಾತ್ಮಫುಲೆ, ಡಾ. ಅಂಬೇಡ್ಕರ್ ಮುಂತಾದವರು ಮಹಾರಾಷ್ಟ್ರದಲ್ಲಿ ಈ ಬಗ್ಗೆ ಸಾಕಷ್ಟು ಚಟುವಟಿಕೆಗಳನ್ನು ಪ್ರಾರಂಭಿಸಿದರೂ ಕರ್ನಾಟಕದಲ್ಲಿ ಇದು ವ್ಯಾಪಕವಾದುದು ಗಾಂಧೀಜಿಯವರ ಯತ್ನದ ನಂತರವೇ. ಗಾಂಧೀಜಿಯವರು ಥಕ್ಕರಬಾಪಾ ಅವರ ಅಧ್ಯಕ್ಷತೆಯಲ್ಲಿ "ಅಖಿಲ ಭಾರತ ಹರಿಜನ ಸೇವಕ ಸಂಘ" ರಚಿಸಿ ಕರ್ನಾಟಕ ಶಾಖೆಗೆ ಸರದಾರ ವೀರನಗೌಡ ಪಾಟೀಲರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ೧೯೨೭ ರಲ್ಲಿ ಗಾಂಧೀಜಿಯವರು ಗುಲಬರ್ಗಾದ ಶರಣ ಬಸವೇಶ್ವರ ದೇವಸ್ಥಾನದಲ್ಲಿ ಸ್ವಾವಲಂಬನೆಯ ಬಗ್ಗೆ ಭಾಷಣ ಮಾಡಿದ್ದರು. ೧೯೪೨ ರಲ್ಲಿ ಸ್ವಾಮಿ ರಮಾನಂದ ತೀರ್ಥರ ಮುಖಂಡತ್ವದಲ್ಲಿ ಈ ಜಿಲ್ಲೆಯಲ್ಲಿ ಸ್ವಾತಂತ್ರ್ಯದ ಆಂದೋಳನ ಪ್ರಾರಂಭವಾಯಿತು. ಈ ಆಂದೋಳನದಿಂದ ಅನೇಕ ಸಂಘ ಸಂಸ್ಥೆಗಳು ಪ್ರಾರಂಭವಾದುವು. ಹೈದ್ರಾಬಾದ್ ಪ್ರಾಂತ್ಯಕ್ಕೆ ಸೇರಿದ್ದು. ಬೀದರ್, ರಾಯಚೂರು ಮತ್ತು ಗುಲಬರ್ಗಾಗಳಲ್ಲಿ ಬೇರೆ ಬೇರೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಪ್ರಾರಂಭವಾದವು.

ಸ್ವಾತಂತ್ರ್ಯದ ನಂತರ ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದೆ. ಆರಂಭದಲ್ಲಿ ಈ ಕಾರ್ಯಕ್ರಮಗಳನ್ನು ಶಿಕ್ಷಣ ಇಲಾಖೆ ನಿರ್ವಹಿಸುತ್ತಿದ್ದು ನಂತರ ಇದನ್ನು ಹೆಚ್ಚು ಯಶಸ್ವಿಯಾಗುವಂತೆ ಮಾಡಲು ಸಮಾಜ ಕಲ್ಯಾಣ ಇಲಾಖೆ ಎಂಬ ಒಂದು ಪ್ರತ್ಯೇಕ ಇಲಾಖೆಯನ್ನು ಆರಂಭಿಸಲಾಯಿತು. ಈ ಇಲಾಖೆಯು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಜನರ ಆರ್ಥಿಕ, ಶೈಕ್ಷಣಿಕ ಮತ್ತು ವಸತಿ ಇವೇ ಮುಂತಾದವುಗಳ ಪ್ರಗತಿಗಾಗಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಎಲ್ಲಾ ಸ್ಥಳೀಯ ಸಂಸ್ಥೆಗಳು ತಮ್ಮ ಆಯವ್ಯಯದ ಶೇಕಡ ೧೮ರಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರ ಕಲ್ಯಾಣಕ್ಕಾಗಿ ವೆಚ್ಚ ಮಾಡುವುದು ಕಡ್ಡಾಯವಾಗಿದೆ.

೧೯೭೦ರಲ್ಲಿ ಗುಲಬರ್ಗಾ ನಗರದಲ್ಲಿ ಸರ್ಕಾರದಿಂದ ರಚಿತವಾದ ಬಡಾವಣೆಯಲ್ಲಿ ಪರಿಶಿಷ್ಟ ಜಾತಿಯವರಿಗೆ ಗುಡಿಸಿಲುಗಳನ್ನು ಹಾಕಿಕೊಳ್ಳಲು ಸರ್ಕಾರ ಅನುಮತಿ ನೀಡಿದ್ದಿತು. ಡಾ. ಎನ್.ಎಸ್. ಹರ್ಡೀಕರ್ ಆದೇಶದಂತೆ ಸೇವಾದಳದ ಮುಖಾಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅಕ್ಷರ ಪ್ರಚಾರ ಹಾಗೂ ವಿದ್ಯಾ ಪ್ರಚಾರಗಳು ಜಿಲ್ಲೆಯಲ್ಲಿ ನಡೆದುವೆಂದು ವರದಿಯಾಗಿದೆ. ಇದಲ್ಲದೆ ಶ್ರೀಮಂತರಿಂದ ಹಣ ಸಂಗ್ರಹಣೆ, ಬಟ್ಟೆ ಗಿರಣಿಗಳಿಂದ ಬಟ್ಟೆ ವಸೂಲಿ, ಶ್ರೀಮಂತ ರೈತರಿಂದ ಬೇಳೆಕಾಳುಗಳನ್ನು ಸಂಗ್ರಹಿಸಿ ಕೇರಿಗಳಲ್ಲಿನ ಜನರಿಗೆ ಹಂಚುವ ವ್ಯವಸ್ಥೆ ಮಾಡಿತ್ತು.

## ಶೈಕ್ಷಣಿಕ ಸೌಲಭ್ಯಗಳು

ಗುಲಬರ್ಗಾ ಜಿಲ್ಲೆಯಲ್ಲಿ ಜನಗಣತಿಯ ಪ್ರಕಾರ ೧೯೮೧ರಲ್ಲಿ ೪,೫೫,೪೭೨ ಜನರು ಹಾಗೂ ೧೯೯೧ರಲ್ಲಿ ೬,೧೦,೬೪೧ ಜನರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದು ಇದು ಕ್ರಮವಾಗಿ ಜಿಲ್ಲೆಯ ಜನಸಂಖ್ಯೆಯ ಶೇ. ೨೧.೮೯ ಮತ್ತು ಶೇ. ೨೩.೬೪ರಷ್ಟಾಗಿರುತ್ತದೆ. (ವಿವರಗಳಿಗೆ ಅಧ್ಯಾಯ ೩ ನ್ನು ನೋಡುವುದು).

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಜನರಲ್ಲಿ ಮೂರು ವರ್ಷದಿಂದ ಆರು ವರ್ಷದ ಮಕ್ಕಳಿಗೆ ಶಾಲೆಗೆ ಹೋಗುವ ಅಭ್ಯಾಸವನ್ನು ಬೆಳೆಸಿ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ನೀಡುವುದಕ್ಕೂ ಹಾಗೂ ಮಹಿಳೆಯರಿಗೆ ಹೊಲಿಗೆ, ಹೆಣಿಗೆ, ಕಸೂತಿ ಇವೇ ಮೊದಲಾದ ಕಲೆ ಕೆಲಸಗಳಲ್ಲಿ ತರಬೇತಿ ನೀಡುವ ಉದ್ದೇಶದಿಂದ ಜಿಲ್ಲೆಯಲ್ಲಿ ಶಿಶುವಿಹಾರಗಳನ್ನೊಳಗೊಂಡ ಮಹಿಳಾ ಕೇಂದ್ರಗಳನು ಸ್ಥಾಪಿಸಲಾಗಿದೆ. ಪ್ರತೀ ಕಲ್ಯಾಣ ಕೇಂದ್ರದಲ್ಲೂ ೫೦ ಮಕ್ಕಳು ಸೇರಲು ಅವಕಾಶವಿದ್ದು, ಅವರಿಗೆ ಉಚಿತವಾಗಿ ಮಧ್ಯಾಹ್ನದ ಉಪಹಾರ ಮತ್ತು ವರ್ಷಕ್ಕೆ ಎರಡು ಜೊತೆ ಉಡುಪುಗಳನ್ನು ನೀಡಲಾಗುತ್ತಿದೆ.

೫ ರಿಂದ ೧೧ನೇ ತರಗತಿಗಳಲ್ಲಿ ಓದುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಊಟ, ವಸತಿ, ಸೌಕರ್ಯಗಳನ್ನು ಕಲ್ಪಿಸಲು ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ೧೯೯೦ಕ್ಕೆ ಮುಂಚೆ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ೧೦೦ ರೂ.ಗಳನ್ನು ಭೋಜನ ವೆಚ್ಚಕ್ಕಾಗಿ ನೀಡಲಾಗುತ್ತಿದ್ದು, ೧೯೯೦ರಿಂದ ಇದನ್ನು ೧೫೦ ರೂ.ಗಳಿಗೆ ಹೆಚ್ಚಿಸಲಾಯಿತು. ೧೯೭೦ರಲ್ಲಿ ಪರಿಶಿಷ್ಟ ಜಾತಿಯವರಿಗಾಗಿ ಜಿಲ್ಲೆಯಲ್ಲಿ ೩೫ ಬಾಲಕರ ವಿದ್ಯಾರ್ಥಿನಿಲಯಗಳೂ ಮತ್ತು ೧೨ ಬಾಲಕಿಯರ ವಿದ್ಯಾರ್ಥಿನಿಲಯಗಳಿದ್ದು, ಬಾಲಕರ ಸಂಖ್ಯೆ ೨,೭೪೧೩ ಮತ್ತು ಬಾಲಕಿಯರ ಸಂಖ್ಯೆ ೫೭೦ ಆಗಿದ್ದಿತು. ೧೯೯೪ರ ವೇಳೆಗೆ ೬೦ ಬಾಲಕರ ವಿದ್ಯಾರ್ಥಿ ನಿಲಯಗಳೂ ಮತ್ತು ೧೨ ಬಾಲಕಿಯರ ವಿದ್ಯಾರ್ಥಿ ನಿಲಯಗಳಿದ್ದು ಬಾಲಕರ ಸಂಖ್ಯೆ ೪,೯೯೩ ಮತ್ತು ಬಾಲಕಿಯರ ಸಂಖ್ಯೆ ೫೮೫ ಆಗಿದ್ದಿತು. ೧೯೯೪-೯೫ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ತಾಲ್ಲೂಕುವಾರು ವಿದ್ಯಾರ್ಥಿನಿಲಯಗಳನ್ನು ಈ ಪಟ್ಟಿಯಲ್ಲಿ ನಮೂದಿಸಿದೆ.

**ಕೋಷ್ಟಕ ೧೬.೯**

| ಕ್ರಮ ಸಂಖ್ಯೆ | ತಾಲೂಕು | ವಿದ್ಯಾರ್ಥಿನಿಲಯದ ಸಂಖ್ಯೆ | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| ೧. | ಚಿಂಚೋಳಿ | ೧೦ | ೬೨೫ |
| ೨. | ಯಾದಗಿರಿ | ೨೨ | ೧೨೦೮ |
| ೩. | ಗುಲಬರ್ಗಾ | ೧೮ | ೧೬೩೫ |
| ೪. | ಚಿತ್ತಾಪುರ | ೧೮ | ೯೧೫ |
| ೫. | ಅಫಜಲ್‌ಪುರ | ೧೨ | ೬೪೦ |
| ೬. | ಶಹಪುರ | ೦೭ | ೩೯೫ |
| ೭. | ಆಳಂದ | ೦೯ | ೫೨೦ |

| | | | |
|---|---|---|---|
| ೮. | ಸೇಡಂ | ೧೪ | ೭೨೫ |
| ೯. | ಜೇವರ್ಗಿ | ೦೭ | ೩೭೫ |
| ೧೦. | ಸುರಪುರ | ೦೭ | ೩೭೦ |
| | ಒಟ್ಟು | ೧೨೪ | ೭,೪೦೮ |

**ಕೋಷ್ಟಕ ೧೬.೧೦**

ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿನಿಲಯಗಳಿಂದ ಆದ ವೆಚ್ಚದ ವಿವರ.

| ವರ್ಷ | ವಿದ್ಯಾರ್ಥಿನಿಲಯಗಳ ಸಂಖ್ಯೆ | ಫಲಾನುಭವಿಗಳು | ವೆಚ್ಚ |
|---|---|---|---|
| ೧೯೯೨-೯೩ | ೭೪ | ೫,೦೭೮ | ೧೪೬.೭೮ |
| ೧೯೯೩-೯೪ | ೭೬ | ೫,೨೦೩ | ೧೯೧.೩೯ |
| ೧೯೯೪-೯೫ | ೮೦ | ೫,೪೫೩ | ೨೦೩.೧೯ |

ವಿದ್ಯಾರ್ಥಿ ನಿಲಯದ ಸೌಲಭ್ಯ ಪಡೆಯದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಮಾಧ್ಯಮಿಕ (೫ ರಿಂದ ೭ನೆ ತರಗತಿ) ಹಂತದಲ್ಲಿ ವರ್ಷಕ್ಕೆ ೭೫ ರೂ.ಗಳಂತೆಯೂ ಮತ್ತು ಪ್ರೌಢಶಾಲಾ ಹಂತದಲ್ಲಿ ವರ್ಷಕ್ಕೆ ೧೦೦ ರೂ.ಗಳಂತೆಯೂ ಮಂಜೂರು ಮಾಡುತ್ತಿದೆ. ಭಾರತ ಸರ್ಕಾರದ ನಿಬಂಧನೆಗಳ ಮೇರೆಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ತಂದೆ ತಾಯಿಯರ ವಾರ್ಷಿಕ ವರಮಾನ ೧೮,೦೦೦ ರೂ.ಗಿಂತ ಕಡಿಮೆ ಇದ್ದರೆ ಪೂರ್ಣ ವಿದ್ಯಾರ್ಥಿ ವೇತನವನ್ನೂ, ೧೮,೦೦೦ ರೂ.ನಿಂದ ೨೪,೦೦೦ ರೂ.ಗಳ ವಾರ್ಷಿಕ ವರಮಾನದವರಿಗೆ ಅರ್ಧ ವಿದ್ಯಾರ್ಥಿ ವೇತನವನ್ನೂ ಮಂಜೂರು ಮಾಡಲಾಗುತ್ತಿದ್ದು, ಈ ವಿದ್ಯಾರ್ಥಿ ವೇತನದ ದರವು ವಿವಿಧ ಹಂತ ಮತ್ತು ಶಿಕ್ಷಣಕ್ಕನುಗುಣವಾಗಿದ್ದು, ೧೯೮೯ ರಿಂದ ಇದರ ಮಾಸಿಕ ದರವು ವಿದ್ಯಾರ್ಥಿ ನಿಲಯದ ನಿವಾಸಿಗಳಿಗೆ ೧೧೫ ರೂ.ನಿಂದ ೨೮೦ ರೂ.ವರೆವಿಗೂ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ವಾಸಿಸದವರಿಗೆ ರೂ. ೬೫ ರಿಂದ ರೂ. ೧೨೫ರ ವರೆವಿಗೂ ಇದೆ. ಭಾರತ ಸರ್ಕಾರದ ವಿದ್ಯಾರ್ಥಿ ವೇತನಕ್ಕೆ ಅನರ್ಹರಾದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರವು ತಿಂಗಳಿಗೆ ೪೦ ರೂ.ನಿಂದ ೭೫ ರೂ.ಗಳವರೆಗೆ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡುತ್ತಿದೆ. ಇದಲ್ಲದೆ ವಿವಿಧ ಹಂತಗಳ ಪಬ್ಲಿಕ್ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಬಹುಮಾನದ ಹಣವನ್ನಾಗಿ ೫೦೦ ರೂ.ನಿಂದ ೧೫೦೦ ರೂ.ವರೆವಿಗೆ ಪರೀಕ್ಷೆಯ ಹಂತಕ್ಕನುಗುಣವಾಗಿ ಮಂಜೂರು ಮಾಡಲಾಗುತ್ತಿದೆ.

ನೈರ್ಮಲ್ಯ ಉದ್ಯೋಗಗಳಲ್ಲಿ ತೊಡಗಿರುವ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಒದಗಿಸುವ ಉದ್ದೇಶದಿಂದ ಆ ಮಕ್ಕಳನ್ನು ವಿದ್ಯಾರ್ಥಿ ನಿಲಯಗಳಿಗೆ ಸೇರಿಸಿ ಮಾಧ್ಯಮಿಕ ಹಂತದ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೦೦ ರೂ.ಗಳನ್ನು ಮತ್ತು ಪ್ರೌಢಶಾಲಾ ಹಂತದ ವಿದ್ಯಾರ್ಥಿಗಳಿಗೆ ತಿಂಗಳಿಗೆ ೨೫೦ ರೂ.ಗಳ ವಿದ್ಯಾರ್ಥಿ ವೇತನವನ್ನು ಅವರ ಊಟ ಮತ್ತು ವೆಚ್ಚಗಳಿಗಾಗಿ ಮಂಜೂರು ಮಾಡುತ್ತಿದೆ. ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಉತ್ತಮ ವಿದ್ಯಾಭ್ಯಾಸದ ಸೌಲಭ್ಯ ಒದಗಿಸುವ ದೃಷ್ಟಿಯಿಂದ ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆ (ವಸತಿ ಶಾಲೆ)ಗೆ ಸೇರಿಸಿ ಅವರ ಭೋಜನ ಮತ್ತು ಇತರ ವೆಚ್ಚಗಳಿಗಾಗಿ ವಾರ್ಷಿಕ ತಲಾ ೮,೦೦೫ ರೂ.ಗಳನ್ನು ಮಂಜೂರು ಮಾಡುತ್ತಿದೆ. ಇದಲ್ಲದೆ ವೈದ್ಯಕೀಯ ಮತ್ತು ತಾಂತ್ರಿಕ ಕಾಲೇಜುಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳನ್ನು ಒದಗಿಸುವುದು, ತಾಂತ್ರಿಕ ಮತ್ತು ಇತರ ವೃತ್ತಿಪರ ತರಗತಿಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸವು ಕಡ್ಡಾಯವಾಗಿದ್ದಲ್ಲಿ ಅವರಿಗೆ ಪ್ರವಾಸ ವೆಚ್ಚವನ್ನು ನೀಡುವುದು ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನು ಸರ್ಕಾರ ಒದಗಿಸಿದೆ.

**ಕೋಷ್ಟಕ ೧೬.೧೧**

1992-93ರಿಂದ 94-95ರವರೆಗೆ ಗುಲಬರ್ಗಾ ಜಿಲ್ಲೆಯಲ್ಲಿ ಪ.ಜಾತಿ ಮತ್ತು ಪ. ವರ್ಗದ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿ ವೇತನದ ವಿವರ

| ಯೋಜನೆಯ ಹೆಸರು | ೧೯೯೨-೯೩ | | ೧೯೯೩-೯೪ | | ೧೯೯೪-೯೫ | |
|---|---|---|---|---|---|---|
| | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ.) |
| ೧. ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ೧೯,೪೩೦ | ೧೭.೭೦ | ೧೪,೩೦೬ | ೧೭.೦೫ | ೨೧,೪೬೦ | ೧೮.೦೦ |
| ೨. ಪ್ರತಿಭಾ ವಿದ್ಯಾರ್ಥಿ ವೇತನ | ೧,೪೮೪ | ೦.೭೮ | ೧,೫೯೨ | ೧.೮೪ | ೧,೭೦೦ | ೧.೬೦ |
| ೩. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ೮,೧೭೬ | ೧೦೯.೩೨ | ೬,೫೫೫ | ೧೦೦.೮೯ | ೩,೯೬೩ | ೯೯.೭೫ |
| ೪. ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | ೧೦೪ | ೦.೫೨ | ೧೦೨ | ೦.೫೧ | ೪೮ | ೦.೨೪ |
| ೫. ವಿದ್ಯಾರ್ಥಿಗಳ ಊಟ ವಸತಿಗಾಗಿ ಮಾಡಿದ ವೆಚ್ಚ | ೬,೮೯೫ | ೧೬.೯೧ | ೨,೯೧೦ | ೨೧.೭೧ | ೨,೯೯೪ | ೨೪.೧೮ |
| ೬. ಒಂದರಿಂದ ೪ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಮಾಡಿದ ವೆಚ್ಚ | ಯೋಜನೆ ಪ್ರಾರಂಭವಾಗಿಲ್ಲ | -- | ೫೬,೦೦೦ | ೪೨.೦೦ | ೭೩.೩೨೨ | ೫೫.೦೦ |
| ೭. ನರ್ಸರಿ ಮತ್ತು ಮಹಿಳಾ ಕೇಂದ್ರಗಳು | ೧,೭೫೦ | ೨೨.೪೬ | ೧,೭೫೦ | ೨೪.೩೬ | ೧,೭೫೦ | ೨೭.೧೭ |
| ೮. ವಸತಿ ಶಾಲೆಗಳು | ೧೨೩ (ಶಾಲೆಗಳು) | ೪೧.೬೯ | ೧೨೩ (ಶಾಲೆಗಳು) | ೩೪.೫೨ | ೧೨೩ | ೪೧.೯೧ |
| ೯. ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನಗಳು | ೯೮ | ೦.೯೧ | ೮೦ | ೦.೯೭ | ೧೧೮ | ೧.೯೬ |
| ೧೦. ಅನೈರ್ಮಲ್ಯ ಉದ್ಯೋಗ ಗಳಲ್ಲಿ ತೊಡಗಿರುವ ಉದ್ಯೋಗಿಗಳ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ | ಇಲ್ಲ | -- | ೧೧ | ೦.೦.೩ | ೩೦ | ೦.೦೮ |
| ೧೧. ಶೈಕ್ಷಣಿಕ ಪ್ರವಾಸ | ೧೨ | ೦.೧ | ೧೭ | ೦.೧೯ | ೬೨ | ೦.೨೨ |
| ೧೨. ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ | ೫,೦೭೮ | ೧೦.೪೦ | ೫,೦೭೮ | ೧೨.೬೨ | ೫,೦೭೮ | ೧೩.೫೦ |

## ಆರ್ಥಿಕಾಭಿವೃದ್ಧಿ ಯೋಜನೆಗಳು

ಪರಿಶಿಷ್ಟ ಜಾತಿಗಳ ಮಹಿಳೆಯರಿಗೆ ಔದ್ಯೋಗಿಕ ತರಬೇತಿ ನೀಡಲು ಹೊಲಿಗೆ ತರಬೇತಿ ಕೇಂದ್ರವು ಗುಲಬರ್ಗಾದಲ್ಲಿ ೧೯೬೫ರಿಂದ ಕಾರ್ಯ ನಿರ್ವಹಿಸುತ್ತಿದೆ. ಸಾಮಾನ್ಯವಾಗಿ ೨೦ ಅಭ್ಯರ್ಥಿಗಳಿಗೆ ಈ ಕೇಂದ್ರದಲ್ಲಿ ಸೇರುವ ಅವಕಾಶವಿದ್ದು, ೧೨ ತಿಂಗಳ ಕಾಲ ತರಬೇತಿಯನ್ನು ನೀಡಲಾಗುವುದು. (ಮತ್ತು ಈ ಅವಧಿಯಲ್ಲಿ ಮಾಸಿಕ 75 ರೂ. ವಿದ್ಯಾರ್ಥಿ ವೇತನವನ್ನು ನೀಡಲಾಗುತ್ತಿದೆ.) ಈ ಕೇಂದ್ರದಿಂದ ಯಶಸ್ವಿಯಾಗಿ ತರಬೇತಿ ಪೂರ್ಣಗೊಳಿಸಿದ ಪ್ರತೀ ಮಹಿಳಾ ಅಭ್ಯರ್ಥಿಗೆ ವೃತ್ತಿಯನ್ನು ಮುಂದುವರಿಸಲು ಅನುಕೂಲಕರವಾಗುವಂತೆ ಒಂದು ಹೊಲಿಗೆ ಯಂತ್ರವನ್ನು ಉಚಿತವಾಗಿ ನೀಡಲಾಗುವುದು. ೧೯೯೨-೯೩ರಲ್ಲಿ ಆಳಂದ, ಗುಲಬರ್ಗಾ ಮತ್ತು ಯಾದಗಿರಿಯಲ್ಲಿ ತಲಾ ೨೦ ಮಹಿಳೆಯರು ಈ ಸೌಲಭ್ಯವನ್ನು ಪಡೆದಿರುತ್ತಾರೆ. ೧೯೯೨-೯೩ನೇ ಸಾಲಿನಲ್ಲಿ ೫೧ ಮಹಿಳೆಯರು, ೧೯೯೩-೯೪ನೇ ಸಾಲಿನಲ್ಲಿ ೬೧ ಮಹಿಳೆಯರೂ ಮತ್ತು ೧೯೯೪-೯೫ನೇ ಸಾಲಿನಲ್ಲಿ ೪೭ ಮಹಿಳೆಯರೂ ಈ ಸೌಲಭ್ಯವನ್ನು ಪಡೆದಿದ್ದು, ಸರ್ಕಾರವು ಇದಕ್ಕೆ ಕ್ರಮವಾಗಿ ೬.೦೧ ಲಕ್ಷ ರೂ. ಮತ್ತು ೮.೨೩ ಲಕ್ಷ ರೂ. ೫.೦೩೦ ಖರ್ಚು ಮಾಡಿರುವುದಲ್ಲದೆ ಇವರುಗಳಿಗೆ ಉಚಿತ ಹೊಲಿಗೆ ಯಂತ್ರವನ್ನೂ ನೀಡಿರುತ್ತದೆ. ಆಟೋ ರಿಕ್ಷಾ ಚಾಲನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಯುವಕರಿಗೆ ತರಬೇತಿ ನೀಡಿ ಅವರು ಸ್ವಂತ ಉದ್ಯೋಗ ಕೈಗೊಳ್ಳಲು ನೆರವಾಗುವ ದೃಷ್ಟಿಯಿಂದ ತರಬೇತಿ ಶುಲ್ಕ ಪ್ರತಿ ಅಭ್ಯರ್ಥಿಗೆ ೯೦೦ ರೂ.ಗಳನ್ನು ಪರಿಶಿಷ್ಟ ಜಾತಿಯ ನಿಗಮವೇ ಭರಿಸುವುದು. ಈ ತರಬೇತಿಯ ಅವಧಿ ಒಂದು ತಿಂಗಳಾಗಿದ್ದು, ಸ್ಥಳೀಯರಿಗೆ ೧೫೦ ರೂ. ಮತ್ತು ಪರಸ್ಥಳೀಯರಿಗೆ ೩೦೦ ರೂ.ಗಳ ಶಿಷ್ಯ ವೇತನವನ್ನು ನೀಡುವುದು. ೧೯೯೨-೯೩ನೇ ಸಾಲಿನಲ್ಲಿ ಐದು ಯುವಕರು ಈ ಸೌಲಭ್ಯವನ್ನು ಪಡೆದಿದ್ದು, ಇದಕ್ಕಾಗಿ ಸರ್ಕಾರವು ೫,೫೩೦ ರೂ.ಗಳ ಖರ್ಚು ಮಾಡಿದೆ. ೧೯೯೩-೯೪ನೇ ಸಾಲಿನಲ್ಲಿ ೧೬ ಯುವಕರು ಈ ಸೌಲಭ್ಯವನ್ನು ಪಡೆದು ಇದಕ್ಕಾಗಿ ಸರ್ಕಾರವು ೧೮,೧೭೦ ರೂ. ಖರ್ಚು ಮಾಡಿದೆ. ಲಘುವಾಹನ ಚಾಲನೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಯುವಕರಿಗೆ ತರಬೇತಿ ನೀಡುವ ಯೋಜನೆಯಲ್ಲಿ ತರಬೇತಿ ಶುಲ್ಕ ಪ್ರತಿ ಅಭ್ಯರ್ಥಿಗೆ ೧೨೦೦ ರೂ.ಗಳನ್ನು ಪರಿಶಿಷ್ಟ ಜಾತಿಯ ನಿಗಮವೇ ಭರಿಸುವುದು. ಈ ತರಬೇತಿಯ ಅವಧಿ ಒಂದು ತಿಂಗಳಾಗಿದ್ದು, ೧೯೯೨-೯೩ರಲ್ಲಿ ಆರು ಯುವಕರು ಈ ಸೌಲಭ್ಯವನ್ನು ಪಡೆದಿದ್ದು ಇದಕ್ಕಾಗಿ ೬,೮೨೦ ರೂ. ಖರ್ಚು ಮಾಡಿದೆ. ೧೯೯೩-೯೪ನೇ ಸಾಲಿನಲ್ಲಿ ಐದು ಯುವಕರು ಈ ಸೌಲಭ್ಯ ಪಡೆದಿದ್ದು ಇದಕ್ಕಾಗಿ ೭,೪೫೦ ರೂ. ಖರ್ಚು ಮಾಡಿದೆ.

ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿಯವರಿಗೆ ೧೦೦೦ ರೂ.ಗಳಿಂದ ೧೦,೦೦೦ ರೂ.ಗಳವರೆಗೆ, ನಷ್ಟದ ಪ್ರಮಾಣವನ್ನು ಅನುಸರಿಸಿ, ಧನ ಸಹಾಯ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ೧೯೯೨-೯೩ನೇ ಸಾಲಿನಲ್ಲಿ ೧೬ ಜನರು ಈ ಸೌಲಭ್ಯವನ್ನು ಪಡೆದಿದ್ದು ಇದಕ್ಕಾಗಿ ಸರ್ಕಾರ ೩,೭೬,೨೦೦ ರೂ.ಗಳನ್ನು ಖರ್ಚು ಮಾಡಿದೆ. ೧೯೯೩-೯೪ನೇ ಸಾಲಿನಲ್ಲಿ ೪೪ ಜನರು ಈ ಸೌಲಭ್ಯವನ್ನು ಪಡೆದಿದ್ದು ಇದಕ್ಕಾಗಿ ಸರ್ಕಾರ ೨,೭೨,೬೫೦ ರೂ. ಖರ್ಚು ಮಾಡಿದೆ.

## ವಿಶೇಷ ಘಟಕ ಯೋಜನೆ

ಪರಿಶಿಷ್ಟ ಜಾತಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ೧೯೮೦-೮೧ನೇ ಸಾಲಿನಿಂದ ವಿಶೇಷ ಘಟಕ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದೆ. ಅಭಿವೃದ್ಧಿ ಇಲಾಖೆಗಳು ತಮ್ಮ ಯೋಜನಾ ಆಯವ್ಯಯದ ಶೇಕಡ ೧೫ ನ್ನು ಈ ಯೋಜನೆಗಾಗಿ ಮೀಸಲಾಗಿಟ್ಟು ಪರಿಶಿಷ್ಟ ಜಾತಿಗಳ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಕಲ್ಪಿಸುವುದರ ಮೂಲಕ ಬಡತನ ನಿವಾರಣೆಗೆ ನೆರವಾಗುತ್ತಿದೆ. ಇದಲ್ಲದೆ ಪರಿಶಿಷ್ಟ ಜನಾಂಗದವರ ಕಾಲೋನಿಗಳಲ್ಲಿ ನೀರು, ವಿದ್ಯುತ್, ಆರೋಗ್ಯ, ಶಿಕ್ಷಣ, ರಸ್ತೆ, ಸೇತುವೆ, ಇವೇ ಮುಂತಾದ ಕನಿಷ್ಟ ನಾಗರಿಕ ಸೌಲಭ್ಯಗಳನ್ನು ಒದಗಿಸುವಲ್ಲಿ ಈ ಯೋಜನೆಯು ಹೆಚ್ಚಿನ ಗಮನ ನೀಡಿದೆ. ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ವಿವಿಧ ಇಲಾಖೆಗಳು ಈ ಯೋಜನೆಯಲ್ಲಿ ಸಾಧಿಸಿರುವ ಪ್ರಗತಿಯನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೨**

ಕೋಷ್ಟಕ ೧೬.೧೨: ೧೯೯೩-೯೪ ಹಾಗೂ ೧೯೯೪-೯೫ರಲ್ಲಿ ವಿಶೇಷ ಘಟಕ ಯೋಜನೆಯಂತೆ ಒದಗಿಸಿದ ಸೌಲಭ್ಯಗಳ ವಿವರ

| ಕ್ರಮ ಸಂಖ್ಯೆ | ಇಲಾಖೆ | ೧೯೯೩-೯೪ ಫಲಾನುಭವಿಗಳು | ೧೯೯೩-೯೪ ವೆಚ್ಚ (ಲಕ್ಷ ರೂ.ಗಳಲ್ಲಿ) | ೧೯೯೪-೯೫ ಫಲಾನುಭವಿಗಳು | ೧೯೯೪-೯೫ ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|---|
| ೧. | ವ್ಯವಸಾಯ ಇಲಾಖೆ | ೨೨೫ | ೯.೯೨ | ೨೫೮ | ೧೦.೯೯ |
| ೨. | ತೋಟಗಾರಿಕೆ ಇಲಾಖೆ | ೨೨೯ | ೨.೮೩ | ೨೨೮ | ೩.೦೯ |
| ೩. | ಪಶು ಸಂಗೋಪನೆ ಇಲಾಖೆ | ೦೮೮ | ೬.೪೨ | ೬೫ | ೫.೮೧ |
| ೪. | ತೋಟಗಾರಿಕೆ ಇಲಾಖೆ (ಆರ್ಥಿಕ ನೆರವು) | ೧೨೫ | ೧೪.೯೭ | ೧೦೧ | ೮.೬೩ |
| ೫. | ಭೂ ಸಂರಕ್ಷಣೆ ಇಲಾಖೆ | ೪೦ (ಕೆರೆಗಳು) | ೮.೬೯ | ೮೮ | ೧೧.೦೦ |
| ೬. | ಸಹಕಾರ ಇಲಾಖೆ (ಆರ್ಥಿಕ ನೆರವು) | ೭೯ | ೫.೧೮ | ೩೨ | ೩.೦೦ |
| ೭. | ಸಣ್ಣ ನೀರಾವರಿ | ೩೩ ಹೆಕ್ಟೇರುಗಳು | ೧೪.೧೭ | ೧೯ ೩ ಹಳ್ಳಿಗಳು | ೧೯.೧೯ |
| ೮. | ಜಿಲ್ಲಾ ಪರಿಷತ್, ಗುಲಬರ್ಗಾ | ೩೫ ಕೊಳವೆ ಬಾವಿಗಳು | ೧೩.೧೧ | ೭೦ ಕೊಳವೆ ಬಾವಿಗಳು | ೨೦.೫೮ |
| ೯. | ರಸ್ತೆ ಮತ್ತು ಸೇತುವೆಗಳು | ೧೫೫ ಕೆಲಸಗಳು | ೧೯೦.೭೯ | ೨೮೬ ಕೆಲಸಗಳು | ೧೬೩.೧೦ |
| ೧೦. | ಸಮಾಜ ಕಲ್ಯಾಣ ಯೋಜನೆ | ೧೬೯ | ೧೦.೩೯ | ೨೭೪ | ೧೬.೪೦ |
| ೧೧. | ರೇಷ್ಮೆ ಇಲಾಖೆ | ೧೦೬ | ೦.೫೩ | ೬೫ | ೫.೮೧ |
| ೧೨. | ಅರಣ್ಯ ಇಲಾಖೆ | ೨೪ | ೦.೮೨ | ೪೦ | ೦.೯೯ |
| ೧೩. | ಉಪನಿರ್ದೇಶಕರು, ಹ್ಯಾಂಡ್ ಲೂಮ್ ಮತ್ತು ಟೆಕ್ಸ್‌ಟೈಲ್ಸ್, ಗುಲ್ಬರ್ಗಾ | -- | -- | ೧೦೦ | ೧೦.೦೦ |
| ೧೪. | ಗಂಗಾ ಕಲ್ಯಾಣ | ೧೫ | ೨೫.೭೬ | ೩೭ | ೨೫.೫೩ |
| ೧೫. | ಗ್ರಾಮೀಣ ನೀರು ಪೂರೈಕೆ | ೩೫ | ೩೨.೧೮ | ೧೪೩ | ೪೯.೨೯ |
| ೧೬. | ಗ್ರಾಮೀಣ ವಸತಿ (ಅಂಬೇಡ್ಕರ್ ಮನೆ ನಿರ್ಮಾಣ) | ೧೧೮೮ | ೧೮೫.೭೫ | ೭೪೬ | ೬೦.೬೩ |

## ಪರಿಶಿಷ್ಟ ವರ್ಗದವರ ಕಲ್ಯಾಣ

ಗುಲಬರ್ಗಾ ಜಿಲ್ಲೆಯಲ್ಲಿ ಜನಗಣತಿಯ ಪ್ರಕಾರ ೧೯೮೧ರಲ್ಲಿ ೯೭,೬೨೭ ಹಾಗೂ ೧೯೯೧ರಲ್ಲಿ ೧,೦೬,೩೯೫ ಜನರೂ ಪರಿಶಿಷ್ಟ ಬುಡಕಟ್ಟಿಗೆ ಸೇರಿದವರಾಗಿದ್ದು ಇದು ಕ್ರಮವಾಗಿ ಜಿಲ್ಲೆಯ ಒಟ್ಟು ಜನಸಂಖ್ಯೆಯ ಶೇ. ೪.೬೯ ಮತ್ತು ಶೇ. ೪.೧೪ ರಷ್ಟಾಗಿರುತ್ತದೆ.

ಪರಿಶಿಷ್ಟ ವರ್ಗದ ಮಕ್ಕಳಿಗೆ ಒಂದರಿಂದ ನಾಲ್ಕನೆ ತರಗತಿಯವರೆಗೆ ಉಚಿತವಾಗಿ ಊಟ, ವಸತಿ, ಉಡುಪು ಮತ್ತು ಪುಸ್ತಕಗಳನ್ನು ನೀಡಿ ಶಿಕ್ಷಣವನ್ನು ಕೊಡುವ ಸಲುವಾಗಿ ಜಿಲ್ಲೆಯಲ್ಲಿ ೧೯೯೧-೯೨ರಲ್ಲಿ ೪೦೫ ಮಕ್ಕಳು ಸೌಲಭ್ಯ ಪಡೆದಿದ್ದು ಸರ್ಕಾರವು ಇದಕ್ಕಾಗಿ ೧೦.೦೨ ಲಕ್ಷ ರೂ. ವೆಚ್ಚ ಮಾಡಿದೆ. ೧೯೮೦-೮೧ನೇ ಸಾಲಿನಲ್ಲಿ ೪೭ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳಿದ್ದು, ಇದರಲ್ಲಿ ೩೫ ಬಾಲಕರ ಶಾಲೆಗಳು ಮತ್ತು ೧೨ ಬಾಲಕಿಯರ ಶಾಲೆಗಳೂ ಆಗಿದ್ದು, ಬಾಲಕರ ಸಂ. ೨,೭೧೩ ಮತ್ತು ಬಾಲಕಿಯರ ಸಂ. ೫೭೦ ಆಗಿದ್ದಿತು. ಈ ಶಾಲೆಗಳ ಸಂಖ್ಯೆಯು ೧೯೮೭ರವೆಗೂ ಬದಲಾವಣೆಯಾಗಿಲ್ಲವೆಂದು ವರದಿಯಾಗಿದೆ. ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ರಲ್ಲಿ ಶಾಲೆಗಳ ಸಂಖ್ಯೆ ೭೪ ಆಗಿದ್ದು, ಇದಕ್ಕಾಗಿ ಸರ್ಕಾರ ಮಾಡಿದ ವೆಚ್ಚ ೧೪೬.೭೮ ಲಕ್ಷ ರೂ. ೧೯೧.೩೯ ಲಕ್ಷ ರೂ. ಮತ್ತು ೨೦೩.೧೯ ಲಕ್ಷ ರೂ. ೧೯೯೪-೯೫ನೇ ಸಾಲಿನಲ್ಲಿ ೬೨ ಬಾಲಕರ ವಿದ್ಯಾರ್ಥಿನಿಲಯಗಳೂ ಮತ್ತು ೧೨ ಬಾಲಕಿಯರ ವಿದ್ಯಾರ್ಥಿ ನಿಲಯಗಳೂ ಇದ್ದು, ಅವುಗಳ ತಾಲೂಕುವಾರು ಹಂಚಿಕೆ ಈ ಮುಂದಿನಂತೆ ಇರುವುದು.

ಅಫಜಲ್‌ಪುರ (೯.೧), ಆಳಂದ (೭:೧), ಚಿಂಚೋಳಿ (೭:೧), ಚಿತ್ತಾಪುರ (೧೩:೨), ಗುಲಬರ್ಗಾ (೧೩:೧), ಜೇವರ್ಗಿ (೬:೧), ಶಹಪುರ (೬:೧), ಸುರಪುರ (೬:೧), ಸೇಡಂ (೧೧:೨) ಮತ್ತು ಯಾದಗಿರ್ (೯:೨) (ಆವರಣದಲ್ಲಿರುವ ಮೊದಲನೇ ಸಂಖ್ಯೆ ಬಾಲಕರ ವಿದ್ಯಾರ್ಥಿ ನಿಲಯಗಳು, ಎರಡನೇ ಸಂಖ್ಯೆ ಬಾಲಕಿಯರ ವಿದ್ಯಾರ್ಥಿನಿಲಯಗಳು). ೧೯೯೪-೯೫ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೧೫....ಶಾಲೆಗಳಿದ್ದು, ತಾಲೂಕುವಾರು ವಿವರವೆಂದರೆ, ಆಳಂದ (೧), ಚಿಂಚೋಳಿ (೨), ಚಿತ್ತಾಪುರ (೩), ಗುಲಬರ್ಗಾ (೪), ಅಫಜಲ್‌ಪುರ (೨), ಸೇಡಂ (೧) ಮತ್ತು ಯಾದಗೀರ್ (೨).

ಇದಲ್ಲದೆ ವಿದ್ಯಾರ್ಥಿ ನಿಲಯದಲ್ಲಿ ಸೌಲಭ್ಯ ಪಡೆಯದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಬಹುಮಾನ ಹಣ ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗಿದೆ. ೧೯೯೩-೯೪ ಮತ್ತು ೧೯೯೪-೯೫ನೇ ಸಾಲಿನಲ್ಲಿ ಹಲವು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ** ೧೬.೧೩

| ಕ್ರಮ ಸಂಖ್ಯೆ | ಯೋಜನೆಯ ಹೆಸರು | ೧೯೯೩-೯೪ ಫಲಾನುಭವಿಗಳು | ೧೯೯೩-೯೪ ವೆಚ್ಚ (ಲಕ್ಷ ರೂ.) | ೧೯೯೪-೯೫ ಫಲಾನುಭವಿಗಳು | ೧೯೯೪-೯೫ ವೆಚ್ಚ (ಲಕ್ಷ ರೂ.) |
|---|---|---|---|---|---|
| ೧. | ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | ೧೪,೩೦೬ | ೧೭.೦೫ | ೨೧,೪೬೦ | ೧೮.೦೦ |
| ೨. | ಮೇಟ್ರಿಕ್ ನಂತರ ವಿದ್ಯಾರ್ಥಿವೇತನ | ೬,೫೫೫ | ೧೦೦.೮೯ | ೩,೯೬೩ | ೯೯.೭೫ |
| ೩. | ಪ್ರತಿಭಾ ವಿದ್ಯಾರ್ಥಿವೇತನ | ೧,೫೯೨ | ೧.೮೪ | ೧,೭೦೦ | ೧.೬೦ |
| ೪. | ಎಸ್.ಎಸ್.ಎಲ್.ಸಿ. ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ನೀಡಿದ ಬಹುಮಾನ | ೧೦೨ | ೦,೫೧ | ೪೮ | ೦.೭೪ |
| ೫. | ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗಾಗಿ ಮಾಡಿದ ವೆಚ್ಚ | ೨,೯೧೦ | ೨೧,೭೧ | ೨,೯೯೪ | ೨೪.೧೮ |

ಪರಿಶಿಷ್ಟ ವರ್ಗದ ಯುವಕರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ೧೯೭೯-೮೦ರಲ್ಲಿ ೭೪ ಯುವಕರಿಗೆ ತರಬೇತಿ ಪಡೆಯಲು ೦.೪೧ ಲಕ್ಷ ರೂ. ಆರ್ಥಿಕ ನೆರವನ್ನು ನೀಡಿದೆ. ೧೯೮೩-೮೪ನೇ ಸಾಲಿನಲ್ಲಿ ೮೦೧ ಯುವಕರಿಗೆ ತರಬೇತಿ ನೀಡಲು ಆದ ವೆಚ್ಚ ೫.೪೬ ಲಕ್ಷ ರೂ.ಗಳಾಗಿರುತ್ತದೆ. ೧೯೮೮-೮೯ರಲ್ಲಿ ೧,೨೬೨ ಯುವಕರಿಗೆ ತರಬೇತಿ ನೀಡಲು ಆದ ವೆಚ್ಚ ೨೦.೦೪ ಲಕ್ಷ ರೂ.ಗಳಾಗಿರುತ್ತದೆ. ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಕ್ರಮವಾಗಿ ೮೭ ಮತ್ತು ೯೧ ಯುವಕ ಯುವತಿಯರಿಗೆ ತರಬೇತಿ ನೀಡಲು ಆದ ವೆಚ್ಚ ಕ್ರಮವಾಗಿ ೨.೦೧ ಲಕ್ಷ ರೂ. ಮತ್ತು ೨.೯೨ ಲಕ್ಷ ರೂ. ಆರ್ಥಿಕ ನೆರವು ನೀಡಿದೆ. ೧೯೯೪-೯೫ನೇ ಸಾಲಿನಲ್ಲಿ "ವ್ಯಾಪಾರಕ್ಕಾಗಿ ನೆರವು" ಯೋಜನೆಯು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ಬಂದು ೩೨೫ ಫಲಾನುಭವಿಗಳಿಗೆ ಆದ ವೆಚ್ಚ ೩,೨೫,೦೦೦ ರೂ.ಗಳಾಗಿರುತ್ತದೆ.

೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಪರಿಶಿಷ್ಟ ವರ್ಗದ ಹಲವು ಶೈಕ್ಷಣಿಕ ಸೌಲಭ್ಯಗಳನ್ನು ಪಡೆದವರು ಮತ್ತು ಆದ ವೆಚ್ಚವನ್ನು ಈ ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೪**

| ಕ್ರಮ ಸಂಖ್ಯೆ ಯೋಜನೆ | ಫಲಾನುಭವಿಗಳು | ೧೯೯೩-೯೪ ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳು | ೧೯೯೪-೯೫ ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|
| ೧. ಆಟೋ ರಿಕ್ಷಾ ಚಾಲನೆ ತರಬೇತಿ | ೨೮ | ೦.೩೬ | ೪೧ | ೦.೪೫ |
| ೨. ಲಘುವಾಹನ ಚಾಲನೆ | ೫೦ | ೦.೮೦ | ೨೦೨ | ೨.೮೫ |
| ೩. ಸಿದ್ಧಪಡಿಸಿದ ವಸ್ತುಗಳ ತರಬೇತಿ | ೦೬ | ೦.೧೬ | ೨೦ | ೦.೪೪ |
| ೪. ಕನ್ನಡ ಬೆರಳಚ್ಚು ತರಬೇತಿ | ೩೭ | ೦.೪೮ | ೫೪ | ೦.೭೫ |
| ೫. ಶೀಘ್ರಲಿಪಿ ಕನ್ನಡ ಮತ್ತು ಇಂಗ್ಲೀಷ್ ತರಬೇತಿ | ೧೯ | ೦.೨೫ | ೨೦ | ೦.೩೨ |
| ೬. ಭಾರಿವಾಹನ ಚಾಲನೆ ತರಬೇತಿ | ೧೧ | ೦.೨೮ | ೨೧ | ೦.೪೬ |
| ೭. ಮೋಟಾರ್ ರೀವೈಂಡಿಂಗ್ ತರಬೇತಿ | ೧೦ | ೦.೧೯ | ೧೦ | ೦.೨೪ |
| ೮. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ತರಬೇತಿ | ೧೩ | ೦.೮೩ | ೨೦ | ೦.೩೫ |
| ೯. ಗೃಹಬಳಕೆ ವಿದ್ಯುತ್ ಉಪಕರಣಗಳ ರಿಪೇರಿ ತರಬೇತಿ | ೦೬ | ೦.೧೩ | ೧೦ | ೦.೧೭ |
| ೧೦. ದ್ವಿಚಕ್ರ ವಾಹನ ದುರಸ್ತಿ ತರಬೇತಿ | ೦೩ | ೦.೦೫ | - | - |

ಪರಿಶಿಷ್ಟ ವರ್ಗದ ಜನರ ಆರ್ಥಿಕ ಅಭಿವೃದ್ಧಿಗಾಗಿ ಜಿಲ್ಲೆಯಲ್ಲಿ ಪರಿಶಿಷ್ಟ ವರ್ಗ ಉಪ ಯೋಜನೆ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಈ ಜನರ ಕುಟುಂಬಗಳನ್ನು ಬಡತನ ರೇಖೆಯಿಂದ ಮೇಲೆ ತರಲು ಅನೇಕ ಅಭಿವೃದ್ಧಿ ಇಲಾಖೆಗಳು ಆರ್ಥಿಕ ನೆರವು ನೀಡುತ್ತಿವೆ.

೧೯೯೩-೯೪ ಮತ್ತು ೧೯೯೪-೯೫ ಗಳಲ್ಲಿ ವಿವಿಧ ಇಲಾಖೆಗಳು ನೀಡಿದ ಆರ್ಥಿಕ ನೆರವು ಹಾಗೂ ಸಾಧನೆಗಳ ವಿವರ.

**ಕೋಷ್ಟಕ ೧೬.೧೫**

| ಕ್ರಮ ಸಂಖ್ಯೆ | ಇಲಾಖೆ ಹೆಸರು | ೧೯೯೩-೯೪ | | ೧೯೯೪-೯೫ | |
|---|---|---|---|---|---|
| | | ವೆಚ್ಚ | ಭೌತಿಕ ಸಾಧನೆ (ಫಲಾನು ಭವಿಗಳು) | ವೆಚ್ಚ | ಭೌತಿಕ ಸಾಧನೆ (ಫಲಾನು ಭವಿಗಳು) |
| ೧. | ಗ್ರಾಮೀಣ ನೀರು ಪೂರೈಕೆ | ೩೨.೧೮ | ೨೫ | ೪೯.೨೯ | ೧೪೩ |
| ೨. | ಗ್ರಾಮೀಣ ವಸತಿ (ಅಂಬೇಡ್ಕರ್ ಮನೆ ನಿರ್ಮಾಣ) | ೧೮೫.೭೫ | ೧೧೮೮ | ೬೦.೬೩ | ೭೪೨ |
| ೩. | ತೋಟಗಾರಿಕೆ | ೨.೭೧ | ೨೭೦ | ೩.೮೯ | ೨೨೮ |
| ೪. | ವ್ಯವಸಾಯ | ೯.೯೨ | ೨೨೫ | ೧೦.೯೮ | ೨೫೮ |
| ೫. | ಪಶು ಸಂಗೋಪನೆ | ೬.೪೧ | ೯೦ | ೫.೮೧ | ೬೫ |
| ೬. | ಅರಣ್ಯ ಇಲಾಖೆ | ೦.೮೨ | ೨೪ | ೦.೯೯ | ೪೦ |
| ೭. | ರೇಷ್ಮೆ ಇಲಾಖೆ | ೦.೫೩ | ೧೦೬ | ೮.೩೫ | ೨೮೨ |
| ೮. | ಭೂಸಾರ ಸಂರಕ್ಷಣೆ | ೮.೬೯ | ೪೦ | ೧೧.೦೦ | ೮೬ |
| ೯. | ಸಮಾಜ ಕಲ್ಯಾಣ ಇಲಾಖೆ | ೪೧.೫೦ | ೧೭೪ | ೧೭.೯೨ | ೬೩ |
| ೧೦. | ರಸ್ತೆ ಮತ್ತು ಸೇತುವೆಗಳು | ೧೯೩.೭೯ | ೧೫೫ | ೧೬೩.೧೦ | ೨೮೬ |

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ

ರಾಜ್ಯ ವ್ಯಾಪ್ತಿಯನ್ನು ಹೊಂದಿದ ಈ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಡುಬಡವರಿಗೆ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ೧೯೭೫ರಲ್ಲಿ ಸ್ಥಾಪಿತವಾಗಿ, ಇದರ ಜಿಲ್ಲಾ ಕಛೇರಿಯು ೧೯೭೭ರಲ್ಲಿ ಪ್ರಾರಂಭವಾಯಿತು. ನಿಗಮವು ಈ ವರ್ಗಗಳ ಜನರು ಸ್ವಂತ ಉದ್ಯೋಗವನ್ನು ಕೈಗೊಳ್ಳಲು ಅರ್ಹರಾದವರಿಗೆ ತಲಾ ೩,೦೦೦ ರೂ. ಸಹಾಯ ಧನವನ್ನು ಹಾಗೂ ಶಪ. ೪ ರ ಬಡ್ಡಿಯಂತೆ ಗರಿಷ್ಟ ಮೊತ್ತ ೮,೭೫೦ ರೂ.ಗಳನ್ನು ಬೀಜ ಧನವನ್ನಾಗಿಯೂ ನೀಡಿ, ಉಳಿದ ಹಣವನ್ನು ರಾಷ್ಟ್ರೀಕೃತ ಬ್ಯಾಂಕಿನ ಮೂಲಕ ಸಾಲದ ಸೌಲಭ್ಯವನ್ನಾಗಿ ಒದಗಿಸುತ್ತದೆ. ನಿಗಮಕ್ಕೆ ಪ್ರತಿ ಫಲಾನುಭವಿಗೂ ೧೦,೦೦ರೂ. ನಿಂದ ೩೫,೦೦೦ ರೂ.ವರೆಗೆ ಸಾಲದ ಸೌಲಭ್ಯವನ್ನು ಒದಗಿಸುವ ಅವಕಾಶವಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಕೃಷಿ ಕಾರ್ಮಿಕರು ಜಮೀನು ಕೊಳ್ಳಲು ಗರಿಷ್ಟ ಮಿತಿ ೨೦,೦೦೦ ರೂ.ವರೆವಿಗೆ ಸಾಲವನ್ನು ಮಂಜೂರು ಮಾಡಿ, ಇದರ ಶೇಕಡ ೫೦ ರಷ್ಟನ್ನು ಸಹಾಯಧನವನ್ನಾಗಿ ನೀಡುತ್ತದೆ. ಅಲ್ಲದೆ ನೀರಾವರಿಗಾಗಿ ಕೊಳವೆ ಭಾವಿಯನ್ನು ತೋಡಿಸಲು ಆರ್ಥಿಕ ನೆರವನ್ನು ನೀಡುವುದು, ವಾಹನ ಚಾಲನೆ, ರೇಡಿಯೊ ಮತ್ತು ಟಿ.ವಿ. ರಿಪೇರಿ. ಕೈಮಗ್ಗ, ನೇಯ್ಗೆ, ಚರ್ಮಗಾರಿಕೆ, ಸೈಕಲ್ ರಿಕ್ಷಾ ಚಾಲನೆ, ಹೈನುಗಾರಿಕೆ ಇವುಗಳ ತರಬೇತಿ ಮತ್ತು ಸೈಕಲ್-ಅಂಗಡಿ, ಪೆಟ್ಟಿಗೆ ಅಂಗಡಿ ಇವೇ ಮುಂತಾದವುಗಳನ್ನು ಹೊಂದುವಲ್ಲಿ ಆರ್ಥಿಕ ನೆರವು ಒದಗಿಸಲಾಗುವುದು.

## ಭೂ ಒಡೆತನ ಯೋಜನೆ

ಈ ಯೋಜನೆಯಡಿಯಲ್ಲಿ ಭೂರಹಿತ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಕೃಷಿ ಕಾರ್ಮಿಕರಿಗೆ ೨೦,೦೦೦ ರೂ.ಗಳಲ್ಲಿ ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರೀ ಜಮೀನು ಖರೀದಿ ಮಾಡಿಕೊಡಲಾಗುವುದು. ಇದರಲ್ಲಿ (ಶೇ. 50 ರಷ್ಟು ಸಹಾಯಧನಮತ್ತು ಶೇ. 50 ರಷ್ಟು ಅವಧಿ ಸಾಲವಾಗಿರುತ್ತದೆ.) ಶೇಕಡ ೬ ಬಡ್ಡಿಯನ್ನು ಆಕರಿಸಲಾಗುವುದು. ಈ ಸಾಲವನ್ನು ೧೦ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕು. ಜಮೀನು ಮಾರಾಟಗಾರರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಸೇರಿದವರಾಗಿರಬಾರದು. ೧೯೯೪-೯೫ನೇ ಸಾಲಿನಲ್ಲಿ ೧೭೭ ಪರಿಶಿಷ್ಟ ಜಾತಿಯವರು

ಇದರ ಲಾಭ ಪಡೆದು ೩೨೭.೩೬ ಎಕರೆ ಖರೀದಿಸಲು ಆದ ವೆಚ್ಚ ೩೦.೯೬ ಲಕ್ಷ ರೂ.ಗಳಾಗಿರುತ್ತದೆ. ಇದೇ ಸಾಲಿನಲ್ಲಿ ಇಬ್ಬರು ಪರಿಶಿಷ್ಟ ಪಂಗಡದವರಿಗೆ ನಾಲ್ಕು ಎಕರೆ ಜಮೀನು ಖರೀದಿಸಲು ಆದ ವೆಚ್ಚ ೨೨,೩೭೪ ರೂ.ಗಳಾಗಿರುತ್ತದೆ.

### ಸ್ವಂತ ಉದ್ಯೋಗ ಯೋಜನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನಿರುದ್ಯೋಗಿ ಯುವಕ ಯುವತಿಯರಿಗೆ, ಅದರಲ್ಲೂ ಗ್ರಾಮಾಂತರ ಪ್ರದೇಶದ ಜನರಿಗೆ ಸ್ವಂತ ಉದ್ಯೋಗ ಪ್ರಾರಂಭಿಸಲು ಹಾಗೂ ನಗರ ಪ್ರದೇಶಗಳಲ್ಲಿ ವಾಸಿಸುತ್ತಿರುವ ವಿದ್ಯಾವಂತ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳು ಈ ಯೋಜನೆ ಸೌಲಭ್ಯ ಪಡೆಯಬಹುದು. ಮುಖ್ಯವಾದ ಉದ್ಯೋಗಗಳೆಂದರೆ, ನೇಯ್ಗೆ, ರೇಷ್ಮೆ ನೂಲು ಸುತ್ತುವುದು, ಬೆರಳಚ್ಚು ಯಂತ್ರ ತರಬೇತಿ, ಹೈನುಗಾರಿಕೆ, ಚರ್ಮಗಾರಿಕೆ, ಸೈಕಲ್ಲು ಅಂಗಡಿ, ಪೆಟ್ಟಿಗೆ ಅಂಗಡಿ ಹಾಗೂ ಇತರ ಉದ್ಯೋಗಗಳಿಗೆ ೨೫,೦೦೦ ರೂ.ವರೆಗೆ, ಘಟಕದ ವೆಚ್ಚಕ್ಕೆ ಶೇಕಡ ೩೩.೩೩ ರಷ್ಟು ಗರಿಷ್ಟ ಮಿತಿಗೊಳಪಟ್ಟು ಸಹಾಯಧನ ನಿಗಮದಿಂದ ಮಂಜೂರು ಮಾಡಲಾಗುವುದು. ಉಳಿದ ಭಾಗವನ್ನು ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಲ ಮಂಜೂರು ಮಾಡಲಾಗುವುದು. ಶೇಕಡ ೫ ರಷ್ಟನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಆಟೋ ರಿಕ್ಷಾ ಖರೀದಿಸಲು ಅರ್ಹ ಅಭ್ಯರ್ಥಿಗಳಿಗೆ ೩,೦೦೦ ರೂ. ಸಹಾಯಧನ ಹಾಗೂ ಶೇಕಡ ೨೫ ಬೀಜಧನ ನೀಡಲಾಗುವುದು. ಉಳಿದ ಹಣ ಬ್ಯಾಂಕಿನ ಸಾಲವಾಗಿರುತ್ತದೆ. ೧೯೯೪-೯೫ನೇ ಸಾಲಿನಲ್ಲಿ ೧,೨೮೩ ಜನರು ಲಾಭ ಪಡೆದಿದ್ದು ಸರ್ಕಾರಕ್ಕಾದ ವೆಚ್ಚ ೬೮.೧೭ ಲಕ್ಷ ರೂ.ಗಳಾಗಿರುತ್ತದೆ.

### ಐ.ಎಸ್.ಟಿ. ಯೋಜನೆ

ಈ ಘಟಕ ವೆಚ್ಚವು ೩೫,೦೦೦ ರೂ.ಗಳಿಗೆ ಮೇಲ್ಪಟ್ಟು ೧೦ ಲಕ್ಷ ರೂ.ವರೆವಿಗೆ ಆರ್ಥಿಕ ನೆರವನ್ನು ಈ ಯೋಜನೆಯಡಿಯಲ್ಲಿ ನೀಡಲಾಗುವುದು. ನಿಗಮದಿಂದ ಶೇಕಡ ೨೦ ರಷ್ಟು ಅಂದರೆ ಗರಿಷ್ಠ ೫,೦೦೦ ರೂ. ಬೀಜಧನ ರೂಪದಲ್ಲಿ ಮಂಜೂರು ಮಾಡಲಾಗುವುದು. ಈ ಹಣಕ್ಕೆ ಶೇಕಡ ೨ ರಷ್ಟು ಸೇವಾ ಶುಲ್ಕ ವಿಧಿಸಲಾಗುವುದು. ಇದಲ್ಲದೆ ಶೇಕಡ ೫ ರಷ್ಟನ್ನು ಫಲಾನುಭವಿ ಭರಿಸಬೇಕಾಗುವುದು,. ಉಳಿದ ಭಾಗದ ಮೊತ್ತವನ್ನು ಬ್ಯಾಂಕ್ ಅಥವಾ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಮಂಜೂರು ಮಾಡುತ್ತದೆ. ೧೯೯೪-೯೫ನೇ ಸಾಲಿನಲ್ಲಿ ೫೧ ಫಲಾನುಭವಿಗಳು ಇದರ ಸೌಲಭ್ಯ ಪಡೆದು ಇದಕ್ಕಾಗಿ ಆದ ವೆಚ್ಚ ೨೧.೮೮ ಲಕ್ಷ ರೂ.ಗಳಾಗಿರುತ್ತದೆ.

### ದೇವದಾಸಿ ಪುನರ್ವಸತಿ ಯೋಜನೆ

ದೇವದಾಸಿ ಪದ್ಧತಿಯಿಂದ ಮಹಿಳೆಯನ್ನು ವಿಮುಕ್ತಿಗೊಳಿಸುವ ಉದ್ದೇಶದಿಂದ ನಿಗಮವು ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದೆ. ದೇವದಾಸಿ ವೃತ್ತಿಯನ್ನು ತೊರೆದು ಸಮಾಜದಲ್ಲಿ ಮಹಿಳೆಯರು ಸ್ವಾವಲಂಬಿಗಳಾಗಿ ಜೀವಿಸಲು ಹಾಗೂ ಸ್ವಂತ ಉದ್ಯೋಗಗಳಲ್ಲಿ ತೊಡಗಲು ಯೋಜನೆವರೆಗೆ ಕಲ್ಪಿಸಿ ಇದರಲ್ಲಿ ಶೇಕಡ ೫೦ರಷ್ಟು ಅಂದರೆ ಗರಿಷ್ಟ ೬,೦೦೦ ರೂ. ವರೆವಿಗೆ ಸಹಾಯಧನ ಮಂಜೂರು ಮಾಡಲಾಗುತ್ತಿದೆ. ಉಳಿದ ಹಣವನ್ನು ಬ್ಯಾಂಕು ಸಾಲ ರೂಪದಲ್ಲಿ ನೀಡುತ್ತಿದೆ. ಇದಲ್ಲದೆ ಭೂ ಒಡೆತನ ಯೋಜನೆಯನ್ನು ಸಹಾ ದೇವದಾಸಿ ಮಹಿಳೆಯರಿಗೆ ಕಲ್ಪಿಸಿದ್ದು, ಪ್ರತಿಫಲಾನುಭವಿಗೆ ೩೦,೦೦೦ ರೂ. ವರೆಗೆ ಮಂಜೂರು ಮಾಡಲಾಗುವುದು. ಇದರಲ್ಲಿ ಶೇಕಡ ೫೦ರಷ್ಟು ಅಂದರೆ ಗರಿಷ್ಟ ೧೫,೦೦೦ ರೂ. ಸಹಾಯಧನ ಶಏಕಡ ೫೦ರಷ್ಟು ಅಂದರೆ ಗರಿಷ್ಟ ೧೫,೦೦೦ ರೂ. ಬೀಜಧನ ಸಾಲವಾಗಿರುವುದು. ೧೯೯೪-೯೫ನೇ ಸಾಲಿನಲ್ಲಿ ೧೦೪ ಫಲಾನುಭವಿಗಳು ಇದರ ಸೌಲಭ್ಯವನ್ನು ಪಡೆದು ಇದಕ್ಕಾಗಿ ಆದ ವೆಚ್ಚ ೧೫.೦೧ ಲಕ್ಷ ರೂ.ಗಳಾಗಿರುತ್ತದೆ.

### ಸಣ್ಣ ವ್ಯಾಪಾರಕ್ಕಾಗಿ ನೆರವು

ಈ ಯೋಜನೆ ವಿಶೇಷವಾಗಿ ನಗರ ಪ್ರದೇಶಗಳಲ್ಲಿನ ಕೊಳಚೆ ಪ್ರದೇಶಗಳಲ್ಲಿ ವಾಸಿಸುವವರಿಗೆ ಬೀದಿಗಳಲ್ಲಿ ತರಕಾರಿ, ಹಣ್ಣು, ಹೂವು ಇತ್ಯಾದಿ ಪದಾರ್ಥಗಳನ್ನು ವ್ಯಾಪಾರ ಮಾಡುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ೫೦೦ ರೂ.ನಿಂದ ೧,೦೦೦ ರೂ.ವರೆಗೆ ಶೇಕಡ ೪ರ ಬಡ್ಡಿ ದರದಲ್ಲಿ ಸಾಲವಾಗಿ ನಿಗಮ ನೀಡುತ್ತದೆ. ಇದಲ್ಲದೆ ತಳ್ಳುವ ಗಾಡಿಗಳ ಮೂಲಕ ವ್ಯಾಪಾರ ಮಾಡಲು ೧,೮೦೦ ರೂ.ವರೆಗೆ ಬೀಜಧನ ಸಾಲವನ್ನು ನಿಗಮವು ಮಂಜೂರು

ಮಾಡುತ್ತದೆ. ಸಾಲದ ಹಣವನ್ನು ೪೦ ವಾರಗಳಲ್ಲಿ ಶೇಕಡ ೪ರ ಬಡ್ಡಿ ದರದಲ್ಲಿ ಹಿಂತಿರುಗಿಸಬೇಕು. ಫಲಾನುಭವಿಯು ಶೇಕಡ ೫೦ರಷ್ಟು ಸಾಲ ಸಕಾಲದಲ್ಲಿ ಮರು ಪಾವತಿ ಮಾಡಿದಲ್ಲಿ ಉಳಿದ ಶೇಕಡ ೫೦ ರಷ್ಟನ್ನು ಸಹಾಯಧನವೆಂದು ಪರಿಗಣಿಸಲಾಗುವುದು. ಅಲ್ಲಿಯವರೆಗೆ ಇಡೀ ಮೊತ್ತ ಸಾಲ ರೂಪದಲ್ಲಿಯೇ ಇರುತ್ತದೆ. ಫಲಾನುಭವಿ ಸಕಾಲದಲ್ಲಿ ಸಾಲ ಮರುಪಾವತಿ ಮಾಡದಿದ್ದಲ್ಲಿ ಸಹಾಯಧನ ನೀಡಲಾಗುವುದಿಲ್ಲ. ೧೯೯೪-೯೫ನೇ ಸಾಲಿನಲ್ಲಿ ೩.೨೫ ಫಲಾನುಭವಿಗಳು ಇದರ ಸೌಲಭ್ಯವನ್ನು ಪಡೆದು ಇದಕ್ಕಾಗಿ ಸರ್ಕಾರ ಮಾಡಿದ ವೆಚ್ಚ ೩.೨೫ ಲಕ್ಷ ರೂ.ಗಳಾಗಿರುತ್ತದೆ.

## ತರಬೇತಿ ಯೋಜನೆ

ಈ ಯೋಜನೆಯಡಿಯಲ್ಲಿ ೧೯೯೩-೯೪ನೇ ಸಾಲಿಗೆ ೧೮೯ ನಿರುದ್ಯೋಗಿ ವಿದ್ಯಾವಂತ ಯುವಕ, ಯುವಕರಿಗೆ ವಿವಿದ ಕಸುಬುಗಳಲ್ಲಿ ತರಬೇತಿ ಕೊಡಿಸುವ ಗುರಿ ಹೊಂದಲಾಗಿ ಇದಕ್ಕಾಗಿ ಆದ ವೆಚ್ಚ ೩.೭೬ ಲಕ್ಷ ರೂ.ಗಳಾಗಿರುತ್ತದೆ. ಇದಲ್ಲದೆ ಬೆರಳಚ್ಚು, ಶೀಘ್ರಲಿಪಿ, ರೇಡಿಯೋ ಮತ್ತು ಟಿ.ವಿ. ತರಬೇತಿ, ವಾಹನ ಚಾಲನೆ ಹಾಗೂ ಕಂಪ್ಯೂಟರ್ ಪ್ರೋಗ್ರಾಮ್ಸ್ ವಿಷಯಗಳಲ್ಲಿ ಆಯ್ದ ಸಂಸ್ಥೆಗಳ ಮೂಲಕ ತರಬೇತಿ ನೀಡಿ ಹಾಗೂ ಅಭ್ಯರ್ಥಿಗಳಿಗೆ ಮಾಸಿಕ ಶಿಷ್ಯ ವೇತನವನ್ನು ಕೂಡ ಮಂಜೂರು ಮಾಡಿದೆ. ಈ ಯೋಜನೆಯಡಿಯಲ್ಲಿ ೧೯೯೪-೯೫ನೇ ಸಾಲಿನಲ್ಲಿ ೪೦೬ ಫಲಾನುಭವಿಗಳು ಇದರ ಸೌಲಭ್ಯ ಪಡೆದು ಇದಕ್ಕಾಗಿ ಆದ ವೆಚ್ಚ ೪,೧೪ ಲಕ್ಷ ರೂ. ಆಗಿರುತ್ತದೆ.

ಕೆಲವು ಸ್ವಯಂ ಸೇವಾ ಸಂಸ್ಥೆಗಳೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಕಲ್ಯಾಣ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಕೈಗೊಂಡಿವೆ. ಗುಲಬರ್ಗಾದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಸಂಸ್ಥೆ (೧೯೫೮) ಪ್ರಾರಂಭಗೊಂಡಿದ್ದು, ಪ್ರತಿವರ್ಷ ೪೫ ವಿದ್ಯಾರ್ಥಿಗಳಿಗೆ ಉಚಿತ ಊಟ ಮತ್ತು ವಸತಿಯನ್ನು ಒದಗಿಸುವರು. ಗಾಂಧಿ ತತ್ವ ಪ್ರಚಾರ ಕೇಂದ್ರ ಗುಲಬರ್ಗಾ (೧೯೬೦) ದಲ್ಲಿ ಪ್ರಾರಂಭವಾಗಿ, ಅನಂತರ ಆಳಂದ, ಕಮಲಾಪುರ ಮತ್ತು ಯಾದಗೀರ್‌ಗಳಲ್ಲಿ ಕೇಂದ್ರಗಳಾದವು. ದಲಿತ ವರ್ಗದವವ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವಂತಹ ಕಾರ್ಯಕ್ರಮಗಳನ್ನು ರೂಪಿಸಿತ್ತು. ಗುಲಬರ್ಗಾದ ಭಾರತ್ ಸೇವಕ್ ಸಮಾಜ್ (೧೯೬೪-೬೫) ಪ್ರಾರಂಭವಾಗಿ ಯುವಕರಿಗೆ ಸಮಾಜ ಸೇವಾ ಶಿಬಿರಗಳನ್ನು ಏರ್ಪಡಿಸುವುದು ಅಲ್ಲದೇ ಬೇಸಿಗೆ ಮತ್ತು ಕ್ರಿಸ್‌ಮಸ್ ರಜೆಗಳಲ್ಲಿ ಶಿಬಿರಗಳನ್ನು ನಡೆಸುವ ಕಾರ್ಯಕ್ರಮ ಹಮ್ಮಿಕ್ಕೊಂಡಿದೆ.

## ಜಿಲ್ಲಾ ಕಾನೂನು ನೆರವು ಸಮಿತಿ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ ಉಚಿತ ಕಾನೂನು ನೀಡುವ ಸಲುವಾಗಿ ಕಾನೂನು ನೆರವು ಸಮಿತಿಯು ಜಿಲ್ಲೆಯಲ್ಲಿ ೧೯೮೩ ರಿಂದ ಕಾರ್ಯನಿರ್ವಹಿಸುತ್ತಿದೆ. ಈ ಯೋಜನೆಯಲ್ಲಿ ವಕೀಲರ ಹಾಗೂ ಕೋರ್ಟ್ ಸ್ಟಾಂಪ್ ಶುಲ್ಕವನ್ನು ಇಲಾಖೆಯು ನೀಡುತ್ತಿದೆ. ಈ ಯೋಜನೆಯಲ್ಲಿ ೧೯೮೪-೮೫ ರಲ್ಲಿ ೧೫೮ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಸೌಲಭ್ಯ ಪಡೆದಿದ್ದು ಇದಕ್ಕಾಗಿ ೩,೬೫೦ ರೂ.ಗಳನ್ನು ವೆಚ್ಚ ಮಾಡಿದೆ. ೧೯೮೮-೮೯ನೇ ಸಾಲಿನಲ್ಲಿ ೨೨ ಫಲಾನುಭವಿಗಳು ಸೌಲಭ್ಯ ಪಡೆದು, ಇದಕ್ಕಾಗಿ ೨೪,೯೭೭ ರೂ.ಗಳು ವೆಚ್ಚ ಮಾಡಿದೆ. ಕಳೆದ ಐದು ವರ್ಷಗಳಲ್ಲಿ ಸೌಲಭ್ಯ ಹೊಂದಿದವರ ಸಂಖ್ಯೆ ಮತ್ತು ಆದ ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೬**

| ಕ್ರಮ ಸಂಖ್ಯೆ | ವರ್ಷ | ಫಲಾನುಭವಿಗಳು | ವೆಚ್ಚ ರೂ.ಗಳಲ್ಲಿ |
|---|---|---|---|
| ೧. | ೧೯೯೦-೯೧ | ೨೬ | ೨೩.೨೮೬ |
| ೨. | ೧೯೯೧-೯೨ | ೧೪ | ೨೮೭೪೧ |
| ೩. | ೧೯೯೨-೯೩ | ೦೪ | ೧೯೪೫೭ |
| ೪. | ೧೯೯೩-೯೪ | ೦೭ | ೧೯,೭೪೮ |
| ೫. | ೧೯೯೪-೯೫ | ೦೨ | ೩೮೩೧೫ |

## ಹಿಂದುಳಿದ ವರ್ಗದವರ ಕಲ್ಯಾಣ

ಕರ್ನಾಟಕದಲ್ಲಿ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಸಮಾಜ ಸುಧಾರಣೆಯ ಆಂದೋಲನವನ್ನು ಆರಂಭಿಸಿದರು. ಕಾಲಕ್ರಮೇಣ ಬ್ರಾಹ್ಮಣೇತರರು ಆಧುನಿಕ ಶಿಕ್ಷಣ ಪಡೆದು ಸಂಘಟನೆಗೊಂಡು ಸಾಮಾಜಿಕ ಸಮಾನತೆಗಾಗಿ ಒತ್ತಾಯಿಸಲು ಆರಂಭಿಸಿದರು. ೧೯ ಮತ್ತು ೨೦ನೇ ಶತಮಾನದಲ್ಲಿ ಈ ಆಂದೋಲನವು ಜಿಲ್ಲೆಯಲ್ಲಿ ಹೆಚ್ಚು ವ್ಯಾಪಕತೆಯನ್ನು ಪಡೆಯಿತು. ಇವರ ನಿಲುವನ್ನು ಗುಲಬರ್ಗಾದಲ್ಲಿನ ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಸಂಸ್ಥೆ (೧೯೫೮), ಗಂಗಾಮತ ನಿರ್ಮಾಣ ಕೋ ಆಪರೇಟಿವ್ ಸೊಸೈಟಿ, ಬ್ರಹ್ಮಪುರ, ಗುಲಬರ್ಗಾ; ಗುಲಬರ್ಗಾದ ಗಾಂಧಿ ತತ್ವ ಪ್ರಚಾರ ಕೇಂದ್ರ (೧೯೬೦), ಗುಲಬರ್ಗಾದ ಭಾರತ್ ಸೇವಕ್ ಸಮಾಜ್ (೧೯೬೫), ಗುಲಬರ್ಗಾದ ಭೀಮ ಸೇವಾ ಸಂಘಟನೆ (೧೯೬೮), ಗುಲಬರ್ಗಾದಲ್ಲಿನ ದಲಿತ ಸಂಘರ್ಷ ಸಮಿತಿ, ದಲಿತ ಸಂಘರ್ಷ ಸೇವಾ, ಭೀಮರತ್ನಾ ಜಿಲ್ಲಾ ದಲಿತ್ ಕಲಾವಿದರ ಸಂಘ, ಅಂಬೇಡ್ಕರ ಸಾಹಿತ್ಯ ಪ್ರಚಾರ ಸಮಿತಿ ಮತ್ತು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಘಟನೆಗಳು ಹಿಂದುಳಿದವರ ಪ್ರಗತಿಗೆ ಯತ್ನಿಸಿದವು. ಶಿಕ್ಷಣ ಸಂಸ್ಥೆ ಆರಂಭಿಸುವುದು, ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಹಾಸ್ಟೆಲ್ ಮುಂತಾದ ಸೌಲಭ್ಯಗಳನ್ನು ಆರಂಭಿಸಿದರು. ಹಿಂದುಳಿದವರಿಗೆ ನೌಕರಿ, ಶಿಕ್ಷಣ ಸೌಲಭ್ಯ ಹೆಚ್ಚಿಸಿದವು. ೧೯೫೦ರ ನಂತರ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಈ ಎಲ್ಲ ಚಟುವಟಿಕೆಗಳನ್ನು ತನ್ನದಾಗಿಸಿಕೊಂಡಿತು. (ವಿವರಕ್ಕೆ ಅಧ್ಯಾಯ ೨ ನೋಡಿ).

೧೯೫೩ರಲ್ಲಿ ಭಾರತ ಸರ್ಕಾರವು ಹಿಂದುಳಿದ ವರ್ಗಗಳನ್ನು ಗುರ್ತಿಸಿ, ಶೈಕ್ಷಣಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಅವರಿಗೆ ನೀಡಬೇಕಾದ ಮೀಸಲಾತಿಯನ್ನು ನಿರ್ಧರಿಸಲು ಕಾಕಾ ಕಾಲೇಲಕರ್ ಆಯೋಗವನ್ನು ನೇಮಕ ಮಾಡಿತು. ಆದರೆ ಇದರ ಶಿಫಾರಸು ತೃಪ್ತಿಕರವಾಗಿರಲಿಲ್ಲವಾದ್ದರಿಂದ ಹಿಂದುಳಿದ ವರ್ಗಗಳಿಗೆ ರಕ್ಷಣೆ ನೀಡಲು ರಾಜ್ಯಗಳು ಸೂಕ್ತ ಆಯೋಗಗಳನ್ನು ರಚಿಸಿಕೊಳ್ಳಲು ಭಾರತ ಸರ್ಕಾರವು ಆದೇಶ ನೀಡಿತ್ತು. ೧೯೫೮ರಲ್ಲಿ ಕರ್ನಾಟಕ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿ, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಜನಾಂಗಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡ ೬೫ ರಷ್ಟು ಸ್ಥಾನಗಳನ್ನು ಮೀಸಲಿಡುವಂತೆ ಆದೇಶ ನೀಡಿತು. ಈ ಆಜ್ಞೆಯನ್ನು ಉಚ್ಚ ನ್ಯಾಯಾಲಯ ಅನೂರ್ಜಿತಗೊಳಿಸಿತು. ಅನಂತರ ೧೯೫೯ರಲ್ಲಿ ಕರ್ನಾಟಕ ಸರ್ಕಾರ ಈ ವಿಷಯದ ಬಗ್ಗೆ ಒಂದು ಆಜ್ಞೆ ಹೊರಡಿಸಿ ವಿದ್ಯಾ ಸಂಸ್ಥೆಗಳಲ್ಲಿ ಹಿಂದುಳಿದ ವರ್ಗದವರಿಗೆ ಶೇಕಡ ೬೫ರಷ್ಟು ಮೀಸಲಾತಿ ಇರಬೇಕೆಂದು ಘೋಷಿಸಿತು. ಈ ಆಜ್ಞೆಯನ್ನು ಉಚ್ಚ ನ್ಯಾಯಾಲಯ ಮತ್ತೊಮ್ಮೆ ಅನೂರ್ಜಿತಗೊಳಿಸಲಾಗಿ, ೧೯೬೦ರಲ್ಲಿ ಡಾ. ಆರ್.ನಾಗನಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರೂಪಿಸಿತು. ಈ ಸಮಿತಿಯು ಶಿಫಾರಸ್ಸಿನ ಮೇಲೆ ಸರ್ಕಾರವು ೧೯೬೨ರಲ್ಲಿ ಹೊರಡಿಸಿದ ಮೀಸಲಾತಿ ಆಜ್ಞೆಯನ್ನು ೧೯೬೩ರಲ್ಲಿ ಶ್ರೇಷ್ಠ ನ್ಯಾಯಾಲಯವು ಅನೂರ್ಜಿತಗೊಳಿಸಿತು. ಇದರ ಪರಿಣಾಮವಾಗಿ ೧೯೭೨ರಲ್ಲಿ ಎಲ್.ಜಿ. ಹಾವನೂರ್‌ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಹಿಂದುಳಿದ ವರ್ಗದ ಆಯೋಗವನ್ನು ರಚಿಸಿತು. ಇದರ ಶಿಫಾರಸಿನಂತೆ ೧೯೭೭ರಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ನಿರ್ದೇಶನಾಲಯವನ್ನು ಆರಂಭಿಸಿ, ಇದರ ಅಧೀನದಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಜಿಲ್ಲಾ ಮಟ್ಟದ ಅಧಿಕಾರಿಗಳ ಕಛೇರಿಗಳನ್ನು ಪ್ರಾರಂಭಿಸಿತು. ಇದಕ್ಕೆ ಮುಂಚೆ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳನ್ನು ಸಮಾಜ ಕಲ್ಯಾಣ ಇಲಾಖೆಯೇ ನಿರ್ವಹಿಸುತ್ತಿತ್ತು. ಹಾವನೂರ್ ಆಯೋಗದ ವರದಿಯನ್ನು ಜಾರಿಗೊಳಿಸಿದ ಸರ್ಕಾರ ಆಜ್ಞೆಯನ್ನು ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ಉಚ್ಚ ನ್ಯಾಯಾಲಯಕ್ಕೆ ರಾಜ್ಯ ಸರ್ಕಾರವು ಒಂದು ಮುಚ್ಚಳಿಕೆಯನ್ನು ನೀಡಿ ಕರ್ನಾಟಕದ ಎರಡನೇ ಹಿಂದುಳಿದ ವರ್ಗಗಳ ಆಯೊಗವನ್ನು ನ್ಯಾಯಮೂರ್ತಿ ಬಿ. ವೆಂಕಟಸ್ವಾಮಿ, ಅವರ ಅಧ್ಯಕ್ಷತೆಯಲ್ಲಿ ರಚನೆಯಾಯಿತು. ಇದು ೧೯೮೬ರಲ್ಲಿ ವರದಿಯನ್ನು ಸಲ್ಲಿಸಿತು. ಆದರೆ ಕಾರಣಾಂತರಗಳಿಂದ ಸರ್ಕಾರವು ಇದನ್ನು ಜಾರಿಗೊಳಿಸದೆ ಒಂದು ಮಧ್ಯಂತರ ಆಜ್ಞೆಯನ್ನು ಮೂರು ವರ್ಷಗಳ ಕಾಲಕ್ಕೆ ಹೊರಡಿಸಿ, ನ್ಯಾಯಮೂರ್ತಿ ಚಿನ್ನಪ್ಪರೆಡ್ಡಿ ಏಕವ್ಯಕ್ತಿ ಆಯೋಗವನ್ನು ರಚಿಸಿತು. ಈ ಆಯೋಗವು ೧೯೮೯ರಲ್ಲಿ ವರದಿಯನ್ನು ಸಲ್ಲಿಸಿದರೂ ಸರ್ಕಾರ ಜಾರಿಗೆ ತರದೆ ಮಧ್ಯಂತರ ಸರ್ಕಾರಿ ಆಜ್ಞೆಯೇ ಮುಂದುವರಿಯುತ್ತಿತ್ತು. ಈ ಆಜ್ಞೆಯಂತೆ ಹಿಂದುಳಿದ ವರ್ಗಗಳನ್ನು ಈ ಕೆಳಗೆ ಸೂಚಿಸಿರುವಂತೆ ಏಳು ಗುಂಪಾಗಿ ವಿಂಗಡಿಸಿ, ಭಾರತ ಸರ್ವೋಚ್ಚ ನ್ಯಾಯಾಲಯವು ನೀಡುವ ತೀರ್ಪಿಗೊಳಪಟ್ಟ ಮೀಸಲಾತಿಯನ್ನು ನೀಡಿದೆ.

| | | |
|---|---|---|
| ಪ್ರ ವರ್ಗ I | | ಶೇ. ೪ |
| ಪ್ರ ವರ್ಗ | II (ಎ) | ಶೇ. ೧೫ |
| ಪ್ರ ವರ್ಗ | II (ಬಿ) | ಶೇ. ೪ |
| ಪ್ರ ವರ್ಗ | III (ಎ) | ಶೇ. ೪ |
| ಪ್ರ ವರ್ಗ | III (ಬಿ) | ಶೇ. ೫ |
| ಪರಿಶಿಷ್ಟ ಜಾತಿ | | ಶೇ. ೧೫ |
| ಪರಿಶಿಷ್ಟ ಪಂಗಡ | | ಶೇ. ೩ |
| | ಒಟ್ಟು | ಶೇ. ೫೦ |

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರು ಮತ್ತು ವರ್ಗ ೧ ರ ಅಭ್ಯರ್ಥಿಗಳನ್ನು ಹೊರತುಪಡಿಸಿ ರಾಜ್ಯಾಧೀನ ಸೇವೆಗಳಲ್ಲಿನ ರಾಜ್ಯ ಸರ್ಕಾರದ ಸಾಯತ್ರವು ಸಂಸ್ಥೆಗಳಲ್ಲಿನ ಹಾಗೂ ರಾಜ್ಯ ಸರ್ಕಾರ ಸಾರ್ವಜನಿಕ ಉದ್ಯಮಗಳಲ್ಲಿನ ಮತ್ತು ರಾಜ್ಯ ಸರ್ಕಾರದ ಅನುದಾನಿತ ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಗಳಲ್ಲಿನ ನೇಮಕಾತಿ ಮೀಸಲಾತಿಯ ಪ್ರಯೋಜನ ಪಡೆಯಲು ಅಭ್ಯರ್ಥಿಯು ತಂದೆ ತಾಯಿ ಅಥವಾ ಪೋಷಕರು ಈ ಕೆಳಕಂಡ ಉದ್ಯೋಗ ಅಥವಾ ಸ್ಥಿರಾಸ್ಥಿಯನ್ನು ಹೊಂದಿದ್ದಲ್ಲಿ ಅರ್ಹರಾಗಿರುವುದಿಲ್ಲ ಅಂದರೆ

(೧) ಅಭ್ಯರ್ಥಿಯು ತಂದೆ-ತಾಯಿ ಅಥವಾ ಪೋಷಕರು ಸರ್ಕಾರದ ಒಂದನೇ ದರ್ಜೆಯ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ, ಅಥವಾ ಖಾಸಗಿ ಕೈಗಾರಿಕೆ ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೇ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆ ಇಲ್ಲದೆ ವೇತನ ಶ್ರೇಣಿಯು ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ. ೨೦೫೦-೪೫೫೦).

(೨) ಅಭ್ಯರ್ಥಿ ತಂದೆ ತಾಯಿ ಅಥವಾ ಪೋಷಕರು ಆದಾಯ ತೆರಿಗೆ ಪಾವತಿದಾರರಾಗಿದ್ದರೆ,

(೩) ಅಭ್ಯರ್ಥಿ ತಂದೆ ತಾಯಿ ಅಥವಾ ಪೋಷಕರು ಮಾರಾಟ ತೆರಿಗೆ ಪಾವತಿದಾರರಾಗಿದ್ದರೆ,

(೪) ಅಭ್ಯರ್ಥಿ ತಂದೆ ತಾಯಿ ಅಥವಾ ಪೋಷಕರು ಇವರಲ್ಲಿ ಯಾರೊಬ್ಬರು ಅಥವಾ ಇಬ್ಬರು ಸೇರಿ ೮ ಹೆಕ್ಟೇರ್ ಮಳೆ ಆಧಾರಿತ ಅಥವಾ ಒಣಭೂಮಿ ಅಥವಾ ತತ್ಸಮಾನವಾದ ಇತರೇ ಜಮೀನನ್ನು ಹೊಂದಿದ್ದರೆ ಮತ್ತು

ಮೇಲ್ಕಂಡ ಪ್ರವರ್ಗ ೧,೨(ಎ), ೨(ಬಿ), ೩(ಎ) ಮತ್ತು ೩(ಬಿ)ಗಳಲ್ಲಿ ವರ್ಗೀಕರಿಸಲಾದ ಜಾತಿಗಳ ಪಟ್ಟಿಯು ಆದೇಶ ಸಂಖ್ಯೆ ಸಂಕಇ ೧೫೦ ಬಿಸಿಎ ೯೪ ದಿನಾಂಕ ೧೭.೯.೧೯೯೪ರ ಅನುಬಂಧಗಳಲ್ಲಿನ ಜಾತಿಗಳಿಗೆ ಭಾರತ ಸಂವಿಧಾನದ ೧೬(೪)ರ ಅನ್ವಯ ನೇಮಕಾತಿ ಮೀಸಲಾತಿಗೆ ಅನ್ವಯಿಸುವುದು.

## ಕಲ್ಯಾಣ ಕಾರ್ಯಕ್ರಮಗಳು

ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಮತ್ತು ಅವರು ತಮ್ಮ ಪ್ರತಿಭೆಯನ್ನು ಹೆಚ್ಚಿಸಿಕೊಳ್ಳಲು ಸಹಾಯಕವಾಗುವಂತೆ ಇಲಾಖೆಯು ವಿದ್ಯಾರ್ಥಿ ನಿಲಯಗಳ ಸೌಲಭ್ಯ, ವಿದ್ಯಾರ್ಥಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವವರಿಗೆ ಪ್ರೋತ್ಸಾಹಧನ, ವಿದ್ಯಾರ್ಥಿ ವೇತನವನ್ನು ನೀಡುವುದು ಇವೇ ಮುಂತಾದ ಶೈಕ್ಷಣಿಕ ಸೌಲಭ್ಯಗಳನ್ನೊದಗಿಸಿದೆ. ಇದಲ್ಲದೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಿಗೆ ಹಾಸಿಗೆ, ಹೊದಿಕೆಗಳನ್ನು ಸರಬರಾಜು ಮಾಡುವುದು, ಸ್ವಯಂ ಸೇವಾ ಸಂಸ್ಥೆಗಳಿಗೆ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ನಿರ್ಮಿಸಲು ಅನುದಾನ ನೀಡುವುದು, ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಉಪಕರಣಗಳನ್ನು ಒದಗಿಸುವುದು, ಬೆರಳಚ್ಚು ಮತ್ತು ಶೀಘ್ರಲಿಪಿಯನ್ನು ಅಭ್ಯಾಸ ಮಾಡುವವರಿಗೆ ಶಿಷ್ಯವೇತನ ನೀಡುವುದು ಇವೇ ಮುಂತಾದ ಸೌಲಭ್ಯಗಳನ್ನು

ಇಲಾಖೆಯ ವತಿಯಿಂದ ಒದಗಿಸಲಾಗುವುದು. ೧೯೭೭-೭೮ರಲ್ಲಿ ಪ್ರಾರಂಭವಾದ ಮೆಟ್ರಿಕ್‌ಪೂರ್ವ ವಿದ್ಯಾರ್ಥಿನಿಲಯಗಳ ತಾಲ್ಲೂಕುವಾರು ಹಂಚಿಕೆ ಈ ರೀತಿ ಇತ್ತು. ಅಫಜಲ್‌ಪುರ (೫), ಆಳಂದ (೫), ಚಿಂಚೋಳಿ (೫), ಚಿತ್ತಾಪುರ (೯), ಗುಲಬರ್ಗಾ (೭), ಜೇವರ್ಗಿ (೮), ಸೇಡಂ (೪), ಶಹಪುರ (೭), ಸುರಪುರ (೬) ಮತ್ತು ಯಾದಗಿರಿ (೯). ೧೯೭೭-೭೮ರಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಪ್ರಾರಂಭವಾದ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳೆಂದರೆ, ಗುಲಬರ್ಗಾ (೩), ಜೇವರ್ಗಿ (೧) ಮತ್ತು ಯಾದಗಿರಿ (೨) ಇದ್ದವು. ೧೯೯೨-೯೩, ೧೯೯೩-೯೪) ಮತ್ತು ೧೯೯೪-೯೫ನೇ ಸಾಲುಗಳಲ್ಲಿ ವಿವಿಧ ಯೋಜನೆಗಳಲ್ಲಿ ಆದ ಭೌತಿಕ ಮತ್ತು ಆರ್ಥಿಕ ಸಾಧನೆಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ. (ಕೋಷ್ಟಕ ೧೬.೧೭)

೧೯೯೨-೯೩ನೇ ಮತ್ತು ೧೯೯೩-೯೪ನೇ ಸಾಲಿನಲ್ಲಿ ವಿವಿಧ ಕಲ್ಯಾಣ ಕಾರ್ಯಕ್ರಮಕ್ಕಾಗಿ ವೆಚ್ಚ ಮಾಡಿದ ಹಣ ಮತ್ತು ಫಲಾನುಭವಿಗಳ ಸಂಖ್ಯೆ ಈ ರೀತಿ ಇದೆ. (ಆವರಣದಲ್ಲಿ ಫಲಾನುಭವಿಗಳ ಸಂಖ್ಯೆ ನೀಡಿದೆ). ಹಿಂದುಳಿದ ವರ್ಗದ ಬಿ.ಸಿ.ಡಿ. ಮತ್ತು ಇ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ೧೧.೩೩ ಲಕ್ಷ ರೂ. (೧೩,೭೫೮); ೧೯೯೩-೯೪ರಲ್ಲಿ ವೆಚ್ಚ ಮಾಡಿದ ಹಣ ೧೨.೭೦ ಲಕ್ಷ ರೂ. (೧೩,೦೩೩), ಹಿಂದುಳಿದ 'ಎ' ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕಾದ ವೆಚ್ಚ ೧.೮೫ ಲಕ್ಷ ರೂ. (೧,೫೨೯), ೧೯೯೩-೯೪ರಲ್ಲಿ ವೆಚ್ಚ ಮಾಡಿದ ಹಣ ೦.೯೫ ಲಕ್ಷ ರೂ. (೧,೪೪೯), ಹಿಂದುಳಿದ ವರ್ಗದ ಮೆಟ್ರಿಕ್ ನಂತರದ ಬಿ.ಸಿ.ಡಿ.ಇ. ವರ್ಗದ ವಿದ್ಯಾರ್ಥಿ ವೇತನಕ್ಕಾದ ವೆಚ್ಚ ೧೦.೨೭ ಲಕ್ಷ ರೂ. (೩,೪೨೩), ೧೯೯೩-೯೪ರಲ್ಲಿ ವೆಚ್ಚ ಮಾಡಿದ ಹಣ ೧೧.೩೧ ಲಕ್ಷ ರೂ. (೩,೪೪೬); ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ನಿರ್ವಹಣೆ ಆದ ವೆಚ್ಚ ೧೧೮.೪೪ ಲಕ್ಷ ರೂ. (೬೩ ವಿದ್ಯಾರ್ಥಿನಿಲಯಗಳು); ೧೯೯೩-೯೪ರಲ್ಲಿ ೬೫ ನಿಲಯಗಳು ಕಾರ್ಯ ನಿರ್ವಹಿಸಿದ್ದು ೧೪೮.೮೬ ಲಕ್ಷ ರೂ. ವೆಚ್ಚ ಮಾಡಿದೆ. ವಿದ್ಯಾರ್ಥಿ ನಿಲಯಗಳ ಸುಧಾರಣೆಗೆ ಆದ ವೆಚ್ಚ ೩.೦೨ ಲಕ್ಷ ರೂ. (೬೨). ೧೯೯೩-೯೪ರಲ್ಲಿ ೬೫ ನಿಲಯಗಳಿಗೆ ಸೌಲಭ್ಯ ನೀಡಿದ್ದು ೧.೦೩ ಲಕ್ಷ ರೂ. ವೆಚ್ಚ ಮಾಡಿದೆ. ಮೆಟ್ರಿಕ್ ನಂತರದ ಹೆಚ್ಚುವರಿ ಊಟ ಮತ್ತು ವಸತಿಗೆ ಆದ ವೆಚ್ಚ ೧ ಲಕ್ಷ ರೂ. (೬೩), ೧೯೯೩-೯೪ರಲ್ಲಿ ೧೦೩ ಫಲಾನುಭವಿಗಳಿಗಾಗಿ ೧.೬೫ ಲಕ್ಷ ರೂ. ವೆಚ್ಚ ಮಾಡಿದೆ. ವಿದ್ಯಾರ್ಥಿಗಳಿಗೆ ಉತ್ತೇಜನ ಬಹುಮಾನ ನೀಡಿಕೆಗೆ ಆದ ವೆಚ್ಚ ೫,೦೦೦ ರೂ. (೩೮), ೧೯೯೩-೯೪ರಲ್ಲಿ ೩೭ ವಿದ್ಯಾರ್ಥಿಗಳಿಗೆ ಸೌಲಭ್ಯ ನೀಡಿ ಆದ ವೆಚ್ಚ ೪,೩೦೦ ರೂ.ಗಳು. ಜೇವರ್ಗಿಯಲ್ಲಿ ೨೦ ಮಹಿಳೆಯರು ಹೊಲಿಗೆ ತರಬೇತಿಗಾಗಿ ೦.೭೧ ಲಕ್ಷ ರೂ. ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಪ್ರತಿವರ್ಷ ೨೦ ಮಹಿಳೆಯರಿಗೆ ತರಬೇತಿಗಾಗಿ ಕ್ರಮವಾಗಿ ೦.೯೦ ಮತ್ತು ೦.೯೧ ಲಕ್ಷ ರೂ. ವೆಚ್ಚ ಮಾಡಿದೆ. ಹಿಂದುಳಿದ ಮಹಿಳೆಯರು ಹೊಲಿಗೆ ಕ್ಷೇತ್ರದಲ್ಲಿ ತರಬೇತಿ ಹೊಂದಿ ತಮ್ಮ ಜೀವನೋಪಾಯವನ್ನು ನಡೆಸಲು ಸಾಧ್ಯವಾಗುವಂತೆ ಮಾಡಿಕೊಳ್ಳಲು ಜಿಲ್ಲೆಯಲ್ಲಿ ಜೇವರ್ಗಿಯಲ್ಲಿ ಮಾತ್ರ ಹೊಲಿಗೆ ತರಬೇತಿ ಕೇಂದ್ರ ಸ್ಥಾಪನೆಯಾಲಿದೆ. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾಧಿಕಾರಿಯು ಈ ಯೋಜನೆಯನ್ನು ಕಾರ್ಯಗತ ಪ್ರಾಧಿಕಾರಿಯಾಗಿರುತ್ತಾರೆ. ಈ ತರಬೇತಿ ಕೇಂದ್ರವು ೧೯೯೧-೯೨ರಲ್ಲಿ ೨೦ ಮಹಿಳೆಯರು ತರಬೇತಿ ಪಡೆದಿದ್ದು, ಇದಕ್ಕಾಗಿ ಇಲಾಖೆಯು ೭೧,೦೦೦ ರೂ. ವೆಚ್ಚ ಮಾಡಿದೆ. ೧೯೯೩-೯೪ ಮತ್ತು ೧೯೯೪-೯೫ನೇ ಸಾಲಿನಲ್ಲಿ ಪ್ರತಿವರ್ಷ ೨೦ ಮಹಿಳೆಯರು ತರಬೇತಿ ಪಡೆದಿದ್ದು ಈ ಎರಡು ವರ್ಷಗಳಲ್ಲಿ ಇಲಾಖೆಯು ಕ್ರಮವಾಗಿ ೬೦,೦೦೦ ರೂ. ಮತ್ತು ೯೧,೦೦೦ ರೂ.ಗಳನ್ನು ವೆಚ್ಚ ಮಾಡಿದೆ.

## ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸಿನಂತೆ ೧೯೭೭ರಲ್ಲಿ "ಕರ್ನಾಟಕ ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ (ನಿ)" ಅಸ್ತಿತ್ವಕ್ಕೆ ಬಂದಿದ್ದು ಅದರ ಜಿಲ್ಲಾ ಮಟ್ಟದ ಕಛೇರಿಯೂ ಆಗಸ್ಟ್ ೧೯೭೭ರಲ್ಲಿಯೇ ಗುಲಬರ್ಗಾದಲ್ಲಿ ಪ್ರಾರಂಭವಾಯಿತು. ೧೯೮೬ರಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕಾರ್ಯಕ್ರಮಗಳನ್ನು ಕೈಗೊಳ್ಳಲು ಪ್ರತ್ಯೇಕವಾದ ಅಭಿವೃದ್ಧಿ ನಿಗಮವು ಸ್ಥಾಪನೆಯಾಯಿತು. ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ "ಚೈತನ್ಯ" ಮಾರ್ಜಿನ್ ಹಣದ ಸಾಲ ಯೋಜನೆಯಲ್ಲಿ ಆರ್ಥಿಕವಾಗಿ ಹಿಂದುಳಿದ ಎ.ಬಿ.ಸಿ. ಮತ್ತು ಡಿ ಗುಂಪಿನವರಿಗೆ ವಾರ್ಷಿಕ ಆದಾಯ ೬,೦೦೦ ರೂ.ಗಿಂತ ಕಡಿಮೆ ಇದ್ದಲ್ಲಿ ಕೈಗಾರಿಕೆ, ವ್ಯಾಪಾರ ಮತ್ತು ಸೇವಾ ಯೋಜನೆಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಸಾಲವನ್ನು ನೀಡಲಾಗುವುದು. ಬ್ಯಾಂಕುಗಳ ಸಾಲ ಮಂಜೂರು ಮಾಡುವ ೫,೦೦೦ ರೂ.ವರೆಗಿನ ಸಾಲಕ್ಕೆ ಶೇ. ೫೦ರಷ್ಟನ್ನು, ೫,೦೦೧ ರಿಂದ ೧೦,೦೦೦ ರೂ.ವರೆಗಿನ ಸಾಲಕ್ಕೆ ಶೇ. ೩೦ರಷ್ಟನ್ನು ಮತ್ತು ೧೦,೦೦೧ ನಿಂದ

**ಕೋಷ್ಟಕ ೧೬.೧೭**

೧೯೯೩-೯೪ ಹಾಗೂ ೧೯೯೪-೯೫ರಲ್ಲಿ ವಿಶೇಷ ಘಟಕ ಯೋಜನೆಯಂತೆ ಒದಗಿಸಿದ ಸೌಲಭ್ಯಗಳ ವಿವರ

| ಕ್ರಮ ಸಂ. | ಯೋಜನೆಗಳ | ಸೌಲಭ್ಯ ಪಡೆದವರ ಸಂಖ್ಯೆ | | | ವೆಚ್ಚ ಮಾಡಿದ ಹಣ (ಲಕ್ಷ ರೂ.ಗಳಲ್ಲಿ) | | |
|---|---|---|---|---|---|---|---|
| | | ೧೯೯೩-೯೪ | ೧೯೯೪-೯೫ | ೧೯೯೫-೯೬ | ೧೯೯೩-೯೪ | ೧೯೯೪-೯೫ | ೧೯೯೫-೯೬ |
| ೧. | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ 'ಎ' ಗುಂಪು | ೬೬೬ | ೬೭೭ | ೬೪೦ | ೦.೫೮ | ೦.೬೧ | ೦.೬4 |
| ೨. | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ 'ಎ' ಗುಂಪು | ೩೬೦ | ೩೬೫ | ೪೩೦ | ೧.೧೭ | ೧.೨೩ | ೧.೨೯ |
| ೩. | ಮೆಟ್ರಿಕ್ ನಂತರದ 'ಎ' ಗುಂಪಿನ ವಿದ್ಯಾರ್ಥಿಗಳಿಗೆ ಹೆಚ್ಚಿನ ಭೋಜನ ವೆಚ್ಚ | ೪೮ | ೧೮೭ | ೧೯೯ | ೧.೬7 | ೨.೯೧ | ೫.೧೦ |
| ೪. | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು | ೨,೫೦೫ | ೨,೫೦೫ | ೩,೮೭೦ | ೧೨೩.೫೭ | ೧೫೦.೭೦ | ೧೬೨.೧೫ |
| ೫. | ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು | ೨೮೦ | ೩೩೦ | ೩೫೦ | ೭.೫೮ | ೧೩.೧೧ | ೧೫.೫೭ |
| ೬. | ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಗಳು | ೧೫,೦೨೨ | ೧೫,೦೪೪ | ೧೭,೩೯೫ | ೧೩.೦೭ | ೧೩.೫೪ | ೧೪.೨೭ |
| ೭. | ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಗಳು | ೩,೫೮೬ | ೩,೭೧೨ | ೩,೭೩೦ | ೧೧.೬೬ | ೧೨.೦೭ | ೧೨.೪೯ |
| ೮. | ಹಿಂದುಳಿದ ವರ್ಗಗಳ ಖಾಸಗಿ ವಿದ್ಯಾರ್ಥಿ ನಿಲಯಗಳಿಗೆ ಸಹಾಯಧನ | ೧೭೫ | ೧೭೫ | ೧೯೦ | ೩.೨೫ | ೩.೯೮ | ೩.೩೨ |
| ೯. | ಸಾರ್ವಜನಿಕ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣಕ್ಕೆ ಸಹಾಯಧನ | ೩ | ೩ | ೨ | ೬.೦೦ | ೧೫.೦೦ | ೧೩.೨೬ |
| ೧೦. | ಶುಲ್ಕ ರಿಯಾಯಿತಿ | ೧೫,೬೬೬ | ೧೫,೬೬೦ | ೧೫,೭೧೪ | ೨೦.೫೫ | ೨೦.೨೫ | ೨೨.೭೩ |
| ೧೧. | ಬೆರಳಚ್ಚು ಹಾಗೂ ಶೀಘ್ರಲಿಪಿ ಹೊಂದುವವರಿಗೆ ಸ್ಟೈಫಂಡ್ | ೩೪ | ೩೪ | ೨೦ | ೦.೧೭ | ೦.೧೮ | ೦.೧೯ |

೧೫,೦೦೦ ರೂ.ವರೆಗಿನ ಸಾಲಕ್ಕೆ ಶೇ. ೨೦ರಷ್ಟನ್ನು ಮಾರ್ಜಿನ್ ಹಣವೆಂದು ನಿಗಮದಿಂದ ನೀಡಲಾಗುವುದು. ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಎಲ್ಲಾ ತಾಲೂಕುಗಳಿಂದ ಸೇರಿ ಸೌಲಭ್ಯ ಪಡೆದವರು ಕ್ರಮವಾಗಿ ೭೨೮, ೯೦೧ ಮತ್ತು ೮೩೦ ಆಗಿದ್ದು ಇದಕ್ಕಾಗಿ ಆದ ವೆಚ್ಚ ಕ್ರಮವಾಗಿ ೩೬.೪ ಲಕ್ಷ ರೂ., ೪೫,೦೫ ಲಕ್ಷ ರೂ. ಮತ್ತು ೪೧.೫ ಲಕ್ಷ ರೂ.ಗಳಾಗಿವೆ. ಇದಲ್ಲದೆ ಹಿಂದುಳಿದ ವರ್ಗಗಳ ಎ.ಬಿ.ಸಿ.ಡಿ. ಗುಂಪಿನ ನಿರುದ್ಯೋಗಿ ಯುವಕರಿಗೆ ಕುಟುಂಬದ ವಾರ್ಷಿಕ ಆದಾಯ ೬,೦೦೦ ರೂ.ಗಳಿಗಿಂತ ಕಡಿಮೆ ಇರುವವರಿಗೆ ಆಟೋರಿಕ್ಷಾ, ಲಘು ಮತ್ತು ಭಾರಿ ವಾಹನಗಳಲ್ಲಿ ನಡೆಸಲು ತರಬೇತಿ ನೀಡಿ ಲೆಸೆನ್ಸ್ ಸಹಾ ಕೊಡಿಸಲಾಗುವುದಲ್ಲದೆ, ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ತಿಂಗಳಿಗೆ ೨೦೦ ರೂ.ಗಳ ಶಿಷ್ಯವೇತನವನ್ನು ನೀಡಲಾಗುವುದು. ಈ ಯೋಜನೆಯಲ್ಲಿ ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಕ್ರಮವಾಗಿ ೩೦ ಮತ್ತು ೩೫ ನಿರುದ್ಯೋಗಿ ಯುವಕರಿಗೆ ಅಂಗೀಕೃತ ವಾಹನ ಚಾಲನಾ ತರಬೇತಿಗಾಗಿ ಕ್ರಮವಾಗಿ ೪೫,೦೦೦ ರೂ. ಮತ್ತು ೫೨,೦೦೦ ರೂ.ಗಳನ್ನು ವೆಚ್ಚ ಮಾಡಲಾಗಿದೆ.

**ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ)**

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ೧೯೮೬ರಲ್ಲಿ ರಾಜ್ಯದಲ್ಲಿನ ಮತೀಯ ಅಲ್ಪಸಂಖ್ಯಾತರೆಂದರೆ ಮುಸ್ಲಿಮರು, ಕ್ರೈಸ್ತರು, ಜೈನರು, ಬೌದ್ಧರು, ಸಿಖ್ಖರು ಮತ್ತು ಪಾರ್ಸಿಗಳು ಈ ಮತದವರ ಏಳಿಗೆಗಾಗಿ ಸ್ಥಾಪನೆಯಾಯಿತು. ಈ ನಿಗಮವು 'ಸ್ವಾವಲಂಬನೆಯ ಮಾರ್ಜಿನ್ ಹಣದ ಸಾಲದ ಯೋಜನೆಯಲ್ಲಿ ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿ ಅವರ ಕುಟುಂಬದ ಆದಾಯ ವಾರ್ಷಿಕ ೬,೦೦೦ ರೂ.ಗಳಿಗಿಂತ ಮೀರದೆ ಇರುವ ಸಂದರ್ಭಗಳಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಕುಶಲಕರ್ಮ, ವ್ಯಾಪಾರ, ಸೇವಾ ಉದ್ದಿಮೆ, ಇಂತಹ ಇತರೆ ಉದ್ಯೋಗಗಳಿಗೆ ಬ್ಯಾಂಕುಗಳ ಸಹಯೋಗದೊಂದಿಗೆ ಸಾಲ ನೀಡಲಾಗುವುದು. ೫,೦೦೦ ರೂ.ವರೆಗಿನ ಸಾಲಕ್ಕೆ ಶೇ. ೫೦ರಷ್ಟನ್ನು, ೫,೦೦೧ನಿಂದ ೧೦,೦೦೦ವರೆಗಿನ ಸಾಲಕ್ಕೆ ಶೇ. ೩೦ರಷ್ಟನ್ನು ೧೦,೦೦೧ ರೂ.ನಿಂದ ೫೦,೦೦೦ ರೂ.ವರೆಗಿನ ಸಾಲಕ್ಕೆ ಶೇ. ೨೦ರಷ್ಟನ್ನು ಮಾರ್ಜಿನ್ ಹಣವನ್ನಾಗಿ ನಿಗಮದಿಂದ ನೀಡಿ ಈ ಹಣಕ್ಕೆ ಶೇ.೪ರಂತೆ ವಾರ್ಷಿಕ ಬಡ್ಡಿ ವಿಧಿಸಲಾಗುತ್ತದೆ. ಈ ಯೋಜನೆಯಲ್ಲಿ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಆದ ವೆಚ್ಚವನ್ನು ಈ ಕೆಳಗಿನ ಪಟ್ಟಿಯಲ್ಲಿ ನಮೂದಿಸಿದೆ.

**ಕೋಷ್ಟಕ ೧೬.೧೮**

| ವರ್ಷ | ಫಲಾನುಭವಿಗಳು | ಖರ್ಚು (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೨-೯೩ | ೧೨೫ | ೬೨.೫೦ |
| ೧೯೯೩-೯೪ | ೧೫೧ | ೭೫.೫೦ |
| ೧೯೯೪-೯೫ | ೨೫೮ | ೧೨.೯೦ |

ನಿಗಮವು ಅಲ್ಪಸಂಖ್ಯಾತರ ವರ್ಗದ ನಿರುದ್ಯೋಗಿ ಯುವಕರಿಗೆ ಅಂಗೀಕೃತ ವಾಹನ ಚಾಲನಾ ತರಬೇತಿಯ ಮೂಲಕ ಉಚಿತ ತರಬೇತಿ ನೀಡುವುದೇ ಅಲ್ಲದೆ ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿಯ ಅವಧಿಯಲ್ಲಿ ತಿಂಗಳಿಗೆ ೨೦೦ ರೂ. ಶಿಷ್ಯ ವೇತನವನ್ನು ನೀಡುವುದು. ಕಳೆದ ಸಾಲುಗಳಲ್ಲಿ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಅದರ ವೆಚ್ಚವನ್ನು ಈ ಮುಂದಿನ ಪಟ್ಟಿಯಲ್ಲಿ ನಮೂದಿಸಿದೆ.

| ವರ್ಷ | ಫಲಾನುಭವಿಗಳು | (ವೆಚ್ಚ ರೂ.ಗಳಲ್ಲಿ) |
|---|---|---|
| ೧೯೯೨-೯೩ | ೨೮ | ೪೨,೦೦೦ |
| ೧೯೯೩-೯೪ | ೩೦ | ೪೫,೦೦೦ |
| ೧೯೯೪-೯೫ | ೩೦ | ೪೫,೦೦೦ |

ಗ್ರಾಮೀಣ ಪ್ರದೇಶದಿಂದ ಆಯ್ಕೆಯಾದ ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ೧೨೦ ರೂ.ಗಳಂತೆ ಸ್ಟೈಫಂಡ್ ಕೊಡಲಾಗುವುದು. ಸ್ಥಳೀಯ ಅಭ್ಯರ್ಥಿಗಳಿಗೆ ಮಾಹೆಯಾನ ೪೦ ರೂ.ಗಳನ್ನು ಸಾದಿಲ್ವಾರ್ ವೆಚ್ಚಕ್ಕಾಗಿ ನೀಡಲಾಗುವುದು.

## ನವೋದಯ ಮಾದರಿ ವಸತಿ ಶಾಲೆಗಳು

ಗ್ರಾಮೀಣ ಪ್ರತಿಭಾವಂತ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮಾಧ್ಯಮಿಕ ಮತ್ತು ಪ್ರೌಢಶಾಲಾ ಶಿಕ್ಷಣದ ಹಂತದಲ್ಲಿ ಉತ್ತಮ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಿ ಉತ್ತಮ ಶಿಕ್ಷಣ ನೀಡುವ ದೃಷ್ಟಿಯಿಂದ ಜಿಲ್ಲೆಯಲ್ಲಿ ಐದು ನವೋದಯ ಮಾದರಿಯ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ ಎರಡು ವಸತಿ ಶಾಲೆಗಳು ಈಗಾಗಲೇ ನಡೆಯುತ್ತಿವೆ. ಜೇವರ್ಗಿಯಲ್ಲಿ ಬಾಲಕಿಯರ ಮತ್ತು ಮಲಖೇಡದಲ್ಲಿ ಬಾಲಕರ ಶಾಲೆಗಳು ನಡೆಯುತ್ತಿವೆ. ಈ ವಸತಿ ಶಾಲೆಗಳಲ್ಲಿ ಐದನೆಯ ತರಗತಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ ಹಾಗೂ ೧೦ನೇ ತರಗತಿವರೆಗೆ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪ್ರತಿ ತರಗತಿಯ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆ ೪೦ ಮಾತ್ರ. ಪ್ರವೇಶ ಪಡೆಯುವ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಸ್ಪರ್ಧಾತ್ಮಕ ಮತ್ತು ಮೌಖಿಕ ಪರೀಕ್ಷೆ ನಡೆಸಲಾಗುತ್ತದೆ. ಪ್ರವೇಶ ಪರೀಕ್ಷೆಯನ್ನು ಆಂಗ್ಲ ಅಥವಾ ಕನ್ನಡ ಭಾಷೆಯಲ್ಲಿ ಉತ್ತರಿಸಬಹುದು. ಪ್ರವೇಶ ಪಡೆಯಲು ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರದ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ ೪ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು ಮತ್ತು ವಯಸ್ಸು ೧೦ ರಿಂದ ೧೨ ವರ್ಷಗಳೊಳಗಿರಬೇಕು. ಈ ವಸತಿ ಶಾಲೆಯಲ್ಲಿ ಮಕ್ಕಳಿಗೆ ಒದಗಿಸುವ ಸೌಲಭ್ಯಗಳು ಮತ್ತು ಪ್ರತಿ ಮಗುವಿಗೆ ಆಹಾರದ ವೆಚ್ಚಕ್ಕಾಗಿ ಮಾಹೆಯಾನ ೨೦೦ ರೂ.ಗಳಂತೆ ೧೦ ತಿಂಗಳ ಅವಧಿಗೂ, ಸಮವಸ್ತ್ರಗಳಿಗಾಗಿ ವಾರ್ಷಿಕ ೩೦೦ ರೂ.ಗಳ ದರದಲ್ಲೂ ಮತ್ತು ಇತರೆ ವೆಚ್ಚಗಳಿಗಾಗಿ ಮಾಹೆಯಾನ ೧೨೫ ರೂ.ಗಳನ್ನು ಸರ್ಕಾರದಿಂದ ನೀಡಲಾಗುವುದು. ಈ ಯೋಜನೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ವೆಚ್ಚವನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೧೯**

| ವರ್ಷ | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) |
|---|---|---|
| ೧೯೯೦-೯೧ | ೪೦ | ೯೭,೦೦೦ |
| ೧೯೯೧-೯೨ | ೮೦ | ೧,೯೪,೦೦೦ |
| ೧೯೯೨-೯೩ | ೧೨೦ | ೨,೯೧,೦೦೦ |
| ೧೯೯೩-೯೪ | ೧೬೦ | ೩,೮೮,೦೦೦ |

## ಪರೀಕ್ಷಾ ಪೂರ್ವ ತರಬೇತಿ ಕೇಂದ್ರ, ಗುಲಬರ್ಗಾ

ಈ ತರಬೇತಿ ಕೇಂದ್ರವು ೧೯೮೩ನೇ ಅಕ್ಟೋಬರ್‌ನಲ್ಲಿ ಗುಲಬರ್ಗಾದಲ್ಲಿ ಪ್ರಾರಂಭವಾಯಿತು. ಈ ತರಬೇತಿ ಕೇಂದ್ರವು ಕರ್ನಾಟಕ ಲೋಕಸೇವಾ ಆಯೋಗ ಮತ್ತು ಕೇಂದ್ರ ಲೋಕಸೇವಾ ಆಯೋಗ, ಬ್ಯಾಂಕಿಂಗ್ ಸೇವಾ ನೇಮಕಾತಿ ಮಂಡಳಿ ಹಾಗೂ ಇತರ ನೇಮಕಾತಿ ಸಂಸ್ಥೆಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ತರಬೇತಿ ನೀಡುತ್ತದೆ. ಈ ಕೇಂದ್ರಗಳು ವಿಶ್ವವಿದ್ಯಾಲಯಗಳ ಕೇಂದ್ರ ಸ್ಥಳಗಳಲ್ಲಿ ಇದ್ದು, ಪ್ರತಿಯೊಂದು ಬೋಧನಾ ಕೇಂದ್ರದ ವ್ಯಾಸಂಗ ಕ್ರಮದ ಬೋಧನಾ ಅವಧಿಯು ಸಾಮಾನ್ಯವಾಗಿ ನಾಲ್ಕು ತಿಂಗಳು. ಬೋಧನಾ ಕೇಂದ್ರದ ವಿದ್ಯಾರ್ಥಿಗಳ ಗರಿಷ್ಠ ಸಂಖ್ಯೆ ಪ್ರತಿ ತರಬೇತಿಗೆ ೫೦ ಮಾತ್ರ. ಇದರಲ್ಲಿ ಗ್ರಾಮೀಣ ಪ್ರದೇಶದಿಂದ ೪೦ ವಿದ್ಯಾರ್ಥಿಗಳನ್ನು ಮತ್ತು ನಗರ ಪ್ರದೇಶದಿಂದ ೧೦ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಪ್ರಾರಂಭದ ವರ್ಷದಲ್ಲಿ (೧೯೮೩) ೩೮ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗಿದ್ದು, ಇದಕ್ಕಾಗಿ ಆದ ವೆಚ್ಚ ೯,೮೫೦ ರೂ.ಗಳಾಗಿವೆ. ಈ ಯೋಜನೆಯಲ್ಲಿ ಕಳೆದ ಮೂರು ವರ್ಷಗಳಿಂದ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಆದ ವೆಚ್ಚವನ್ನು ಈ ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ.

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೨-೯೩ | ೮೨ | ೧.೮೪ |
| ೧೯೯೩-೯೪ | ೧೦೯ | ೨.೭೦ |
| ೧೯೯೪-೯೫ | ೫೬ | ೨.೯೯ |

## ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ

ಗುಲಬರ್ಗಾದ ಗಾಂಧಿ ತತ್ವ ಪ್ರಚಾರ ಕೇಂದ್ರ, ಭಾರತ ಸೇವಕ ಸಮಾಜ ಮತ್ತು ಕಾಂಗ್ರೆಸ್ ಚಟುವಟಿಕೆಗಳಿಂದ ಗುಲಬರ್ಗಾ ಜಿಲ್ಲೆಯಲ್ಲಿ ಸಾರ್ವಜನಿಕ ಜೀವನದಲ್ಲಿ ಮಹಿಳೆಯರ ಪ್ರಗತಿಗಾಗಿ ವಿಶೇಷ ಜಾಗೃತಿಯಾಗಿತ್ತು. ೧೯೨೭ರಲ್ಲಿ ಜಿಲ್ಲೆಗೆ ಗಾಂಧೀಜಿ ಭೇಟಿ ನೀಡಿ, ಗುಲಬರ್ಗಾದ ನೂತನ ವಿದ್ಯಾಲಯದಲ್ಲಿ ಭಾಷಣ ಮಾಡಿ ದೇಶದ ಸ್ತ್ರೀ ಮತ್ತು ಪುರುಷರ ಪಾತ್ರ ಮತ್ತು ಮಹತ್ವದ ಅರಿವನ್ನುಂಟುಮಾಡಿದರು. ಇದಾದ ನಂತರ ಗುಲಬರ್ಗಾದಲ್ಲಿ ವನಿತಾ ವಿಕಾಸ ಮಂಡಳಿ ಸ್ಥಾಪನೆಗಾಗಿ ನಿರ್ಗತಿಕ ಮಹಿಳೆಯರಿಗಾಗಿ ಮಹಿಳಾ ಸೇವಾ ಸಮಾಜ ಸ್ಥಾಪನೆಯಾಯಿತು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹಿಳೆಯರ ಕಲ್ಯಾಣ, ಮಕ್ಕಳ ಕಲ್ಯಾಣ ಹಾಗೂ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡಿದೆ. ಇಲಾಖೆಯು ಮಹಿಳೆಯರನ್ನು ಆರ್ಥಿಕ ಮುಖ್ಯ ವಾಹಿನಿಯಲ್ಲಿ ತೊಡಗಿಸಿ ಅವರಿಗೆ ಸಮಾನತೆ ಮತ್ತು ಸಾಮಾಜಿಕ ನ್ಯಾಯ ದೊರಕಿಸುವ ಉದ್ದೇಶವನ್ನು ಹೊಂದಿದೆ. ಇಲಾಖೆಯು ಮಕ್ಕಳ ರಕ್ಷಣೆಗಾಗಿ ಹಾಗೂ ಅವರ ಶೋಷಣೆಯ ವಿರುದ್ಧ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿದ್ದು, ಮಕ್ಕಳ ರಕ್ಷಣೆ, ಅಭಿವೃದ್ಧಿ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಗತಿ ಹಾಗೂ ವಿದ್ಯಾರ್ಜನೆ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ಅವರ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸುತ್ತಿದೆ. ಇಲಾಖೆಯು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ಸ್ವಯಂ ಸೇವಾ ಸಂಸ್ಥೆಗಳಿಗೆ ಆದ್ಯತೆ ನೀಡುತ್ತಿದೆ. ಇದಲ್ಲದೆ ಸಮಾಜದಲ್ಲಿನ ಸಾಂಪ್ರದಾಯಿಕ ಆಚಾರಗಳ ವಿರುದ್ಧ ಸಾರ್ವಜನಿಕ ಅಭಿಪ್ರಾಯ ಮೂಡಿಸುವುದರ ಮೂಲಕ ಮಹಿಳೆಯರ ಅಭಿವೃದ್ಧಿಗೆ ಪ್ರಯತ್ನಿಸಲಾಗುತ್ತಿದೆ.

೧೯೮೭ಕ್ಕೆ ಮೊದಲು ಈ ಇಲಾಖೆಯನ್ನು ಸಮಾಜ ಕಲ್ಯಾಣ ಇಲಾಖೆ ಎಂದು ಕರೆಯಲಾಗುತ್ತಿತ್ತು.

೧೯೭೦ನೇ ಇಸವಿಯನ್ನು "ಸಾರ್ಕ್ ಹೆಣ್ಣು ಮಕ್ಕಳ ವರ್ಷ"ವೆಂದು, ನಂತರ ಪೂರ್ಣ ದಶಕವನ್ನು "ಸಾರ್ಕ್ ಹೆಣ್ಣು ಶಿಶುವಿನ ದಶಕ" ಎಂದು ಘೋಷಿಸಲಾಗಿದೆ. ಹೆಣ್ಣು ಮಕ್ಕಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮಟ್ಟವನ್ನು ಹೆಚ್ಚಿಸಲು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## ವೀಕ್ಷಣಾಲಯ ಗುಲಬರ್ಗಾ

ಕರ್ನಾಟಕ ಮಕ್ಕಳ ಅಧಿನಿಯಮ ೧೯೬೪ ಇದರ ನಿಯಮಾನುಸಾರ ೧೯೮೦ ರಿಂದ ಗುಲಬರ್ಗಾದಲ್ಲಿ ವೀಕ್ಷಣಾಲಯ ಕಾರ್ಯ ನಿರ್ವಹಿಸುತ್ತಿದೆ. ಈ ಕಾಯ್ದೆಯನ್ನು ೧೯೮೬ ರಿಂದ ಬಾಲಕರ ನ್ಯಾಯದಾನ (ಜುವನೈಲ್ ಜಸ್ಟೀಸ್) ಅಧಿನಿಯಮವೆಂದು ಪರಿವರ್ತಿಸಲಾಗಿದ್ದು ೧೯೮೯-೯೦ರಿಂದ ರಿಮ್ಯಾಂಡ್ ಹೋಂನ್ನು 'ವೀಕ್ಷಣಾಲಯ' ಎಂದು ಬದಲಾಯಿಸಲಾಗಿದೆ. ಈ ಅಧಿನಿಯಮದ ಪ್ರಕಾರ ನಿರ್ಲಕ್ಷ್ಯಕ್ಕೊಳಗಾದ, ಮೋಸಕ್ಕೊಳಗಾದ ಮತ್ತು ನಿಯಂತ್ರಿಸಲಾಗದಂತಹ ಮಕ್ಕಳನ್ನು ಹಾಗೂ ಬಾಲಾಪರಾಧಿಗಳನ್ನು ಈ ಗೃಹದಲ್ಲಿಟ್ಟುಕೊಂಡು ಅವರು ಬೆಳೆದ ವಾತಾವರಣ, ಅವರ ವರ್ತನೆ ಮತ್ತು ಪೂರ್ವೋತ್ತರಗಳನ್ನು ಕುರಿತು ವಿವರವಾಗಿ ತನಿಖೆ ಮಾಡಲಾಗುವುದು. ನ್ಯಾಯಾಲಯವು ಈ ಮಕ್ಕಳ ಪುನರ್ವಸತಿಯ ಬಗ್ಗೆ ನಿರ್ಣಯ ಕೈಗೊಳ್ಳುವುದು. ಈ ಕಾಯ್ದೆಯಡಿ ಪ್ರಾರಂಭದ ವರ್ಷದಲ್ಲಿ (೧೯೮೦) ೩೦ ಗಂಡು ಮಕ್ಕಳು ಮತ್ತು ೧೦ ಹೆಣ್ಣುಮಕ್ಕಳಿಗಾಗಿ ೭೬,೮೦೦ ರೂ. ವೆಚ್ಚ ಮಾಡಲಾಯಿತು. ೧೯೮೮-೮೯ನೇ ಸಾಲಿನಲ್ಲಿ ೧೭೧ ಗಂಡು ಮಕ್ಕಳು ಮತ್ತು ನಾಲ್ಕು ಹೆಣ್ಣು ಮಕ್ಕಳಿಗಾಗಿ ೩,೧೫,೬೩೦ ರೂ. ವೆಚ್ಚ ಮಾಡಲಾಯಿತು.

ಕಳೆದ ಮೂರು ವರ್ಷಗಳಿಂದ ಸೌಲಭ್ಯ ಪಡೆದವರ ಸಂಖ್ಯೆ ಮತ್ತು ಆದ ವೆಚ್ಚವನ್ನು ಈ ಕೆಳಕಂಡ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೧೬.೨೧**

| ವರ್ಷ | ಫಲಾನುಭವಿಗಳ ಸಂಖ್ಯೆ | | ಭರಿಸಲಾದ ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|
| | ಗಂಡು | ಹೆಣ್ಣು | |
| ೧೯೯೨-೯೩ | ೧೭೧ | ೨೩ | ೩.೭೯ |
| ೧೯೯೩-೯೪ | ೧೯೯ | ೧೫ | ೪.೧೫ |
| ೧೯೯೪-೯೫ | ೧೮೧ | ೧೨ | ೫.೪೨ |

## ವಿಶೇಷ ಪೌಷ್ಠಿಕ ಆಹಾರ ಕಾರ್ಯಕ್ರಮ

ನಗರದ ಕೊಳಚೆ ಪ್ರದೇಶಗಳಲ್ಲಿ ಮತ್ತು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುತ್ತಿರುವ, ಪೌಷ್ಠಿಕ ಆಹಾರದ ಕೊರತೆಯಲ್ಲಿರುವ ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಹಾಗೂ ಹಾಲು ಉಣಿಸುವ ತಾಯಂದಿರಿಗೆ ಪೌಷ್ಠಿಕ ಆಹಾರವನ್ನು ಒದಗಿಸಲು ಸರ್ಕಾರವು ವಿಶೇಷ ಪೌಷ್ಠಿಕ ಆಹಾರ ಕಾರ್ಯಕ್ರಮ ಯೋಜನೆಯನ್ನು ಕೈಗೊಂಡಿದೆ. ಈ ಯೋಜನೆಯ ಜಿಲ್ಲೆಯಲ್ಲಿ ೧೯೮೫-೮೬ರಲ್ಲಿ ಪ್ರಾರಂಭವಾಯಿತು. ಈ ಕುರಿತಂತೆ ವಿವರಗಳನ್ನು ಮುಂದಿನ ಕೋಷ್ಟಕ ೧೬.೨೨ದಲ್ಲಿ ನೀಡಿದೆ.

**ಕೋಷ್ಟಕ ೧೬.೨೨**

೧೯೯೨-೯೩, ೧೯೯೩-೯೪ ಹಾಗೂ ೧೯೯೪-೯೫ನೇ ಸಾಲುಗಳಲ್ಲಿ ಫಲಾನುಭವಿಗಳು ಮತ್ತು ಆದ ವೆಚ್ಚದ ವಿವರ

| ಕ್ರ. ಸಂ. | ತಾಲೂಕಿನ ಹೆಸರು | ೧೯೯೨-೯೩ | | ೧೯೯೩-೯೪ | | ೧೯೯೪-೯೫ | |
|---|---|---|---|---|---|---|---|
| | | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ | ಫಲಾನುಭವಿಗಳು | ವೆಚ್ಚ |
| ೧. | ಅಫಜಲ್‌ಪುರ | ೧೧,೩೨೮ | ೯.೧೭೭ | ೧೨.೧೬೦ | ೯.೦೦೪ | ೧೦.೯೯೭ | ೧೧.೪೧೩ |
| ೨. | ಆಳಂದ | ೧೯,೨೫೧ | ೧೩.೦೩೮ | ೨೧.೮೬೭ | ೧೨.೫೧೯ | ೧೯.೯೩೮ | ೧೬.೮೨೨ |
| ೩. | ಚಿಂಚೋಳಿ | ೧೨,೮೭೦ | ೯.೬೫೭ | ೧೩.೫೫೮ | ೭.೯೬೧ | ೧೩.೫೧೫ | ೧೩.೧೦೬ |
| ೪. | ಚಿತ್ತಾಪುರ | ೮.೧೭೭ | ೫.೭೯೪ | ೧೩.೧೯೭ | ೮.೯೭೮ | ೧೩.೫೧೧ | ೧೩.೪೦೫ |
| ೫. | ಗುಲ್ಬರ್ಗಾ (ಗ್ರಾಮೀಣ) | ೧೭.೯೨೪ | ೧೧.೩೪೩ | ೧೮.೮೨೬ | ೭.೪೬೫ | ೧೭.೨೩೭ | ೨೩.೬೯೧ |
| ೬. | ಗುಲ್ಬರ್ಗಾ (ನಗರ) | ೯.೩೧೫ | ೨.೬೫೯ | ೯.೪೯೧ | ೫.೦೨೦ | ೮.೨೦೪ | ೮.೧೭೦ |
| ೭. | ಜೇವರ್ಗಿ | ೭.೧೫೫ | ೫.೭೯೩ | ೧೧.೩೬೧ | ೫.೨೭೬ | ೧೧.೪೧೪ | ೧೨.೪೭೫ |
| ೮. | ಶಹಪುರ | ೧೮.೦೧೭ | ೧೫.೦೨೯ | ೧೮.೬೬೩ | ೯.೯೫೦ | ೧೮.೮೪೬ | ೨೦.೭೯೩ |
| ೯. | ಸುರಪುರ | ೧೮.೪೪೮ | ೧೩.೯೨೯ | ೧೯.೧೦೪ | ೧೩.೨೧೩ | ೧೯.೪೫೮ | ೨೦.೧೦೯ |
| ೧೦. | ಸೇಡಂ | ೧೦.೭೫೭ | ೭.೫೮೩ | ೧೧.೬೦೫ | ೬.೭೨೦ | ೧೨.೧೦೦ | ೧೧.೦೦೭ |
| ೧೧. | ಯಾದಗೀರ್ | ೮.೫೦೦ | ೭.೦೬೩ | ೧೨.೦೯೬ | ೭.೬೬೭ | ೧೬.೧೨೮ | ೧೪.೫೦೯ |
| | ಒಟ್ಟು | ೧,೪೧,೭೪೨ | ೧೦೧.೦೬೫ | ೧,೬೧,೯೨೮ | ೯೩,೭೭೩ | ೧,೬೧.೩೪೮ | ೧,೬೫,೫೦೦ |

## ಸಮಗ್ರ ಬಾಲ ವಿಕಾಸ ಯೋಜನೆ

ಈ ಯೋಜನೆಯಡಿಯಲ್ಲಿ ಪೋಷಕಾಂಶದ ಕೊರತೆ ಇರುವ ಆರು ವರ್ಷದೊಳಗಿನ ಮಕ್ಕಳಿಗೂ, ಗರ್ಭಿಣಿಯರಿಗೂ ಮತ್ತು ಬಾಣಂತಿಯವರಿಗೂ ವಿಶೇಷ ಪೌಷ್ಠಿಕ ಆಹಾರವನ್ನು ಅಂಗನವಾಡಿಗಳ ಮೂಲಕ ವಿತರಣೆ ಮಾಡಲಾಗುವುದು ಮತ್ತು ಮೂರರಿಂದ ಆರು ವರ್ಷ ವಯೋಮಿತಿ ಇರುವ ಮಕ್ಕಳಿಗೆ ಅನೌಪಚಾರಿಕವಾದ ಉಚಿತ ಶಿಕ್ಷಣವನ್ನು ನೀಡಲಾಗುವುದು. ಈ ಯೋಜನೆಯಡಿಯಲ್ಲಿ ಜಿಲ್ಲೆಯ ಗ್ರಾಮಾಂತರದಲ್ಲಿ ೧೦೦ ಗ್ರಾಮಗಳಲ್ಲಿ ಪ್ರಾರಂಭಗೊಂಡು ಮಕ್ಕಳು ಮತ್ತು ಸ್ತ್ರೀಯರಿಗೆ ಅಂಗನವಾಡಿ ಮೂಲಕ ಪೌಷ್ಠಿಕ ಆಹಾರವನ್ನು ವಿತರಣೆ ಮಾಡಲಾಯಿತು.

೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಫಲಾನುಭವಿಗಳ ಸಂಖ್ಯೆ ಮತ್ತು ಆದ ವೆಚ್ಚದ ವಿವರವನ್ನು ಸೂಚಿಸಿದೆ

**ಕೋಷ್ಟಕ** ೧೬.೨೩

| ಫಲಾನುಭವಿಗಳು | ೧೯೯೨-೯೩ | ೧೯೯೩-೯೪ | ೧೯೯೪-೯೫ |
|---|---|---|---|
| ೬ ತಿಂಗಳಿಂದ ೨ ವರ್ಷದ ಮಕ್ಕಳು | ೫೯,೭೫೧ | ೬೭,೦೧೨ | ೬೪,೮೫೩ |
| ೩ ವರ್ಷದಿಂದ ೬ ವರ್ಷದ ಮಕ್ಕಳು | ೬೪,೯೫೦ | ೬೮,೪೬೨ | ೬೮,೯೪೭ |
| ಗರ್ಭಿಣಿಯಲು | ೮,೪೪೬ | ೯,೨೦೦ | ೯,೪೪೩ |
| ಬಾಣಂತಿಯರು | ೮,೫೯೫ | ೯,೨೯೧ | ೯,೫೮೦ |
| ಒಟ್ಟು ವೆಚ್ಚ (ಲಕ್ಷ ರೂ.ಗಳಲ್ಲಿ) | ೧೦೭,೯೫೮ | ೯೪,೭೧೦ | ೧೬೯,೪೪೦ |

## ಗೃಹಕಲ್ಯಾಣ

ಈ ಯೋಜನೆಯಡಿಯಲ್ಲಿ ನಗರ ಪ್ರದೇಶಗಳ ದುರ್ಬಲ ವರ್ಗದ (ವಾರ್ಷಿಕ ವರಮಾನ ೩,೬೦೦ ರೂ.ಗಿಂತ ಕಡಿಮೆ) ಮಹಿಳೆಯರು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಕೈಗೊಳ್ಳಲು ಇಲಾಖೆಯು ನೆರವನ್ನು ನೀಡುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳು ನೀಡುವ ಸಾಲದ ಶೇ. ೨೫ರಷ್ಟನ್ನು ರಿಯಾಯಿತಿ ರೂಪದಲ್ಲಿ ಮಹಿಳೆಯರು ಆದಾಯ ತರುವ ಉತ್ಪಾದನಾ ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಇಲಾಖೆಯಿಂದ ನೆರವು ನೀಡಲಾಗುತ್ತಿದೆ. ಈ ಯೋಜನೆಯು ಜಿಲ್ಲೆಯಲ್ಲಿ ೧೯೮೫-೮೬ರಲ್ಲಿ ಪ್ರಾರಂಭವಾಗಿ ಇದರಡಿಯಲ್ಲಿ ಕಳೆದ ಮೂರು ವರ್ಷಗಳಿಂದ ಫಲಾನುಭವಿಗಳ ಸಂಖ್ಯೆ ಹಾಗೂ ಆದ ವೆಚ್ಚವನ್ನು ಪಟ್ಟಿಯಲ್ಲಿ ನೀಡಿದೆ.

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೨-೯೩ | ೧೦೬ | ೧.೨೦ |
| ೧೯೯೩-೯೪ | ೧೦೮ | ೧.೨೦ |
| ೧೯೯೪-೯೫ | ೮೯ | ೦.೮೬ |

## ನಿರ್ಗತಿಕ ತಬ್ಬಲಿ ಮಕ್ಕಳ ರಕ್ಷಣೆ

ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಕನಿಷ್ಠ ಮೂರು ವರ್ಷ, ಮಕ್ಕಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೊಂದಾಯಿತ ಸ್ವಯಂ ಸೇವಾ ಸಂಸ್ಥೆಗಳಿಗೆ ೨೫ ಮಕ್ಕಳಿಗೊಂದರಂತೆ ಕುಟೀರವನ್ನು ತೆಗೆಯಲು ಅನುಮತಿ ನೀಡಲಾಗುವುದು. ಈ ಯೋಜನೆ ಮೇರೆಗೆ ಪ್ರತಿಯೊಂದು ಮಗುವಿಗೆ ೪೦ ರೂ.ಗಳಂತೆ ಬಾಡಿಗೆಯನ್ನು ಕೊಡಲಾಗುವುದು. ಈ ಯೋಜನೆ ಮೇರೆಗೆ ೫ ರಿಂದ ೧೨ರ ವಯೋವರ್ಗದ ನಿಗತಿಕ ಮತ್ತು ತಬ್ಬಲಿ ಬಾಲಕ-ಬಾಲಕಿಯರಿಗೆ ರಕ್ಷಣೆ ಮತ್ತು ಪುನರ್ವಸತಿಗಾಗಿ ಪ್ರವೇಶ ಕೊಡಲಾಗುವುದು. ಈ ಯೋಜನೆ ಪ್ರಕಾರ ಅನುಮೋದಿತ ವೆಚ್ಚದ ಶೇ. ೯೦ರಷ್ಟನ್ನು ಭಾರತ

ಸರ್ಕಾರ ಮತ್ತು ರಾಜ್ಯ ಸರ್ಕಾರವು ೫೦:೫೦ ಅನುಪಾತದಲ್ಲಿ ನೀಡುತ್ತದೆ. ಉಳಿದ ಶೇ. ೧೦ರಷ್ಟನ್ನು ಸಂಸ್ಥೆಯು ಭರಿಸಬೇಕಾಗುತ್ತದೆ. ಈ ಯೋಜನೆಯು ಜಿಲ್ಲೆಯಲ್ಲಿ ೧೯೭೭-೭೮ರಲ್ಲಿ ಪ್ರಾರಂಭವಾಗಿ, ೭೫ ಫಲಾನುಭವಿಗಳಿಗಾದ ವೆಚ್ಚ ೧.೨೫ ಲಕ್ಷ ರೂ.ಗಳಾಗಿರುತ್ತದೆ. ೧೯೯೪-೯೫ನೇ ಸಾಲಿನಲ್ಲಿ ತಾಲೂಕುವಾರು ಫಲಾನುಭವಿಗಳ ಸಂಖ್ಯೆ ಮತ್ತು ಆದ ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ನೀಡಿದೆ.

**ಕೋಷ್ಟಕ ೧೬.೨೪**

| ಕ್ರ.ಸಂ. | ತಾಲೂಕುಗಳು | ಕುಟೀರಗಳು | ಮಕ್ಕಳ ಸಂಖ್ಯೆ | | ವೆಚ್ಚ |
|---|---|---|---|---|---|
| | | | ಗಂಡು | ಹೆಣ್ಣು | (ಲಕ್ಷ ರೂ.ಗಳಲ್ಲಿ) |
| ೧. | ಅಫಜಲ್‌ಪುರ | ೧ | ೨೫ | - | ೦.೬೦೩ |
| ೨. | ಆಳಂದ | ೨ | ೫೦ | - | ೧.೧೬೬ |
| ೩. | ಚಿತ್ತಾಪುರ | ೧ | ೨೫ | - | ೦.೬೦೩ |
| ೪. | ಗುಲಬರ್ಗಾ | ೮ | ೧೫೦ | ೫೦ | ೫.೪೧೨ |
| ೫. | ಜೇವರ್ಗಿ | ೪ | ೦೦ | - | ೨.೩೭೬ |
| ೬. | ಸೇಡಂ | ೩ | ೭೫ | - | ೨.೧೨೭ |
| | ಒಟ್ಟು | ೧ | ೪೨೫ | ೫೦ | ೨.೨೮೭ |

### ಗ್ರಾಮೀಣ ವಿದ್ಯಾರ್ಥಿನಿಯರಿಗೆ ಹಾಜರಾತಿ ವೇತನ

ಗ್ರಾಮೀಣ ಪ್ರದೇಶದಲ್ಲಿ, ಅದರಲ್ಲಿಯೂ ಬಾಲಕಿಯರು ತಮ್ಮ ಶಿಕ್ಷಣವನ್ನು ಮುಂದುವರಿಸಲು ಸಹಾಯಕವಾಗುವಂತೆ ಈ ಯೋಜನೆಯನ್ನು ರೂಪಿಸಲಾಗಿದೆ. ಮಹಿಳಾ ಕಡ್ಡಾಯ ಶಿಕ್ಷಣವನ್ನು ಪ್ರೋತ್ಸಾಹಿಸುವಲ್ಲಿ ಇದು ಒಂದು ಪ್ರಮುಖ ಹೆಜ್ಜೆ. ಈ ಯೋಜನೆಯಡಿಯಲ್ಲಿ ಕನಿಷ್ಠ ಶೇಕಡ ೮೦ ಹಾಜರಾತಿ ಪಡೆದು ಉತ್ತೀರ್ಣರಾದ ೫ನೇ ತರಗತಿಯಿಂದ ೭ನೇ ತರಗತಿಯವರೆಗೆ ಓದುವ ಹೆಣ್ಣು ಮಕ್ಕಳಿಗೆ ತಿಂಗಳಿಗೆ ೨೫ ರೂ.ಗಳು, ೮ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಓದುವ ಮಕ್ಕಳಿಗೆ ತಿಂಗಳಿಗೆ ೫೦ ರೂ.ಗಳಂತೆ ವರ್ಷದಲ್ಲಿ ೧೦ ತಿಂಗಳ ವಿದ್ಯಾರ್ಥಿ ವೇತನವನ್ನು ನೀಡಲಾಗುವುದು. ಈ ಯೋಜನೆಯಲ್ಲಿ ಸೌಲಭ್ಯ ಪಡೆಯುವ ಅಭ್ಯರ್ಥಿಯ ಕುಟುಂಬದ ವಾರ್ಷಿಕ ವರಮಾನ ೧೦ ಸಾವಿರ ರೂ.ಗಳಿಗೆ ಮೀರಬಾರದು. ಈ ಯೋಜನೆಯು ಜಿಲ್ಲೆಯಲ್ಲಿ ೧೯೯೨-೯೩ ಪ್ರಾರಂಭವಾದರೂ ಕಾರ್ಯರೂಪಕ್ಕೆ ಬಂದದ್ದು ೧೯೯೩-೯೪ ರಿಂದ. ಅದರ ವಿವರ ಈ ಕೆಳಗಿನಂತಿದೆ.

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೩-೯೪ | ೨,೦೪೬ | ೬.೬೦ |
| ೧೯೯೪-೯೫ | ೨,೨೯೧ | ೭.೭೦ |

### ಬಾಲ ಮಂದಿರಗಳು (ರಿಮ್ಯಾಂಡ್ ಹೋಮ್ಸ್)

ನ್ಯಾಯಾಲಯದ ಮತ್ತು ಬಾಲ ನ್ಯಾಯಾಲಯ ಮಂಡಳಿಯಿಂದ ಕಳುಹಿಸಲ್ಪಟ್ಟ ಮಕ್ಕಳನ್ನು ಅವರಿಗೆ ಮುಂಬರುವ ದಿನಗಳಲ್ಲಿ ಪುನರ್ವಸತಿ ಕಲ್ಪಿಸುವ ಸಲುವಾಗಿ ಬಾಲ ಮಂದಿರಗಳಲ್ಲಿ ಸೇರಿಸಿಕೊಳ್ಳಲಾಗುತ್ತದೆ. ಅವರಿಗೆ ೭ನೇ ತರಗತಿವರೆಗೆ ಸಂಸ್ಥೆಯಲ್ಲಿ ಶಿಕ್ಷಣವನ್ನು ನೀಡಲಾಗುವುದು. ಇದರ ಜೊತೆಗೆ, ಮರಗೆಲಸ, ನೇಯುವುದು, ಬಟ್ಟೆ ಹೊಲೆಯುವುದು, ಮುದ್ರಣದ ಕೆಲಸ, ಚಪ್ಪಲಿ ತಯಾರಿಸುವುದು ಇವೇ ಮೊದಲಾದ ಕುಶಲಕಲೆಗಳಲ್ಲಿ ವೃತ್ತಿಪರ ತರಬೇತಿಯನ್ನು ಸಹಾ

ನೀಡಲಾಗುವುದು. ಈ ಯೋಜನೆಯು ಜಿಲ್ಲೆಯಲ್ಲಿ ೯೬೦-೬ರಲ್ಲಿ ಪ್ರಾರಂಭವಾಗಿ ಜಿಲ್ಲೆಯಲ್ಲಿ ಕೇವಲ ಒಂದೇ ಸರ್ಕಾರಿ ಬಾಲ ಮಂದಿರ ಗುಲಬರ್ಗಾದಲ್ಲಿದೆ. ಕಳೆದ ಮೂರು ವರ್ಷಗಳಲ್ಲಿ ಸೌಲಭ್ಯ ಪಡೆದವರು ಮತ್ತು ಆದ ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ಸೂಚಿಸಿದೆ.

**ಕೋಷ್ಟಕ ೬.೨೬**

| ವರ್ಷ | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) |
|---|---|---|
| ೧೯೯೨-೯೩ | ೫೧ | ೧೨,೪೬೩ |
| ೧೯೯೩-೯೪ | ೬೩ | ೪೮,೯೯೫ |
| ೧೯೯೪-೯೫ | ೪ | ೧೦,೮೯೪ |

## ಶಿಶುಪಾಲನಾ ಕೇಂದ್ರಗಳು

ಈ ಯೋಜನೆಯಡಿಯಲ್ಲಿ ಇಲಾಖೆಯು ವ್ಯವಸಾಯ ಹಾಗೂ ಇನ್ನಿತರ ವೃತ್ತಿನಿರತ ಮಹಿಳೆಯರ ಮಕ್ಕಳಿಗೆ ಆಶ್ರಯ ನೀಡಲು ಗ್ರಾಮಾಂತರ ಪ್ರದೇಶಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ಪ್ರಾರಂಭಿಸಲು ಧನ ಸಹಾಯ ನೀಡುತ್ತಿದೆ. ಈ ಯೋಜನೆಯ ಪ್ರಕಾರ ಮೂರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಆಶ್ರಯ ಮತ್ತು ಉತ್ತಮವಾದ ವಾತಾವರಣ ಕಲ್ಪಿಸಿಕೊಟ್ಟು ಆರೋಗ್ಯಕರ ಬೆಳವಣಿಗೆಗೆ ಸಹಾಯವಾಗುವುದರ ಜೊತೆಗೆ ಶಿಶು ಮರಣಗಳನ್ನು ತಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ಈ ಯೋಜನೆಯ ಅನ್ವಯ ಜಿಲ್ಲೆಯಲ್ಲಿ ೯೮೫-೮೬ರಲ್ಲಿ ಒಂದು ಕೇಂದ್ರ ಪ್ರಾರಂಭವಾಗಿ, ೨೫ ಮಕ್ಕಳು ಇದರ ಸೌಲಭ್ಯ ಪಡೆದು ಇದಕ್ಕಾಗಿ ೧.೧೩೮ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಫಲಾನುಭವಿಗಳ ಸಂಖ್ಯೆ ಮತ್ತು ಆದ ವೆಚ್ಚವನ್ನು ಈ ಪಟ್ಟಿಯಲ್ಲಿ ನೀಡಲಾಗಿದೆ.

**ಕೋಷ್ಟಕ ೬.೨೩**

| ವರ್ಷ | ಕುಟೀರಗಳ ಸಂಖ್ಯೆ ಸಂಖ್ಯೆ | ಕುಟೀರಗಳಲ್ಲಿ ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|
| ೧೯೯೨-೯೩ | ೨೨ | ೫೫೦ | ೨.೬ |
| ೧೯೯೩-೯೪ | ೨೨ | ೫೫೦ | ೧.೩೧ |
| ೧೯೯೪-೯೫ | ೨೨ | ೫೫೦ | ೧.೯೯ |

## ವಿಧವಾ ವೇತನ ಯೋಜನೆ

೮ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಹಾಗೂ ಕುಟುಂಬದ ವಾರ್ಷಿಕ ಆದಾಯ ೫೦೦ ರೂ.ಗಳಿಗಿಂತ ಕಡಿಮೆಯಿರುವ ನಿರ್ಗತಿಕ ವಿಧವೆಯರಿಗೆ ಸಾಮಾಜಿಕ ಭದ್ರತಾ ಕ್ರಮವಾಗಿ ೫೦ ರೂ.ಗಳ ಮಾಸಾಶನ ನೀಡಲಾಗುವುದು. ಈ ಯೋಜನೆಯನ್ನು ಆಯಾ ತಾಲೂಕಿನ ತಹಶೀಲ್ದಾರರು ಕಾರ್ಯಗತಗೊಳಿಸುತ್ತಾರೆ. ಜಿಲ್ಲೆಯಲ್ಲಿ ೧೮೭ ನಿರ್ಗತಿಕ ವಿಧವೆಯರು ಇದರ ಸೌಲಭ್ಯ ಪಡೆದು, ಇದಕ್ಕಾಗಿ ೯೪-೯೫ರಲ್ಲಿ ೯,೮೦೦ ರೂ.ಗಳ ವೆಚ್ಚವಾಗಿದೆ.

## ವೃತ್ತಿ ತರಬೇತಿ

ಕುಟುಂಬದ ವಾರ್ಷಿಕ ಆದಾಯ ೨,೪೦೦ ರೂ.ಗಳಿಗಿಂತ ಕಡಿಮೆ ಇರುವ ಮಹಿಳೆಯರು ಹೊಲಿಗೆ ತರಬೇತಿ, ಬೆರಳಚ್ಚು ತರಬೇತಿ, ಕಸೂತಿ ಮುಂತಾದ ಕಸುಬುಗಳಲ್ಲಿ ತರಬೇತಿ ಪಡೆಯಲು ಇಲಾಖೆಯು ಸಹಾಯಧನ ನೀಡುತ್ತದೆ. ೧೯೯೩-೯೪ನೇ ಸಾಲಿನಲ್ಲಿ ೨೪ ಮಹಿಳೆಯರೂ, ೧೯೯೪-೯೫ನೇ ಸಾಲಿನಲ್ಲಿ ೪ ಮಹಿಳೆಯರೂ ಇದರ ಸೌಲಭ್ಯ ಪಡೆದಿದ್ದು,

ಈ ಎರಡು ವರ್ಷಗಳಲ್ಲಿ ಕ್ರಮವಾಗಿ ೨೬,೦೦೦ ರೂ. ಮತ್ತು ೧೪,೯೨೦ ರೂ.ಗಳನ್ನು ಸಹಾಯಧನವನ್ನಾಗಿ ನೀಡಿದೆ.

**ದೇವದಾಸಿಯರ ಪುನರ್ವಸತಿ ಕಾರ್ಯಕ್ರಮ**

ದೇವದಾಸಿ ಮಹಿಳೆಯರ ಪುನರ್ವಸತಿ ಯೋಜನೆಯನ್ವಯ ವಿವಿಧ ವೃತ್ತಿಗಳಲ್ಲಿ ತರಬೇತಿ ನೀಡಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗುವಂತೆ ಮಾಡುವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆಯಾದರೂ ನೊಂದಾಯಿಸಲ್ಪಟ್ಟ ಸ್ವಯಂ ಸೇವಾ ಸಂಸ್ಥೆಗಳಿಗೆ ತರಬೇತಿಗಾಗಿ ಹಾಗೂ ಉತ್ಪಾದನಾ ಘಟಕಗಳನ್ನು ಪ್ರಾರಂಭಿಸಲು ಗರಿಷ್ಠ ಒಂದು ಲಕ್ಷ ರೂಪಾಯಿಗಳ ಧನ ಸಹಾಯ ನೀಡಲಾಗುವುದು. ಇದಲ್ಲದೆ ವೈದ್ಯಕೀಯ ತಪಾಸಣಾ ಶಿಬಿರಗಳನ್ನು ನಡೆಸಲು ಹಾಗೂ ಸಾಕ್ಷರರನ್ನಾಗಿ ಮಾಡಲು ಮತ್ತು ದೇವದಾಸಿಯಂಥ ಅನಿಷ್ಟಗಳ ಬಗ್ಗೆ ತಿಳುವಳಿಕೆ ಮೂಡಿಸಲು "ಜಾಗೃತಿ ಶಿಬಿರ" (ಅವೇರ್‌ನೆಸ್ ಕ್ಯಾಂಪ್) ನಡೆಸಲು ಸಹಾಯ ನೀಡಲಾಗುವುದು.

ನಿಗಮವು ಪ್ರಥಮ ಬಾರಿಗೆ ಜಿಲ್ಲೆಯಲ್ಲಿ ೧೯೯೩-೯೪ರಲ್ಲಿ ದೇವದಾಸಿಯರ ಪುನರ್ವಸತಿಗಾಗಿ ಯೋಜನೆಯೊಂದನ್ನು ಹಮ್ಮಿಕ್ಕೊಂಡು, ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವ ರೀತಿಯಲ್ಲಿ ಉದ್ಯೋಗಕ್ಕೆ ಅನುಗುಣವಾಗಿ ೫೫ ದೇವದಾಸಿ ಮಹಿಳೆಯರಿಗೆ ತರಬೇತಿ ನೀಡುವ ಯೋಜನೆಯನ್ನು ಹಮ್ಮಿಕ್ಕೊಳ್ಳಲಾಗಿತ್ತು. ಕೈಮಗ್ಗದ ಬಟ್ಟೆ, ಉಣ್ಣೆ ನೇಯ್ಗೆ, ಚರ್ಮ ಕೈಗಾರಿಕೆ, ರೇಷ್ಮೆ ನೂಲು ತೆಗೆಯುವುದು ಇವುಗಳಲ್ಲಿ ತರಬೇತಿ ನೀಡಲಾಗುತ್ತಿದೆ. ೧೯೯೩-೯೪ನೇ ಸಾಲಿನಲ್ಲಿ ೫೩ ದೇವದಾಸಿ ಮಹಿಳೆಯರು ಸೌಲಭ್ಯ ಪಡೆದು ಇದಕ್ಕಾಗಿ ೯.೯೬ ಲಕ್ಷ ರೂ. ವೆಚ್ಚ ಮಾಡಲಾಗಿದೆ. ೧೯೯೪-೯೫ನೇ ಸಾಲಿನಲ್ಲಿ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದವರು ಮತ್ತು ಆದ ವೆಚ್ಚದ ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ನೀಡಲಾಗಿದೆ.

ಕೋಷ್ಟಕ ೬.೨೬

| ಕ್ರ.ಸಂ. | ಯೋಜನೆ | ಫಲಾನುಭವಿಗಳು | ವಿಸ್ತೀರ್ಣ | ಸಹಾಯಧನ (ಲಕ್ಷ ರೂ. ಗಳಲ್ಲಿ) | ಬೀಜಧನ (ಲಕ್ಷ ರೂ. ಗಳಲ್ಲಿ) | ಬ್ಯಾಂಕ್ ಸಾಲ (ಲಕ್ಷ ರೂ. ಗಳಲ್ಲಿ) |
|---|---|---|---|---|---|---|
| ೧. | ಭೂ ಒಡೆತನ ಯೋಜನೆ | ೮೮ | ೧೮೧.೩೫ | ೬.೯ | ೬.೨೨ | - |
| ೨. | ಸ್ವಯಂ ಉದ್ಯೋಗ ಯೋಜನೆ | ೦೬ | - | ೦.೨೫ | - | ೦.೪೫ |
| ೩. | ಡೈರಿ | ೦೯ | - | ೦.೩೮ | - | ೦.೩೬ |

**ಟ್ರೈಸಂ ಯೋಜನೆ**

ಗ್ರಾಮೀಣ ಯುವಕ ಹಾಗೂ ಯುವತಿಯರಿಗೆ ಸ್ವಯಂ ಉದ್ಯೋಗಕ್ಕಾಗಿ ತರಬೇತಿ ನೀಡಲು ಈ ಯೋಜನೆ ರೂಪಿಸಲಾಗಿದೆ. ಐ.ಆರ್.ಡಿ.ಪಿ. (ಇಂಟೆಗ್ರೇಟೆಡ್ ರೂರಲ್ ಡೆವಲೆಪ್‌ಮೆಂಟ್ ಪ್ರೋಗ್ರಾಂ) ಯೋಜನೆಯ ಅಂಗವಾಗಿ ಈ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಪ್ರದೇಶದಲ್ಲಿ ಬಡತನದ ರೇಖೆಗಿಂತ ಕೆಳಗಿರುವ ೮ ರಿಂದ ೩೫ ವರ್ಷದೊಳಗಿರುವ ವಿವಿಧ ಕಸುಬುಗಳಲ್ಲಿ ಮತ್ತು ತಾಂತ್ರಿಕ ಜ್ಞಾನದಲ್ಲಿ ತರಬೇತಿ ನೀಡಿ, ತರಬೇತಿ ಪಡೆದ ಯುವಕ, ಯುವತಿಯರಿಗೆ ಸ್ವಯಂ ಉದ್ಯೋಗದಲ್ಲಿ ತೊಡಗಿಸಲು ಅನುಕೂಲ ಮಾಡಿಕೊಡುವುದು. ಈ ತರಬೇತಿ ಯೋಜನೆಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗದ ತಾಂತ್ರಿಕ ಕಸುಬುಗಳಿಗೆ ೩ ರಿಂದ ೯ ತಿಂಗಳವರೆಗೆ ತರಬೇತಿ ನೀಡಲಾಗುವುದು. ಹೊಸ ದರಗಳ ಪ್ರಕಾರ ಐ.ಟಿ.ಐ., ಪಾಲಿಟೆಕ್ನಿಕ್, ಟೂಲ್‌ರೂಂ, ತಂತ್ರಜ್ಞಾನ, ಕೃಷಿವಿಜ್ಞಾನ ಕೇಂದ್ರ ಅಥವಾ ರಾಜ್ಯ ಮಟ್ಟದ ತಾಂತ್ರಿಕ ತರಬೇತಿ ಸಂಸ್ಥೆಗಳು, ಪ್ರತಿಷ್ಠಿತ ಸ್ವಯಂ ಸೇವಾ ಸಂಸ್ಥೆಗಳು ನಡೆಸುವ ತರಬೇತಿ ಕೇಂದ್ರಗಳಲ್ಲಿ ಹಾಗೂ ರಾಜ್ಯ ಮಟ್ಟದ ಸಂಯೋಜನಾ ಸಮಿತಿಯ ಅನುಮೋದನೆ ಪಡೆದ ಇತರ ಸಂಸ್ಥೆಗಳಲ್ಲಿ, ಸ್ವಉದ್ಯೋಗ ತರಬೇತಿ ಪಡೆದವರಿಗೆ ಸ್ಟೈಫಂಡ್ ಮತ್ತು ತಿಂಗಳಿಗೆ ೫೦೦ ರೂ. ನೀಡಲಾಗುವುದು. ತರಬೇತಿ ನೀಡುವ ಸಂಸ್ಥೆಗಳಿಗೆ ನೀಡುತ್ತಿದ್ದ ಗೌರವಧನ ಮೊತ್ತವನ್ನು ಪ್ರತಿ ಅಭ್ಯರ್ಥಿಗೆ ಪ್ರತಿ ತಿಂಗಳಿಗೆ ೨೦೦ ರೂ.ಗಳಿಂದ ೩೦೦ ರೂ.ಗಳಿಗೆ ನಿಗದಿ

ಪಡಿಸಲಾಗಿದೆ. ಈ ಯೋಜನೆಯು ಜಿಲ್ಲೆಯಲ್ಲಿ ೧೯೯೧ರಲ್ಲಿ ಪ್ರಾರಂಭವಾಗಿ ೫೦ ಯುವಕ, ಯುವತಿಯರಿಗೆ ತರಬೇತಿ ನೀಡಿದ್ದಕ್ಕಾಗಿ ೩,೭೫೦ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಕಳೆದ ನಾಲ್ಕು ವರ್ಷಗಳಲ್ಲಿ ಈ ಯೋಜನೆಯಡಿಯಲ್ಲಿ ಸೌಲಭ್ಯ ಪಡೆದವರು ಮತ್ತು ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ಸೂಚಿಸಿದೆ.

**ಕೋಷ್ಟಕ ೬.೨೮**

| ವರ್ಷ | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) |
|---|---|---|
| ೧೯೯೨-೯೩ | ೧೪೧ | ೨೧,೭೫೮ |
| ೧೯೯೩-೯೪ | ೦೪ | ೨,೯೦೪ |
| ೧೯೯೪-೯೫ | ೧೭ | ೧೮,೮೬೦ |
| ೧೯೯೫-೯೬ | ೧೮ | ೧೯,೮೬೦ |

## ಅಂಗವಿಕಲರ ಕಲ್ಯಾಣ

ನಮ್ಮ ದೇಶದ ಜನಸಂಖ್ಯೆಯ ಶೇ. ೧೧ರಷ್ಟು ಜನರು ಯಾವುದಾದರೊಂದು ಅಂಗವಿಕಲತೆಯಿಂದ ನರಳುತ್ತಾರೆಂದು ವರದಿಯಾಗಿದೆ. ಕರ್ನಾಟಕ ರಾಜ್ಯದ ಸ್ಥಿತಿಯು ಇದಕ್ಕಿಂತ ಭಿನ್ನವೇನಲ್ಲ. ಸ್ವಾತಂತ್ರ್ಯದ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೆರಡೂ ಅಂಗವಿಕಲರ ಕಲ್ಯಾಣಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಆದ್ದರಿಂದ ರಾಜ್ಯ ಸರ್ಕಾರವು ಇವರ ಆಸೆ ಆಕಾಂಕ್ಷೆಗಳ ಪೂರೈಕೆಗಾಗಿ ಹಾಗೂ ಸಮಸ್ಯೆಗಳ ಶೀಘ್ರ ಪರಿಹಾರಕ್ಕಾಗಿ ಪ್ರತ್ಯೇಕ ನಿರ್ದೇಶನಾಲಯವನ್ನು ೧೮.೯.೮೮ರಂದು ಸ್ಥಾಪಿಸಿತು. ಅಲ್ಲಿಯವರೆವಿಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿತ್ತು. ದೇಹದ ಯಾವುದಾದರೊಂದು ಅಥವಾ ಹೆಚ್ಚು ಅಂಗಗಳು ಊನವಾಗಿ, ಅದರಿಂದ ಅವರ ಶಕ್ತಿ, ಸಾಮರ್ಥ್ಯಗಳು ದುರ್ಬಲಗೊಂಡರೆ ತನ್ನ ದೈನಂದಿನ ಕ್ರಿಯೆಗಳನ್ನು ಸ್ವತಃ ಮಾಡಿಕೊಳ್ಳಲು ಅಸಮರ್ಥರಾದರೆ ಅಂತಹವರನ್ನು ಅಂಗವಿಕಲರೆಂದು ಕರೆಯುತ್ತಾರೆ. ಅಂಗವಿಕಲತೆಯಲ್ಲಿ ಅಂಧತ್ವ, ಅಂಗಊನ, ವಾಕ್‌ಶ್ರವಣ ತೊಂದರೆ ಮತ್ತು ಬುದ್ಧಿಮಾಂದ್ಯತೆ ಎಂಬುದಾಗಿ ನಾಲ್ಕು ರೀತಿಯ ವರ್ಗೀಕರಣ ಮಾಡಲಾಗಿದೆ. ಕುಷ್ಠರೋಗದಿಂದ ಕೈಕಾಲು ಊನಗೊಂಡು ಗುಣಮುಖರಾಗಿರುವವರನ್ನೂ ಅಂಗವಿಕಲರೆಂದು ಪರಿಗಣಿಸಲಾಗಿದೆ.

## ಶೈಕ್ಷಣಿಕ ಯೋಜನೆಗಳು

ಒಂದರಿಂದ ಎಂಟನೇ ತರಗತಿಯವರೆಗೆ ಓದುತ್ತಿರುವ ಹಾಗೂ ಸಂಗೀತ, ವರ್ಣಚಿತ್ರ, ಕಲೆ, ಛಾಯಾಚಿತ್ರ, ಮತ್ತಿತರ ಕಲೆಗಳಲ್ಲಿ ತರಬೇತಿ ಪಡೆಯುತ್ತಿರುವ ಹಾಗೂ ಕುಟುಂಬದ ವಾರ್ಷಿಕ ಆದಾಯ ೧೦,೦೦೦ ರೂ.ಗಳಿಗಿಂತ ಕಡಿಮೆ ಇರುವ ಅಂಗವಿಕಲ ಮಕ್ಕಳಿಗೆ ರಾಜ್ಯ ಸರ್ಕಾರವು ವಿದ್ಯಾರ್ಥಿ ವೇತನವನ್ನು ನೀಡುತ್ತದೆ. ಅಧ್ಯಯನದ ತರಗತಿಗಳನ್ನು ಅವಲಂಬಿಸಿ ರೂ. ೩೫ ರಿಂದ ರೂ. ೨೪೦ರ ವರೆಗೆ ವಿದ್ಯಾರ್ಥಿವೇತನ ಕೊಡಲು ಅವಕಾಶವಿದೆ. ವಿದ್ಯಾರ್ಥಿವೇತನದ ಜೊತೆಗೆ ನಿಯಮಗಳ ಪ್ರಕಾರ ಅಂಥ ವಿದ್ಯಾರ್ಥಿಗಳಿಗಾಗಿ ಓದುವ ಭತ್ಯವನ್ನು ಮತ್ತು ಶಸ್ತ್ರಚಿಕಿತ್ಸೆಗೊಳಗಾದ ಅಂಗವಿಕರ ವಿದ್ಯಾರ್ಥಿಗಳಿಗೆ ಸಾರಿಗೆ ಭತ್ಯವನ್ನು ನೀಡಲಾಗುವುದು.

ಈ ಯೋಜನೆಯು ಜಿಲ್ಲೆಯಲ್ಲಿ ೧೯೮೪-೮೫ರಲ್ಲಿ ಪ್ರಾರಂಭವಾಗಿ, ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿವೇತನದ ಸೌಲಭ್ಯ ಪಡೆದವರ ವಿವರ ಮತ್ತು ಆದ ವೆಚ್ಚವನ್ನು ಈ ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

**ಕೋಷ್ಟಕ ೬.೨೯**

ರಾಜ್ಯ ಸರ್ಕಾರದ ವಿದ್ಯಾರ್ಥಿ ವೇತನ ಕೇಂದ್ರ ಸರ್ಕಾರದ ವಿದ್ಯಾರ್ಥಿ ವೇತನ

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|---|---|
| ೧೯೯೨-೯೩ | ೭೪೮ | ೨.೫೦ | ೧೨೨ | ೧.೯೩ |
| ೧೯೯೩-೯೪ | ೬೬೬ | ೧.೯೦ | ೧೮ | ೨.೨೫ |
| ೧೯೯೪-೯೫ | ೫೪೭ | ೧.೭೨ | ೧೬೯ | ೨.೬ |

೯೩-೯೪ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿಯಲ್ಲಿ ಅಂಗವಿಕಲರ ಶಿಷ್ಯವೇತನ ಮಂಜೂರಾದ ವಿವರಗಳೆಂದರೆ, ಒಂದನೇ ತರಗತಿಯಿಂದ ಎಂಟನೇ ತರಗತಿಯವರೆಗೆ ೧೦೨ ಹೆಣ್ಣುಮಕ್ಕಳು, ೨೪೩ ಗಂಡುಮಕ್ಕಳು ಇದರ ಸೌಲಭ್ಯ ಪಡೆದು ಇದಕ್ಕಾಗಿ ೧.೧೫ ಲಕ್ಷ ರೂ. ವೆಚ್ಚವಾಗಿದೆ. ಇದಲ್ಲದೆ ೭ನೇ ತರಗತಿಯಿಂದ ಉಳಿದ ಎಲ್ಲಾ ಬಗೆಯ ಕೋರ್ಸುಗಳಾಗಿ ೧೭ ಹೆಣ್ಣು ಮಕ್ಕಳು ೬೬ ಗಂಡು ಮಕ್ಕಳು ಇದರ ಸೌಲಭ್ಯ ಪಡೆದು ಇದಕ್ಕಾಗಿ ೨ ಲಕ್ಷ ರೂ. ವೆಚ್ಚವಾಗಿದೆ.

ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳಿಗೆ ಉತ್ತಮ ಭವಿಷ್ಯವನ್ನು ರೂಪಿಸಲು ವೃತ್ತಿಪರ ಶಿಕ್ಷಣಗಳಾದ ಇಂಜಿನಿಯರಿಂಗ್ ಹಾಗೂ ಡಿಪ್ಲೊಮಾದಂತಹ ತಾಂತ್ರಿಕ ಶಿಕ್ಷಣ ಪ್ರವೇಶಗಳಲ್ಲಿ ಕೆಲವು ಸ್ಥಾನಗಳನ್ನು ಅಂಗವಿಕಲರಿಗಾಗಿಯೇ ಮೀಸಲಾಗಿರಿಸಲಾಗಿದೆ. ಶೇಕಡಾ ೬೦ಕ್ಕಿಂತ ಹೆಚ್ಚು ಅಂಕ ಗಳಿಸಿ ತೇರ್ಗಡೆಯಾದ ಪ್ರತಿಭಾವಂತ ಅಂಗವಿಕಲ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲು ಬಹುಮಾನ ನೀಡುವ ವಿನೂತನ ಯೋಜನೆಯನ್ನು ಇಲಾಖೆಯು ಅನುಷ್ಠಾನಗೊಳಿಸಿದೆ. ೧೯೯೨-೯೩ರಲ್ಲಿ ೨೮೫ ಫಲಾನುಭವಿಗಳಿಂದ ಆದ ವೆಚ್ಚ ೨.೯ ಲಕ್ಷ ರೂ.ಗಳು. ೧೯೯೩-೯೪ನೇ ಸಾಲಿನಲ್ಲಿ ೪೩೮ ಫಲಾನುಭವಿಗಳಿಂದ ೩.೧೫ ಲಕ್ಷ ರೂ. ವೆಚ್ಚವಾಗಿದೆ. ಭಾರತ ಸರ್ಕಾರವು ಅಂಗವಿಕಲರಿಗಾಗಿ ಶೇ. ೪ ಹುದ್ದೆಗಳನ್ನು ಮೀಸಲಾಗಿರಿಸಿದೆ. ಆದರೆ ಕರ್ನಾಟಕ ಸರ್ಕಾರ ಸಿ ಮತ್ತು ಡಿ. ಹುದ್ದೆಗಳನ್ನು ಮೀಸಲಾಗಿರಿಸಿದ್ದಲ್ಲದೆ, ಹಿಂಬಾಕಿ ಹುದ್ದೆಗಳನ್ನು ತುಂಬಲು ವಿಶೇಷ ಆದೇಶ ಹೊರಡಿಸಿದೆ. ವಿವಿಧ ಅಂಗವಿಕಲರಿಗೂ ಪ್ರತ್ಯೇಕ ಮೀಸಲಾತಿ ಅವಕಾಶ ಕಲ್ಪಿಸಲಾಗಿದೆ. ಅಂಗವಿಕಲರ ಸ್ವಯಂ ಉದ್ಯೋಗಕ್ಕಾಗಿ ಕರ್ನಾಟಕ ರಾಜ್ಯ ಹಣಕಾಸು ನಿಗಮದ ಮೂಲಕ ಜಾರಿಗೊಳಿಸಲಾಗಿದೆ. ನಿರುದ್ಯೋಗಿ ಅಂಗವಿಕಲರು ಆರಂಭಿಸುವ ಉದ್ದಿಮೆಗೆ ೫೦ ಸಾವಿರ ರೂ.ವರೆವಿಗೆ ಸಾಲ ದೊರೆಯುತ್ತದೆ. ೨೫ ಪ್ರತಿಶತ ಅಂದರೆ ಗರಿಷ್ಠ ೬,೨೫೦ ರೂ. ಸಹಾಯವನ್ನೂ ನೀಡಲಾಗುತ್ತಿದೆ. ಕೇಂದ್ರ ಸರ್ಕಾರದ ವೃತ್ತಿ ಪುನರ್ವಸತಿ ಕೇಂದ್ರಗಳಲ್ಲಿ ಅಂಗವಿಕಲರಿಗೆ ವೃತ್ತಿ ತರಬೇತಿ ನೀಡಿ ಅವರ ಸಾಮರ್ಥ್ಯ ನಿರ್ಧರಿಸಲಾಗುವುದು. ಚಲನವಲನಗಳನ್ನು ಸುಧಾರಿಸಲು ಸರ್ಕಾರವು ಸಾಧನ ಸಲಕರಣೆಗಳ ಪೂರೈಕೆಗಾಗಿ ನೆರವು ನೀಡುವುದು. ಜೀವನೋಪಾಯಕ್ಕೆ ಮಾರ್ಗವಿಲ್ಲದ ಅಂಗವಿಕಲರಿಗೆ ತಿಂಗಳಿಗೆ ೫೦ ರೂ. ನಿರ್ವಹಣಾ ಭತ್ಯ ಪಡೆಯುತ್ತಾರೆ. ಸರ್ಕಾರವು ಕೆಲವು ಜಿಲ್ಲೆಗಳಲ್ಲಿ ತಾತ್ಕಾಲಿಕ ವಸತಿಗೃಹಗಳನ್ನು ಪ್ರಾರಂಭಿಸಿದೆ. ಚಿಕಿತ್ಸೆಗಾಗಿ ಬರುವ ಅಂಗವಿಕಲರು ಈ ಗೃಹಗಳಲ್ಲಿದ್ದು ಉಚಿತ ಊಟ ಮತ್ತು ವಸತಿಯನ್ನು ಪಡೆಯುತ್ತಾರೆ. ಇಂತಹ ಸಂಸ್ಥೆಗಳನ್ನು ನಡೆಸುವ ಸ್ವಯಂ ಸೇವಾ ಸಂಸ್ಥೆಗಳಿಗೆ ಸರ್ಕಾರ ಶೇ. ೯೦ ರಷ್ಟು ಅನುದಾನ ನೀಡುತ್ತದೆ. ಸ್ವಯಂ ಉದ್ಯೋಗವನ್ನು ಪ್ರೋತ್ಸಾಹಿಸುವ ಸಲುವಾಗಿ ಅಂಗವಿಕಲ ವ್ಯಕ್ತಿಗಳಿಗೆ ಸಾಲದ ರೂಪದಲ್ಲಿ ಹಣದ ನೆರವನ್ನು ಕೊಡಲಾಗುತ್ತದೆ. ಈ ಯೋಜನೆಯು ಕರ್ನಾಟಕ ರಾಜ್ಯ ಹಣಕಾಸು ನಿಗಮ, ಬೆಂಗಳೂರು ಇವರಿಂದ ಜಾರಿಗೆ ಬಂದಿದೆ. ಯಾವ ಅಶಕ್ತ ಉದ್ಯಮಿಯ ವಾರ್ಷಿಕ ಆದಾಯ ೦,೦೦೦ ರೂ.ಗಳನ್ನು ಮೀರಿರುವುದಿಲ್ಲವೋ ಅವರು ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಸಾಲ ಮತ್ತು ಸಹಾಯಧನ ಪಡೆಯಲು ಅರ್ಹರು. ೧೧ ವರ್ಷಕ್ಕೆ ಮೇಲ್ಪಟ್ಟು ೨೫ ವರ್ಷದೊಳಗಿರುವ ಕಿವುಡರಿಗೆ ವ್ಯವಸಾಯ ಆಧಾರಿತ ಪ್ರಮಾಣಿತ ಶಾಲೆಯಲ್ಲಿ ವ್ಯವಸಾಯ, ರೇಷ್ಮೆ ಮತ್ತು ತೋಟಗಾರಿಕೆ ತರಬೇತಿಯನ್ನು ಕೊಡಲಾಗುತ್ತದೆ. ಇದರ ಅವಧಿ ಎರಡು ವರ್ಷಗಳಾಗಿದ್ದು, ಉಚಿತ ಊಟ ಮತ್ತು ವಸತಿ ಹಾಗೂ ತರಬೇತಿಯಲ್ಲಿರುವ ಪ್ರತಿಯೊಬ್ಬರಿಗೂ ತಿಂಗಳಿಗೆ ೨೫ ರೂ. ಸ್ಟೈಫಂಡನ್ನು ಕೊಡಲಾಗುವುದು.

ಕುರುಡರಿಗೆ ಶೈಕ್ಷಣಿಕ ಕಾರ್ಯ ಮತ್ತು ಸಾಮಾನ್ಯ ಓದಿಗಾಗಿ ಅಗತ್ಯವಿರುವ ಬ್ರೈಲ್ ಓದುವ ಸಲಕರಣೆಗಳನ್ನು ಸರಬರಾಜಿನಲ್ಲಿರುವ ಕೊರತೆಯನ್ನು ಸರಿತೂಗಿಸುವ ಸಲುವಾಗಿ ಒಂದು ಪ್ರತ್ಯೇಕ ಮತ್ತು ಸ್ವತಂತ್ರವಾದ ಮುದ್ರಣಾಲಯವನ್ನು ಮೈಸೂರಿನ ಅಂಧ ಮಕ್ಕಳ ಶಾಲಾ ಆವರಣದಲ್ಲಿ ಸ್ಥಾಪಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಸೌಲಭ್ಯ ಪಡೆದವರ ವಿವರಗಳನ್ನು ಮುಂದಿನ ಪಟ್ಟಿಯಲ್ಲಿ ಕೊಟ್ಟಿದೆ.

**ಕೋಷ್ಟಕ ೬.೩೦**

| ವರ್ಷ | ಯೋಜನೆ | ಫಲಾನುಭವಿಗಳು | ವೆಚ್ಚ (ರೂ.ಗಳಲ್ಲಿ) |
|---|---|---|---|
| ೧೯೯೨-೯೩ | ಬ್ರೈಲ್ ಗಡಿಯಾರ | ೪೫ | ೧೪,೧೩೦ |
| | ತ್ರಿಚಕ್ರವಾಹನ | ೨೬೨ | ೫,೨೭,೪೨೦ |
| | ಸ್ವಯಂ ಉದ್ಯೋಗ | ೦೧ | ೩೫,೦೦೦ |
| ೧೯೯೩-೯೪ | ಬ್ರೈಲ್ ಗಡಿಯಾರ | ೧೬ | ೪,೫೬೯ |
| | ತ್ರಿಚಕ್ರ ವಾಹನ | ೧೨ | ೨೪,೧೨೦ |
| | ವೈಟ್ ಕೇನ್ (ಅಂಗವಿಕರಲರು ಉಪಯೋಗಿಸುವ ಕೋಲು) | ೮೩ | ೩,೩೨೦ |
| | ಶ್ರವಣಸಾಧನ ಯಂತ್ರ | ೦೬ | ೩,೪೮೦ |
| | ಕೃತಕ ಅಂಗಾಂಗ | ೦೧ | ೩,೫೧೦ |
| | ಸ್ವಯಂ ಉದ್ಯೋಗ | ೦೪ | ೨,೦೦,೦೦೦ |
| ೧೯೯೪-೯೫ | ಬ್ರೈಲ್ ಗಡಿಯಾರ | ೧೦ | ೨,೮೦೬ |
| | ತ್ರಿಚಕ್ರ ವಾಹನ | ೪೦ | ೬೩,೧೫೦ |
| | ಶ್ರವಣ ಸಾಧನಯಂತ್ರ | ೦೫ | ೨,೯೦೦ |
| | ಕೃತಕ ಅಂಗಾಂಗ | ೦೫ | ೮,೫೧೪ |
| | ಕ್ಯಾಲೀಪರ್ಸ್ | ೦೨ | ೧,೯೫೦ |

**ಕೋಷ್ಟಕ ೧೬.೩೧**

೧೯೮೧ರ ಜನಗಣತಿಯ ಪ್ರಕಾರ ಜಿಲ್ಲೆಯಲ್ಲಿನ ಅಂಗವಿಕಲರ ವಿವರ

| ಕ್ರ. ಸಂ. | ತಾಲೂಕು | | ಅಂಧರು | ಕೈಕಾಲು ಹೀನರು | ಕಿವುಡರು |
|---|---|---|---|---|---|
| ೧. | ಅಫಜಲ್‌ಪುರ | ಗ್ರಾಮಾಂತರ | ೮೮ | ೫೨ | ೪೭ |
| | | ನಗರ | ೦೮ | ೦೩ | ೦೮ |
| ೨. | ಆಳಂದ | ಗ್ರಾಮಾಂತರ | ೧೮೨ | ೮೫ | ೧೨೩ |
| | | ನಗರ | ೦೭ | ೦೭ | ೦೩ |
| ೩. | ಚಿಂಚೋಳಿ | ಗ್ರಾಮಾಂತರ | ೧೦೧ | ೬೯ | ೮೩ |
| | | ನಗರ | ೦೧ | ೦೪ | -- |
| ೪. | ಚಿತ್ತಾಪುರು | ಗ್ರಾಮಾಂತರ | ೧೧೯ | ೬೨ | ೬೭ |
| | | ನಗರ | ೩೮ | ೧೬ | ೨೪ |

| | | | | | |
|---|---|---|---|---|---|
| ೫. | ಗುಲಬರ್ಗಾ | ಗ್ರಾಮಾಂತರ | ೧೧೬ | ೮೬ | ೬೮ |
| | | ನಗರ | ೬೨ | ೪೬ | ೨೪ |
| ೬. | ಜೇವರ್ಗಿ | ಗ್ರಾಮಾಂತರ | ೯೭ | ೫೨ | ೧೨೩ |
| | | ನಗರ | ೦೫ | ೦೩ | ೦೨ |
| ೭. | ಶಹಪುರ | ಗ್ರಾಮಾಂತರ | ೧೨೩ | ೬೬ | ೭೮ |
| | | ನಗರ | ೧೨ | ೦೭ | ೦೭ |
| ೮. | ಸುರಪುರ | ಗ್ರಾಮಾಂತರ | ೧೬೬ | ೬೧ | ೧೦೮ |
| | | ನಗರ | ೧೫ | ೦೩ | ೦೯ |
| ೯. | ಸೇಡಂ | ಗ್ರಾಮಾಂತರ | ೮೬ | ೪೩ | ೫೪ |
| | | ನಗರ | ೦೬ | ೦೧ | ೦೨ |
| ೧೦. | ಯಾದಗಿರಿ | ಗ್ರಾಮಾಂತರ | ೧೬೩ | ೮೬ | ೮೫ |
| | | ನಗರ | ೩೬ | ೨೬ | ೨೧ |
| | ಜಿಲ್ಲೆಯ ಒಟ್ಟು | | ೧೪೩೧ | ೭೭೮ | ೯೩೬ |

## ರಾಜೀವ್ ಪೂರ್ಣಾಂಗ ಯೋಜನೆ

ಅಂಗವಿಕಲರ ಆರ್ಥಿಕ ಪುನರ್ವಸತಿಗಾಗಿ ಈ ನೂತನ ಯೋಜನೆಯೊಂದನ್ನು ೧೯೯೨ರಲ್ಲಿ ಪ್ರಾರಂಭಿಸಲಾಯಿತು. ಈ ಯೋಜನೆಯ ಪ್ರಕಾರ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ೨೦ರಂತೆ ರಾಜ್ಯದಲ್ಲಿ ಒಟ್ಟಾರೆ ೪,೪೮೦ ತ್ರಿಚಕ್ರ ವಾಹನಗಳನ್ನು ಒದಗಿಸಿದರೆ ಗುಲಬರ್ಗಾದಲ್ಲಿ ಕಳೆದ ಮೂರು ವರ್ಷಗಳಲ್ಲಿ ೩೪ ಫಲಾನುಭವಿಗಳು ಇದರ ಸೌಲಭ್ಯ ಪಡೆದು ೬.೫ ಲಕ್ಷ ರೂ. ವೆಚ್ಚವಾಗಿದೆ. ಈ ಯೋಜನೆಯಲ್ಲಿ ಅಂಗವಿಕಲರಿಗೆ ಇರುವ ವಿಶೇಷ ಶಾಲೆಗಳಲ್ಲಿ ಕಲಿಸಲಾಗುತ್ತಿರುವ ವೃತ್ತಿಪರ ತರಬೇತಿಗಳನ್ನು ಆಧುನೀಕರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಸಮಾಜ ಕಲ್ಯಾಣ ಇಲಾಖೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಅಭಿವೃದ್ಧಿ ನಿಗಮ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ, ತಮ್ಮ ತಮ್ಮ ಸಂಸ್ಥೆಯ ವ್ಯಾಪ್ತಿಯಲ್ಲಿ ಉದ್ದೇಶಿತ ಅಂಗವಿಕಲರಿಗಾಗಿ ಆರ್ಥಿಕ ಯೋಜನೆಗಳನ್ನು ವಿಶೇಷವಾಗಿ ವಿಸ್ತರಿಸಲು ಮುಂದೆ ಬಂದಿವೆ. ೧೯೯೩-೯೪ನೇ ಸಾಲಿನಲ್ಲಿ ಅಂಗವಿಕಲರಿಗೆ ಐದು ದೂರವಾಣಿ ಬೂತ್‌ಗಳನ್ನು ವಿತರಣೆ ಮಾಡಿದ್ದಕ್ಕಾಗಿ ೫೦,೦೦೦ ರೂ. ವೆಚ್ಚ ಮಾಡಲಾಗಿದೆ.

## ಸ್ವಯಂ ಉದ್ಯೋಗ ಯೋಜನೆ

ಅಂಗವಿಕಲರು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಈ ಯೋಜನೆಯನ್ನು ಸಿದ್ಧಗೊಳಿಸಿದೆ. ಈ ಯೋಜನೆಯನ್ನು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಮೂಲಕ ಕಾರ್ಯಗತಗೊಳಿಸಿ ಅಂಗವಿಕಲ ಅಭ್ಯರ್ಥಿಗಳು ಯಾವುದೇ ಉತ್ಪಾದನಾ ಯೋಜನೆಯನ್ನು ಕೈಗೊಂಡು ಈ ಸಂಸ್ಥೆಯ ಮೂಲಕ ನೆರವನ್ನು ಪಡೆಯಬಹುದು. ಈ ಯೋಜನೆಯಲ್ಲಿ ೫೦,೦೦೦ ರೂ.ಗಳವರೆಗೆ ಸಾಲವನ್ನು ನೀಡಲಾಗುವುದು. ಇದಕ್ಕೆ ಸರ್ಕಾರ ಶೇ. ೨೫ರಷ್ಟು ಗರಿಷ್ಟ ೬,೨೫೦ ರೂ.ಗಳನ್ನು ಉಚಿತ ಧನಸಹಾಯ ನೀಡುವುದು. ೧೯೯೩-೯೪ರಲ್ಲಿ ೬ ಫಲಾನುಭವಿಗಳು ಇದರ ಪ್ರಯೋಜನ ಪಡೆದು ಇದಕ್ಕಾಗಿ ೧,೬೬,೦೦೦ ರೂ. ವೆಚ್ಚವಾಗಿದೆ. ೧೯೯೪-೯೫ರಲ್ಲಿ ೪ ಫಲಾನುಭವಿಗಳು ಪ್ರಯೋಜನ ಪಡೆದು ಇದಕ್ಕಾಗಿ ೧.೪ ಲಕ್ಷ ರೂ. ವೆಚ್ಚವಾಗಿದೆ.

## ಬುದ್ಧಿ ಮಾಂದ್ಯ ಮಕ್ಕಳ ಪೋಷಕರಿಗೆ ವಿಮಾ ಯೋಜನೆ ಸೌಲಭ್ಯ

ಈ ಯೋಜನೆ ಪ್ರಾಯೋಗಿಕವಾಗಿ ರಾಜ್ಯದ ನಾಲ್ಕು ಜಿಲ್ಲೆಗಳಲ್ಲಿ (೧೯೯೨-೯೩) ಪ್ರಾರಂಭವಾಯಿತು. ಅನಂತರ ೯೩-೯೪ನೇ ಸಾಲಿನಲ್ಲಿ ಉಳಿದ ಎಲ್ಲಾ ಜಿಲ್ಲೆಗಳಲ್ಲಿ ಈ ಯೋಜನೆ ಅನುಷ್ಠಾನಗೊಳಿಸಲಾಯಿತು. ಬುದ್ಧಿಮಾಂದ್ಯತೆಯಿಂದಾಗಿ ತಮ್ಮ ದೈನಂದಿನ ಕೆಲಸಗಳನ್ನು ತಾವೇ ಮಾಡಿಕೊಳ್ಳಲು ಅಸಮರ್ಪಕವಾಗಿರುವ, ಮಕ್ಕಳ ಪಾಲಕರ ವಾರ್ಷಿಕ ವರಮಾನ ೦,೦೦೦ ರೂ.ಗಿಂತ ಕಡಿಮೆ ಇದ್ದು ಗರಿಷ್ಠ ವಯೋಮಿತಿ ೪೫ ವರ್ಷಗಳೊಳಗಿರುವ ಪೋಷಕರಿಗೆ ವಿಮಾ ಯೋಜನೆ ಮಾಡಲು ಪ್ರಾರಂಭದಲ್ಲಿ ೨೦೦ ರೂ.ಗಳನ್ನು ಕೆ.ಪಿ.ಎಂ.ಆರ್.ಸಿ.ಗೆ ಕಟ್ಟಿ ಅಜೀವ ಸದಸ್ಯತ್ವವನ್ನು ಪಡೆಯತಕ್ಕದ್ದು. ಈ ಸಂಸ್ಥೆಯು ಜೀವನದಲ್ಲಿ ಒಮ್ಮೆ ೫೫೦ ರೂ.ಗಳನ್ನು ಜೀವ ವಿಮಾ ಸಂಸ್ಥೆಗೆ ಪಾವತಿ ಮಾಡುವುದು. ಎರಡನೇ ವರ್ಗದಡಿ ಪೋಷಕರ ವಾರ್ಷಿಕ ವರಮಾನ ೧೦,೦೦೦ ರೂ. ನಿಂದ ೧೨,೦೦೦ ರೂ.ನ ಒಳಗಿದ್ದರೆ, ಅಂತಹವರೂ ಅಜೀವ ಸದಸ್ಯತ್ವದ ಶುಲ್ಕವಾದ ೨೦೦ ರೂ.ಗಳನ್ನು ಕಟ್ಟಿದಾಗ ಕೆ.ಪಿ.ಎಂ.ಆರ್.ಸಿ.ಯು ಜೀವ ವಿಮೆ ಸಂಸ್ಥೆಗೆ ೧೧೦೦ ರೂ. ಕಟ್ಟುವುದು. ಒಂದು ವೇಳೆ ವಿಮಾದಾರ ತೀರಿಕೊಂಡರೆ ವಿಮಾ ಸಂಸ್ಥೆಯಿಂದ ಬರುವ ಹಣವನ್ನು ಕೆ.ಪಿ.ಎಂ.ಆರ್.ಸಿ.ಯು ಪಡೆದು, ಆ ಬುದ್ಧಿಮಾಂದ್ಯ ಮಗುವಿಗೆ ತಿಂಗಳಿಗೆ ೧೦೦ ರೂ. ಮೊದಲನೇ ವರ್ಗಕ್ಕೂ, ತಿಂಗಳಿಗೆ ೨೦೦ ರೂ. ಎರಡನೆ ವರ್ಗಕ್ಕೂ, ಇಡೀ ಜೀವನ ಪರ್ಯಂತ ಪಡೆಯಬಹುದಾಗಿದೆ. ೧೯೯೨-೯೩ನೇ ಸಾಲಿನಲ್ಲಿ ೨೮೫ ಫಲಾನುಭವಿಗಳು ಇದರ ಪ್ರಯೋಜನ ಪಡೆದು, ಇದಕ್ಕಾಗಿ ೨.೯ ಲಕ್ಷ ರೂ. ವೆಚ್ಚವಾಗಿದೆ. ೧೯೯೩-೯೪ನೇ ಸಾಲಿನಲ್ಲಿ ಒಬ್ಬ ಫಲಾನುಭವಿ ಪ್ರಯೋಜನ ಪಡೆದು ಇದಕ್ಕಾಗಿ ೯೦೦ ರೂ. ವೆಚ್ಚವಾಗಿದೆ.

## ಆದರ್ಶ ಅಂಧ ಬಾಲಕಿಯರ ಶಾಲೆ, ಗುಲಬರ್ಗಾ

ಈ ಸಂಸ್ಥೆಯು ೧೯೮೭-೮೮ರಲ್ಲಿ ಸ್ಥಾಪನೆಯಾಗಿ, ಪ್ರಾರಂಭದಲ್ಲಿ ಸಂಸ್ಥೆಯು ಅಂಧ ಬಾಲಕಿಯರಿಗೆ ಒಂದರಿಂದ ಏಳನೇ ತರಗತಿಗಳವರೆಗೆ ಉಚಿತ ಶಿಕ್ಷಣ ತರಗತಿಗಳನ್ನು ನಡೆಸುತ್ತಿದ್ದು, ಪೂರ್ಣ ಪ್ರಾಥಮಿಕ ಶಿಕ್ಷಣದ ಯೋಜನೆಯ ಗುರಿ ಹೊಂದಿದೆ. ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಕ್ರಮವಾಗಿ ಸೌಲಭ್ಯ ಪಡೆದವರೆಂದರೇ ೩೧,೨೮ ಮತ್ತು ೩೮ ಆಗಿದ್ದು, ಈ ಸಾಲುಗಳಲ್ಲಿ ಆದ ವೆಚ್ಚಗಳು ಕ್ರಮವಾಗಿ, ೧೨೪, ೩೮೭ ರೂ. ೧,೭೭,೦೮೫ ರೂ. ಮತ್ತು ೧,೬೬,೨೯೬ ರೂ.ಗಳಾಗಿವೆ.

## ಸರ್ಕಾರಿ ಅಂಧ ಮಕ್ಕಳ ಶಾಲೆ, ಗುಲಬರ್ಗಾ

ಈ ಸಂಸ್ಥೆ ೧೯೬೨ರಲ್ಲಿ ಪ್ರಾರಂಭವಾಗಿ, ಪ್ರಾರಂಭದಲ್ಲಿ ಅಂಧ ಮಕ್ಕಳಿಗೆ ಉಚಿತ ಶಿಕ್ಷಣ, ಸಂಗೀತ ಹಾಗೂ ಕೈಗಾರಿಕಾ ಕೆಲಸಗಳಲ್ಲಿ ತರಬೇತಿ ನೀಡುತ್ತಿತ್ತು. ಇಂದಿಗೂ ಸಹಾ ಒಂದರಿಂದ ೧ನೇ ತರಗತಿಯವರೆಗೆ ಉಚಿತ ಶಿಕ್ಷಣ ಹಾಗೂ ಸಂಗೀತ ಅಭ್ಯಾಸ ನಡೆಯುತ್ತಿದೆ. ಈ ಸಂಸ್ಥೆಯಲ್ಲಿ ಉಚಿತವಾಗಿ ವಸತಿಯನ್ನು ಒದಗಿಸಲಾಗಿದೆ. ಕಳೆದ ಮೂರು ವರ್ಷಗಳಿಂದ ಫಲಾನುಭವಿಗಳ ಸಂಖ್ಯೆ ಮತ್ತು ವೆಚ್ಚವನ್ನು ಮುಂದಿನ ಪಟ್ಟಿಯಲ್ಲಿ ನಮೂದಿಸಿದೆ.

| ವರ್ಷ | ಫಲಾನುಭವಿಗಳು | ವೆಚ್ಚ (ಲಕ್ಷ ರೂ.ಗಳಲ್ಲಿ) |
|---|---|---|
| ೧೯೯೨-೯೩ | ೫೯ | .೨೩ |
| ೧೯೯೩-೯೪ | ೪೮ | ೦.೯೬ |
| ೧೯೯೪-೯೫ | ೫ | ೧.೦೪ |

ಅಂಗವಿಕಲರಿಗೆ ಅವಶ್ಯ ಸಾಧನಗಳಾದ ತ್ರಿಚಕ್ರದ ಸೈಕಲ್, ಯಂತ್ರ ಚಾಲಿತ ಮೂರು ಚಕ್ರದ ಸೈಕಲ್, ಗಾಲಿ ಇರುವ ಕುರ್ಚಿಗಳು, ಕೃತಕ ಕಾಲುಗಳು, ಪಟ್ಟಿ ಇರುವಂತಹ ಪಾದರಕ್ಷೆಗಳು, ಊರುಗೋಲುಗಳು, ಶ್ರಮ ಸಾಧನಗಳು, ಕುರುಡರಿಗೆ ಓದಲು ಸಹಾಯವಾಗುವ ಉಬ್ಬು ಬರವಣಿಗೆಯ ಸಾಹಿತ್ಯ (ಬ್ರೈಲ್) ಇವೇ ಮುಂತಾದ ಸಲಕರಣೆ ಮತ್ತು ಸಾಧನಗಳನ್ನು ಕೊಳ್ಳಲು ಕುಟುಂಬದ ವಾರ್ಷಿಕ ಆದಾಯ ೮,೦೦೦ ರೂ.ಗಳಿಗಿಂತ ಕಡಿಮೆ ಇದ್ದರೆ ಅದರ ಸಂಪೂರ್ಣ ಬೆಲೆಯನ್ನು ಮತ್ತು ವಾರ್ಷಿಕ ಆದಾಯ ೮,೦೦೦ ರೂ. ನಿಂದ ೧೨,೦೦೦ ರೂ. ವರೆವಿಗಿದ್ದರೆ ಅದರ ಬೆಲೆಯ ಶೇ. ೭೫ ರಷ್ಟನ್ನು ಸರ್ಕಾರವು ನೀಡುತ್ತದೆ.

## ವಕ್ಫ್ ಸಂಸ್ಥೆಗಳು

ಗುಲಬರ್ಗಾ ಜಿಲ್ಲೆಯಲ್ಲಿ ೯೫೪ರ ಕೇಂದ್ರ ವಕ್ಫ್ ಕಾಯ್ದೆಯನ್ನು ೯೫೬ರಲ್ಲಿ ಜಾರಿಗೆ ತರಲಾಯಿತು. ಅನಂತರ ಈ ಕಾಯ್ದೆಗೆ ೧೯೫೯, ೧೯೬೪ ಹಾಗೂ ೧೯೬೮ರಲ್ಲಿ ಸೂಕ್ತ ತಿದ್ದುಪಡಿ ಮಾಡಲಾಯಿತು. ಜಿಲ್ಲೆಯಲ್ಲಿನ ಪ್ರಸ್ತುತ ವಕ್ಫ್ ಆಸ್ತಿ ಪಾಸ್ತಿಗಳ ಆಡಳಿತವನ್ನು ನಿರ್ವಹಿಸಲು ಕರ್ನಾಟಕ ವಕ್ಫ್ ಮಂಡಳಿಯ ಮಾರ್ಗದರ್ಶನದಲ್ಲಿ ಜಿಲ್ಲಾ ವಕ್ಫ್ ಸಮಿತಿ ಕಾರ್ಯ ನಿರ್ವಹಿಸುತ್ತಿದೆ. ಪ್ರಸ್ತುತ ವಕ್ಫ್ ಸಮಿತಿಯು ೯೯೪ರ ಮಾರ್ಚ್ ಒಂದರಂದು ರಚನೆಗೊಂಡಿದೆ.

**ಕೋಷ್ಟಕ ೬**

ಜಿಲ್ಲೆಯಲ್ಲಿನ ತಾಲೂಕುವಾರು ವಕ್ಫ್‌ನ ಆಸ್ತಿಗಳು ಮತ್ತು ಅವುಗಳ ಅಂದಾಜು ಬೆಲೆಯನ್ನು ಸೂಚಿಸುವ ಪಟ್ಟಿ

| ಕ್ರ.ಸಂ. | ತಾಲೂಕುಗಳು | ವಕ್ಫ್ ಸ್ವತ್ತುಗಳ ಸಂಖ್ಯೆ | ಅಂದಾಜು ಬೆಗೆ (ಲಕ್ಷ ರೂ.ಗಳಲ್ಲಿ) |
|---|---|---|---|
| ೧. | ಅಫಜಲ್‌ಪುರ | ೩೪೨ | ೩೧.೮೪ |
| ೨. | ಆಳಂದ | ೪೬೬ | ೨೬.೮೧ |
| ೩. | ಚಿಂಚೋಳಿ | ೩೬೦ | ೧೨.೬೯ |
| ೪. | ಚಿತ್ತಾಪುರ | ೬೫೬ | ೨೪.೭೩ |
| ೫. | ಗುಲಬರ್ಗಾ ನಗರ | ೨೭೫ | ೬೬.೫೫ |
| | ಗ್ರಾಮಾಂತರ | ೫೨೯ | ೨೪.೫೪ |
| ೬. | ಜೇವರ್ಗಿ | ೨೯೦ | ೯.೨೬ |
| ೭. | ಶಹಪುರ | ೨೨೨ | ೨೨,೮೧ |
| ೮. | ಸುರಪುರ | ೨೫ | ೧೧.೨೨ |
| ೯. | ಸೇಡಂ | ೪೭೧ | ೨೪.೦೦ |
| ೧೦. | ಯಾದಗೀರ್ | ೩೬೫ | ೧೩.೩೫ |
| | ಒಟ್ಟು | ೪.೯೧ | ೨೬೭,೯೧ |

ಜಿಲ್ಲೆಯಲ್ಲಿನ ಎಲ್ಲಾ ವಕ್ಫ್ ಸಂಸ್ಥೆಗಳಿಂದ ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ವರ್ಷಕ್ಕೆ ಶೇ. ೬೬ರ ದರದಲ್ಲಿ ವಕ್ಫ್ ವಂತಿಕೆಯು ಕ್ರಮವಾಗಿ ೬೮,೧೫೫ ರೂ. ೫೫,೪೨೧ ರೂ. ಮತ್ತು ೩,೫೮೧ ರೂ.ಗಳನ್ನು ಸಂಗ್ರಹಿಸಲಾಗಿದೆ.

## ತ್ರಿವರ್ಣ ಪಡಿತರ ಚೀಟಿ ಸೌಲಭ್ಯ

ಕರ್ನಾಟಕ ಸರ್ಕಾರವು ೧ನೇ ನವೆಂಬರ್ ೧೯೮೫ರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಕಡು ಬಡಜನರನ್ನು ಗುರ್ತಿಸಿ ಅವರಿಗೆ ಕಡಿಮೆ ದರದಲ್ಲಿ ಆಹಾರ ಧಾನ್ಯಗಳನ್ನು ಕೊಳ್ಳಲು ಅನುಕೂಲವಾಗಲು ಹಸಿರು ಬಣ್ಣದ ಪಡಿತರ ಚೀಟಿಯನ್ನು ಒದಗಿಸುವ ಯೋಜನೆಯನ್ನು ಆರಂಭಿಸಿದೆ. (ಮುಂದೆ ಈ ಪಡಿತರ ಚೀಟಿ ತ್ರಿವರ್ಣದ್ದಾಯಿತು.). ೨೭ನೇ ಡಿಸೆಂಬರ್ ೧೯೮೫ರಿಂದ ಈ ಸೌಲಭ್ಯವನ್ನು ಭೂರಹಿತ ಕೃಷಿ ಕಾರ್ಮಿಕರಿಗೂ ವಿಸ್ತರಿಸಲಾಯಿತು. ಜಿಲ್ಲೆಯಲ್ಲಿ ಈ ಸೌಲಭ್ಯ ೧೫ನೇ ಆಗಸ್ಟ್ ೧೯೯೨ರಿಂದ ಪ್ರಾರಂಭವಾಯಿತು. ಈ ಕಾರ್ಡುಗಳನ್ನು ಹೊಂದಿದವರಿಗೆ ಕೆಲವೊಂದು ಆಹಾರ ಧಾನ್ಯಗಳನ್ನು ರಿಯಾಯಿತಿ ದರದಲ್ಲಿ ಒದಗಿಸಲಾಯಿತು. ಇತ್ತೀಚಿನ ಮೂರು ವರ್ಷಗಳಲ್ಲಿ ಈ ಸೌಲಭ್ಯವನ್ನು ಪಡೆದ ಜನರ ತಾಲೂಕುವಾರು ವಿವರ ಮುಂದಿನ ಪಟ್ಟಿಯಲ್ಲಿ ನೀಡಿದೆ.

| ಕ್ರ.ಸಂ. | ತಾಲೂಕು | ೧೯೯೨-೯೩ರಲ್ಲಿ ತ್ರಿವರ್ಣ ಪಡಿತರ ಚೀಟಿ ಫಲಾನುಭವಿಗಳು | ೧೯೯೩-೯೪ರಲ್ಲಿ | ೧೯೯೪-೯೫ ರಲ್ಲಿ |
|---|---|---|---|---|
| ೧. | ಅಫಜಲ್‌ಪುರ | ೨೩,೩೬೮ | ೨೩,೬೫೧ | ೨೩,೬೩೬ |
| ೨. | ಆಳಂದ | ೨೮,೪೩೮ | ೪೦,೪೮೪ | ೪೦,೮೧೪ |
| ೩. | ಚಿಂಚೋಳಿ | ೨೮,೫೨ | ೩೩,೦೬೦ | ೩೩,೦೯೫ |
| ೪. | ಚಿತ್ತಾಪುರ | ೩,೨೬೦ | ೩೪,೫೩೫ | ೩೪,೬೮೬ |
| ೫. | ಗುಲಬರ್ಗಾ | ೩೬,೬೩೪ | ೩೬,೪೨೮ | ೩೬,೪೨೮ |
| ೬. | ಜೇವರ್ಗಿ | ೩೨,೭೨೮ | ೩೦,೫೪೮ | ೩೨,೦೮೨ |
| ೭. | ಶಹಪುರ | ೨೬,೪೧೫ | ೨೭,೦೨೩ | ೨೯,೮೩೦ |
| ೮. | ಸುರಪುರ | ೨೯,೯೪ | ೨೯,೭೪ | ೨೭,೫೬೩ |
| ೯. | ಸೇಡಂ | ೨೪,,೩೩೩ | ೨೪,೦೭೯ | ೨೫,೯೪೬ |
| ೦. | ಯಾದಗೀರ್ | [illegible]೩,೬೯೮ | ೩೩,೫೨ | ೩೬,೮೮೧ |
| | ಜಿಲ್ಲೆಯ ಒಟ್ಟು | ೨,೯೫,೩೨೭ | ೩೧,೬೭೪ | ೩,೨೦,೯೬೧ |

## ವೃದ್ಧಾಪ್ಯ ವೇತನ

ಕರ್ನಾಟಕ ಸರ್ಕಾರವು ವೃದ್ಧಾಪ್ಯ ವೇತನ ಯೋಜನೆಯನ್ನು ೧೯೬೫ನೇ ಜನವರಿಯಲ್ಲಿ ಆರಂಭಿಸಿತು. ಇದಕ್ಕೆ ಇರಬೇಕಾದ ಅರ್ಹತೆಗಳೆಂದರೆ ವ್ಯಕ್ತಿಯ ಯಾವುದೇ ವಿಧದ ಆದಾಯವು ಇಲ್ಲದೆ ಕನಿಷ್ಟ ೭೦ ವರ್ಷ ವಯಸ್ಸುಳ್ಳವನಾಗಿದ್ದು ಅವನಿಗೆ ೨೦ ವರ್ಷ ಅಥವಾ ಅದಕ್ಕಿಂತ ಹೆಚ್ಚು ವಯಸ್ಸಿನ ಮಕ್ಕಳು ಅಥವಾ ಮೊಮ್ಮಕ್ಕಳು ಇರಬಾರದು. ಅಂಗವಿಕಲನಾದವನಿಗೆ ವಯೋಮಿತಿಯು ಕನಿಷ್ಟ ೬೫ ವರ್ಷ ಆಗಿರಬೇಕು. ಏಪ್ರಿಲ್ ೯೯ರಿಂದ ವೃಧ್ದಾಪ್ಯ ವೇತನದ ದರವನ್ನು ಮಾಸಿಕ ೭೫ ರೂ.ಗಳಿಗೆ ಹೆಚ್ಚಿಸಲಾಯಿತು. ೧೯೮೯-೯೦ ಮೇ ಸಾಲಿನಲ್ಲಿ ಜಿಲ್ಲೆಯಲ್ಲಿ ೫೨,೬೪೩ ಫಲಾನುಭವಿಗಳು ಈ ಸೌಲಭ್ಯವನ್ನು ಪಡೆದಿರುತ್ತಾರೆ. ಇತ್ತೀಚಿನ ಮೂರು ವರ್ಷಗಳಲ್ಲಿ ಈ ಸೌಲಭ್ಯವನ್ನು ಪಡೆದ ಜನರ ತಾಲುಕುವಾರು ಮಾಹಿತಿಯನ್ನು ಮುಂದಿನ ಪಟ್ಟಿಯಲ್ಲಿ ನೀಡಿದೆ.

| ಕ್ರ.ಸಂ. | ತಾಲೂಕು | ೯೯-೯೨ | ೯೨-೯೩ | ೯೩-೯೪ | ೯೪-೯೫ |
|---|---|---|---|---|---|
| ೧. | ಅಫಜಲ್‌ಪುರ | ೨,೯೨೨ | ೨,೯೪೭ | ೧,೨೭೦ | ೧,೩೬೯ |
| ೨. | ಆಳಂದ | ೬,೮೯೩ | ೮,೬೯೭ | ೭,೬೫ | ೮,೦೩೧ |
| ೩. | ಚಿಂಚೋಳಿ | ೩,೬೮೩ | ೩,೭೩೭ | ೧೫,೧೧ | ೧,೫೧೬ |
| ೪. | ಚಿತ್ತಾಪುರ | ೬,೧೨೨ | ೬೧,೯೬ | ೩,೫೦೧ | ೩,೬೫೦ |
| ೫. | ಗುಲಬರ್ಗಾ | ೧,೬೬೮ | ೧೨,೩೩ | ೮,೫೨೩ | ೯,೦೭೨ |
| ೬. | ಜೇವರ್ಗಿ | ೪,೧೪೫ | ೪,೪೪೬ | ,೮೭೪ | ೨,೮೩ |

| | | | | | |
|---|---|---|---|---|---|
| ೭. | ಸೇಡಂ | ೩,೬೫ | ೩,೨೦೫ | ೧,೬೯೬ | ೧,೭೫೯ |
| ೮. | ಶಹಪುರ | ೬,೦೨೭ | ೬,೦೪೯ | ೨,೨೮೯ | ೨,೩೯೦ |
| ೯. | ಸುರಪುರ | ೫,೭೭೦ | ೫,೮೧ | ೨,೮೧೦ | ೨,೯೫೦ |
| ೧೦. | ಯಾದಗಿರಿ | ೬,೩೧೨ | ೬,೫೧೯ | ೩,೮೩೫ | ೩,೯೦೦ |
| | ಜಿಲ್ಲೆಯ ಒಟ್ಟು | ೫೬,೭೦೭ | ೫೯,೯೩೮ | ೩೪,೯೨೪ | ೩೭,೪೫೦ |

೧೯೯೫-೯೬ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ೩೮,೮೮೦ ಫಲಾನುಭವಿಗಳು ಇದರ ಸೌಲಭ್ಯ ಪಡೆದು ಇದಕ್ಕಾದ ವೆಚ್ಚ ೩೭೩.೦೪ ಲಕ್ಷ ರೂ.ಗಳೂ, ೧೯೯೬-೯೭ನೇ ಸಾಲಿನಲ್ಲಿ ೪೦,೨೩೬ ಫಲಾನುಭವಿಗಳಿಗಾದ ವೆಚ್ಚ ರೂ. ೩೮೦.೯೩ ಲಕ್ಷ ರೂ.ಗಳಾಗಿದೆ.

## ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಯೋಜನೆ

ಕರ್ನಾಟಕ ಸರ್ಕಾರವು ೫ನೇ ಆಗಸ್ಟ್ ೯೮೫ರಂದು ಬಡತನ ರೇಖೆಯಿಂದ ಕೆಳಮಟ್ಟದಲ್ಲಿರುವ ದುರ್ಬಲ ವರ್ಗದ ೯ ವರ್ಷಕ್ಕೆ ಮೇಲ್ಪಟ್ಟ ಗಂಡಸರಿಗೆ ಮತ್ತು ಹೆಂಗಸರಿಗೆ ಕಡಿಮೆ ದರದಲ್ಲಿ ಬಟ್ಟೆ ವಿತರಣೆ ಮಾಡುವ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಂತೆ ೨೫ ರೂ.ಗೆ ಒಂದು ಜೊತೆ ಪಂಚೆ (ಧೋತಿ) ಮತ್ತು ಒಂದು ಷರ್ಟ್ ಬಟ್ಟೆಯನ್ನು ಗಂಡಸರಿಗೂ ಮತ್ತು ೨೫ ರೂ.ಗೆ ಒಂದು ಜೊತೆ ಸೀರೆ ಮತ್ತು ಒಂದು ಜೊತೆ ರವಿಕೆ ಬಟ್ಟೆಯನ್ನು ಹೆಂಗಸರಿಗೂ ವಿತರಿಸಲಾಗುವುದು. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯಡಿಯಲ್ಲಿ ಬರುವ ಹಾಗೂ ಹಸಿರು ಪಡಿತರ ಚೀಟಿಯ ಸೌಲಭ್ಯವನ್ನು ಪಡೆಯುವವರೆಲ್ಲರಿಗೂ ಈ ಯೋಜನೆಯು ಅನ್ವಯವಾಗುತ್ತದೆ. ೧೯೯೨-೯೩, ೧೯೯೩-೯೪ ಮತ್ತು ೧೯೯೪-೯೫ನೇ ಸಾಲುಗಳಲ್ಲಿ ಫಲಾನುಭವಿಗಳ ವಿವರವನ್ನು ಮುಂದಿನ ಪಟ್ಟಿಯಲ್ಲಿ ನೀಡಿದೆ.

## ಸ್ವಾತಂತ್ರ್ಯಯೋಧರ ವೇತನ

ಸ್ವಾತಂತ್ರ್ಯಯೋಧರಿಗೆ ಮತ್ತು ಅವರ ವಿಧವೆಯರಿಗೆ ಪಿಂಚಣಿ ಕೊಡುವ ಯೋಜನೆಯನ್ನು ಕರ್ನಾಟಕ ಸರ್ಕಾರವು ರಾಜ್ಯ ಸ್ವಾತಂತ್ರ್ಯ ಯೋಧರ ಕಲ್ಯಾಣ ನಿಯಮಗಳು, ೧೯೬೭ ಇದರನ್ವಯ ೧೯೬೮ರಲ್ಲಿ ಜಾರಿಗೊಳಿಸಿತ್ತು. ೧೯೬೯ರಲ್ಲಿ ಇದನ್ನು ತಿದ್ದುಪಡಿ ಮಾಡಲಾಯಿತು. ಪ್ರಾರಂಭದಲ್ಲಿ ಪಿಂಚಣಿಯು ತಿಂಗಳಿಗೆ ೫೦ ರೂ. ಇದ್ದು ಕ್ರಮೇಣ ಹೆಚ್ಚುತ್ತಾ ೧೯೯೪ರಲ್ಲಿ ೫೦೦ ರೂ.ಗಳಿಗೆ ಹೆಚ್ಚಿಸಲಾಗಿದೆ.

ಭಾರತ ಸರ್ಕಾರವು ೧೯೭೨ರಲ್ಲಿ ಸ್ವಾತಂತ್ರ್ಯ ಯೋಧರಿಗೆ ಮಾಸಿಕವಾಗಿ ೨೦೦ ರೂ. ವಿಶ್ರಾಂತಿ ವೇತನವನ್ನು ನೀಡುವ ಯೋಜನೆಯನ್ನು ಜಾರಿಗೆ ತಂದಿತು. ಆರಂಭದಲ್ಲಿ ಪಿಂಚಣಿಯ ೨೦೦ ರೂ.ನಲ್ಲಿ ರಾಜ್ಯ ಸರ್ಕಾರದ ೭೫ ರೂ. ಮಾಸಿಕ ವಿಶ್ರಾಂತಿ ವೇತನವನ್ನು ಸೇರಿಸಲಾಗಿದ್ದು, ೧೯೭೬ ರಲ್ಲಿ ಭಾರತ ಸರ್ಕಾರವು ರಾಜ್ಯ ಸರ್ಕಾರವು ನೀಡುವ ವಿಶ್ರಾಂತಿ ವೇತನವನ್ನು ಗಣನೆಗೆ ತೆಗೆದುಕೊಳ್ಳದೇ ೨೦೦ ರೂ. ಪಿಂಚಣಿಯನ್ನು ನೀಡಲು ನಿರ್ಧರಿಸಿತು. ೧೯೭೭ರಲ್ಲಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದಿಂದ ಪಡೆಯುತ್ತಿದ್ದ ಪಿಂಚಣಿದಾರರಿಗೆ ಪಿಂಚಣಿ ನೀಡುವುದನ್ನು ನಿಲ್ಲಿಸಿತು. ಆದರೆ ೧೯೭೯ರಲ್ಲಿ ಅದನ್ನು ಮತ್ತೆ ಜಾರಿಗೆ ತರಲಾಯಿತು. ೧೯೮೦ರಲ್ಲಿ ಭಾರತ ಸರ್ಕಾರವು ಸ್ವಾತಂತ್ರ್ಯ ಯೋಧರ ಪಿಂಚಣಿ ಯೋಜನೆಯನ್ನು ಸ್ವಾತಂತ್ರ್ಯ ಸೈನಿಕ ಸನ್ಮಾನ ಪಿಂಚಣಿ ಯೋಜನೆ ಎಂದು ಪುನರ್ನಾಮಕರಣ ಮಾಡಿ ಮಾಸಿಕ ಪಿಂಚಣಿಯ ದರವನ್ನು ೩೦೦ ರೂ.ಗಳಿಗೆ ಏರಿಸಲಾಗಿದ್ದು ೧೯೯೪ ರಲ್ಲಿ ೫೦೦ ರೂ.ಗೆ ಹೆಚ್ಚಿಸಲಾಯಿತು. ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ಯೋಜನೆಯು ೧೯೭೧ರಲ್ಲಿ ಮತ್ತು ಕೇಂದ್ರ ಸರ್ಕಾರದ ಯೋಜನೆಯು ೧೯೭೨ರಲ್ಲಿ ಆರಂಭವಾಗಿದ್ದು ಈ ವರ್ಷಗಳಲ್ಲಿ ಕ್ರಮವಾಗಿ ೦೦ ಸ್ವಾತಂತ್ರ್ಯಯೋಧರು ರಾಜ್ಯ ಸರ್ಕಾರದ ಪಿಂಚಣಿಯನ್ನು ಮತ್ತು ೬೬ ಸ್ವಾತಂತ್ರ್ಯಯೋಧರು ಕೇಂದ್ರ ಸರ್ಕಾರದ ಪಿಂಚಣಿಯನ್ನು ಪಡೆಯುತ್ತಿದ್ದರು. ೧೯೯೫-೯೬ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ರಾಜ್ಯ ಸರ್ಕಾರದ ೮೫೩ ಪಿಂಚಣಿದಾರರೂ ಮತ್ತು ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಆದ ವೆಚ್ಚ ಕ್ರಮವಾಗಿ ೫೮.೨೭ ಲಕ್ಷ ರೂ. ಮತ್ತು ೯.೫೧ ಲಕ್ಷ ರೂ.ಗಳಾಗಿವೆ. ೧೯೯೬-೯೭ನೇ ಸಾಲಿನಲ್ಲಿ ರಾಜ್ಯ ಸರ್ಕಾರದ ಪಿಂಚಣಿದಾರರಿಗೆ ಆದ ವೆಚ್ಚ ೪೯.೬೦ ಲಕ್ಷ ರೂ. ಮತ್ತು ಕೇಂದ್ರ ಸರ್ಕಾರದ ಪಿಂಚಣಿದಾರರಿಗೆ ಆದ ವೆಚ್ಚ ೦.೮೭ ಲಕ್ಷ ರೂ.ಗಳಾಗಿವೆ.

## ಕಡಿಮೆ ದರದ ಬಟ್ಟೆ ವಿತರಣೆಯೋಜನೆಯಡಿಯಲ್ಲಿ ಗುಲ್ಬರ್ಗಾ ಜಿಲ್ಲೆಯ ಫಲಾನುಭವಿಗಳ ವಿವರ

| ಕ್ರ. ಸಂ. | ತಾಲೂಕುಗಳು | ೧೯೯೨-೯೩ | | ೧೯೯೩-೯೪ | | ೧೯೯೪-೯೫ | |
|---|---|---|---|---|---|---|---|
| | | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು | ಗಂಡಸರು | ಹೆಂಗಸರು |
| ೧. | ಅಫಜಲ್‌ಪುರ | ೯,೬೨೬ | ೧೦,೧೧೦ | ೫,೩೦೬ | ೬,೮೫೬ | ೧೪,೬೧೧ | ೮,೫೨೧ |
| ೨. | ಆಳಂದ | ೧೯,೮೫೩ | ೧೯,೮೫೩ | ೯,೭೮೬ | ೧೧,೧೩೫ | ೧೩,೩೧೧ | ೮,೧೦೦ |
| ೩. | ಚಿಂಚೋಳಿ | ೧೯,೧೩೯ | ೧೯,೫೭೫ | ೧೮,೪೫೧ | ೧೬,೮೪೯ | ೨೧,೯೯೫ | ೮,೨೦೦ |
| ೪. | ಚಿತ್ತಾಪುರ | ೧೩,೫೧೮ | ೧೪,೨೬೩ | ೯,೨೮೦ | ೭,೫೨೦ | ೩೧,೯೫೦ | ೧೪,೫೦೦ |
| ೫. | ಗುಲ್ಬರ್ಗಾ | ೧೪,೯೭೭ | ೧೪,೯೬೯ | ೧೩,೩೮೧ | ೧೩,೪೬೬ | ೧೭,೬೮೬ | ೫,೨೮೫ |
| ೬. | ಜೇವರ್ಗಿ | ೧೩,೯೬೮ | ೧೩,೫೩೦ | ೧೦,೧೭೪ | ೬,೫೭೧ | ೧೬,೩೨೩ | ೬,೮೩೦ |
| ೭. | ಸೇಡಂ | ೧೩,೭೯೮ | ೧೫,೫೦೧ | ೧೩,೧೬೮ | ೧೬,೭೯೯ | ೧೯,೨೭೧ | ೧೨,೬೬೦ |
| ೮. | ಶಹಪುರ | ೫,೪೦೦ | ೬,೪೦೦ | ೧೪,೨೫೦ | ೧೦,೦೦೦ | ೨೩,೧೦೦ | ೧೧,೨೦೦ |
| ೯. | ಸುರಪುರ | ೯,೪೪೦ | ೧೦,೪೭೫ | ೧೨,೭೪೧ | ೧೧,೨೬೬ | ೩೧,೧೯೮ | ೧೬,೩೨೫ |
| ೧೦. | ಯಾದಗೀರ್ | ೯,೨೪೮ | ೯,೩೦೨ | ೯,೭೬೪ | ೯,೨೮೮ | ೨೫,೬೬೭ | ೧೨,೮೬೨ |
| | ಒಟ್ಟು | ೧,೩೮,೯೬೭ | ೧,೩೨,೯೭೮ | ೧,೧೬,೨೫೧ | ೧,೦೯,೭೪೯ | ೨,೧೫,೧೧೨ | ೧,೦೪,೪೮೩ |

## ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳು

ಜಿಲ್ಲೆಯಲ್ಲಿನ ಎಲ್ಲಾ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳ ಆಡಳಿತವನ್ನು ನೋಡಿಕೊಳ್ಳುವ ಹೊಣೆ ನಿರ್ದೇಶಕರಾಗಿ ಜಿಲ್ಲಾಧಿಕಾರಿಗಳು ಮತ್ತು ತಾಲೂಕಿನ ಧಾರ್ಮಿಕ ದತ್ತಿ ಸಂಸ್ಥೆಗಳ ನಿರ್ದೇಶಕರಾಗಿ ತಾಲೂಕಿನ ತಹಶೀಲ್ದಾರರು ಕಾರ್ಯ ನಿರ್ವಹಿಸುತ್ತಾರೆ. ಧಾರ್ಮಿಕ ದತ್ತಿ ವಹಿಯ ಪ್ರಕಾರ ೧೯೫೦ರಿಂದ ಇಲ್ಲಿಯವರೆಗೆ ಜಿಲ್ಲೆಯಲ್ಲಿ ೩೭೭೧ ಸಂಸ್ಥೆಗಳು ನೊಂದಣಿಯಾಗಿವೆ. ಅವುಗಳ ತಾಲೂಕುವಾರು ವಿವರ ಕೆಳಗಿನಂತಿದೆ.

| ಕ್ರಮ ಸಂಖ್ಯೆ | ತಾಲೂಕು | ದತ್ತಿ ಸಂಸ್ಥೆಗಳು |
|---|---|---|
| ೧. | ಗುಲಬರ್ಗಾ | ೪೧೬ |
| ೨. | ಆಳಂದ | ೩೮೨ |
| ೩. | ಅಫಜಲ್‌ಪುರ | ೩೮೨ |
| ೪. | ಜೇವರ್ಗಿ | ೨೫೩ |
| ೫. | ಯಾದಗೀರ್ | ೩೦೭ |
| ೬. | ಶಹಪುರ | ೩೬ |
| ೭. | ಸುರಪುರ | ೮೬೧ |
| ೮. | ಸೇಡಂ | ೧೩೫ |
| ೯. | ಚಿತ್ತಾಪುರ | ೩೭೧ |
| ೧೦. | ಚಿಂಚೋಳಿ | ೨೯೫ |
| | ಜಿಲ್ಲೆಯ ಒಟ್ಟು | ೩೭೭೧ |

## ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ

ಗುಲಬರ್ಗಾದಲ್ಲಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯು ಆಗಸ್ಟ್ ೧೯೭೨ರಲ್ಲಿ ಸ್ಥಾಪನೆಯಾಯಿತು. ೧೯೯೨-೯೩ನೇ ಸಾಲಿನಲ್ಲಿ ಯುದ್ಧ ಯೋಧರ ವಿಧವೆಯರಿಗಾಗಿ (೩) ಮತ್ತು ನಿರಾಶ್ರಿತ ಮಾಜಿ ಸೈನಿಕರ ವಿಧವೆಯರಿಗಾಗಿ (೩) ಆದ ವೆಚ್ಚ ೧೯,೪೦೦ ರೂ., ೧೯೯೩-೯೪ನೇ ಸಾಲಿನಲ್ಲಿ ಯೋಧರ ಕುಟುಂಬ ಪಿಂಚಣಿ, ಯೋಧರ ಕುಟುಂಬ ಕಲ್ಯಾಣಕ್ಕಾಗಿ, ನಿವೃತ್ತ ಸೈನಿಕರ ಕಲ್ಯಾಣ, ಯೋಧರ ಮಕ್ಕಳ ವಿದ್ಯಾಭ್ಯಾಸ, ಯುದ್ಧ ಯೋಧರ ವಿಧವೆಯರು, ಹಾಗೂ ಯೋಧರ ಕುಟುಂಬದವರ ಕುಂದು ಕೊರತೆಗಳಿಗಾಗಿ ಧನ ಸಹಾಯ ಮಾಡಿದ್ದಕ್ಕಾಗಿ ಆದ ವೆಚ್ಚ ರೂ. ೫೫,೩೭೫ ವೆಚ್ಚ ಮಾಡಿದೆ. ೧೯೯೪-೯೫ನೇ ಸಾಲಿನಲ್ಲಿ ಯೋಧರ ಕುಟುಂಬದವರಿಗೆ ಸ್ವಯಂ ಉದ್ಯೋಗ, ವಿಧವೆಯರು, ನೌಕರಿ ಕೊಡಿಸಲು ಕುಂದು ಕೊರತೆಗಳನ್ನು ನಿವಾರಿಸಲು ಆದ ವೆಚ್ಚ ರೂ. ೪೬,೯೫ ವೆಚ್ಚವಾಗಿದೆ.

## ರೋಟರಿ ಕ್ಲಬ್ ಗುಲಬರ್ಗಾ ಸಿಟಿ

ಗುಲಬರ್ಗಾ ರೋಟರಿ ಕ್ಲಬ್ ೧೯೫೪ರಲ್ಲಿ ಸ್ಥಾಪನೆಯಾಗಿದ್ದು, ರಾಷ್ಟ್ರೀಯ ಹಾಗೂ ವಿಶ್ವಶಾಂತಿಗಾಗಿ ದುಡಿಯುವುದೇ ಇದರ ಉದ್ದೇಶವಾಗಿದೆ. ಈ ಸಂಸ್ಥೆಯು ಪ್ರಾಥಮಿಕ ಹಂತದಿಂದ ಪ್ರೌಢಶಾಲಾ ಹಂತದ ವರೆಗೆ ಕನ್ನಡ ಮಾಧ್ಯಮದಲ್ಲಿ ಶಾಲೆಗಳನ್ನು ನಡೆಸಲಾಗಿದ್ದು, ೯೦೦ ವಿದ್ಯಾರ್ಥಿಗಳನ್ನು ಹೊಂದಿದೆ. ಈ ಸಂಸ್ಥೆಯು ಪ್ರತಿವರ್ಷ ನೇತ್ರ ಚಿಕಿತ್ಸಾ ಶಿಬಿರಗಳನ್ನು, ಇ.ಸಿ.ಜಿ. ಮತ್ತು ಪೊಲಿಯೋ ಪ್ಲಸ್ ಕ್ಯಾಂಪ್‌ಗಳನ್ನು, ಸಿಹಿಮೂತ್ರ ರೋಗಗಳಿಗೆ ವೈದ್ಯಕೀಯ ಸಲಹೆಗಳನ್ನು ನೀಡುವುದು, ಹೊರದೇಶಗಳಾದ ಅಮೇರಿಕಾ, ಇಂಗ್ಲಂಡ್, ಆಸ್ಟ್ರೇಲಿಯಾ, ಕೆನಡಾ, ಬ್ರೆಜಿಲ್‌ಗಳೊಂದಿಗೆ ಸಂಸ್ಕೃತಿ, ಸದ್ಭಾವನೆಗಳನ್ನು ಬೆಳೆಸುವ ಸಲುವಾಗಿ ಪ್ರತಿವರ್ಷ ಒಂದು ವಿಚಾರವಿನಿಮಯವನ್ನು ಏರ್ಪಡಿಸುವುದು.